ಸೋಮವಾರ, ಏಪ್ರಿಲ್ 3, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 92 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕಚ್ಚಾ ತೈಲ ಶೇ 33ರಷ್ಟು ಅಗ್ಗ ಗ್ರಾಹಕನಿಗೆ ಸಿಗದ ಲಾಭ

ಹೂಗ್ಲಿ: ಭುಗಿಲೆದ್ದ ಹಿಂಸಾಚಾರ 11
67 ಕೋಟಿ ಜನರ ದತ್ತಾಂಶ ಕಳವು 11
ಅಮೆರಿಕ, ಜರ್ಮನಿಗೆ ಸಚಿವ ಜೈಶಂಕರ್ ತಿರುಗೇಟು
ಮೂಗು ತೂರಿಸುವುದನ್ನು ನಿಲ್ಲಿಸಿ 10

ಪ್ರಮುಖ ಮೂರು ಪಕ್ಷಗಳಿಗೂ ಎದುರಾದ ಅಗ್ನಿಪರೀಕ್ಷೆ

ಅಭ್ಯರ್ಥಿಗಳ ಆಯ್ಕೆ ಕಗ್ಗಂಟು

ಬಿಜೆಪಿ,ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಬಿರುಸುಗೊಂಡಿದೆ. ಜಿಲ್ಲೆಗಳಲ್ಲಿ ಈ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಬೆದರಿಕೆ ತಂತ್ರ ಅನುಸರಿಸುತ್ತಿದ್ದಾರೆ. ಎರಡನೇ ಪಟ್ಟಿ ಪ್ರಕಟಗೊಳಿಸಲು ಕಾಂಗ್ರೆಸ್ ಸಜ್ಜಾಗುತ್ತಿದ್ದು, ಟಿಕೆಟ್ ಗಿಟ್ಟಿಸಿಕೊಳ್ಳಲು ಆಕಾಂಕ್ಷಿಗಳು ತಮ್ಮ ನಾಯಕರ ಮೇಲೆ ಒತ್ತಡ ಹೇರಲಾರಂಭಿಸಿದ್ದಾರೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಮಾಣಿಕ, ಪ್ರಬಲ ಮತ್ತು ನಿಷ್ಠೆಯಿಂದ ಕೆಲಸ ಮಾಡುವವರಿಗೇ ಟಿಕೆಟ್ ನೀಡಬೇಕು. ಹಳೆ ಮುಖಗಳನ್ನು ಕೈಬಿಟ್ಟು, ಹೊಸಬರಿಗೇ ಅವಕಾಶ ನೀಡಬೇಕು ಎಂದು ಬಿಜೆಪಿಯ ವಿವಿಧ ಜಿಲ್ಲೆಗಳ ಪ್ರಮುಖ ನಾಯಕರ ಸಭೆ (ಜಿಲ್ಲಾ ಕೋರ್ ಕಮಿಟಿ)ಯಲ್ಲಿ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ನಗರದ ಹೊರವಲಯದ ರೆಸಾರ್ಟ್‌ವೊಂದರಲ್ಲಿ ಭಾನುವಾರ ರಾತ್ರಿವರೆಗೆ ಜಿಲ್ಲಾ ಕೋರ್ ಕಮಿಟಿ ಸಭೆ ನಡೆಯಿತು. ಈ ಸಭೆಯಲ್ಲಿ ಆಯಾಯ ಜಿಲ್ಲೆಗಳ ವಿವಿಧ ವಿಧಾನಸಭಾ ಕ್ಷೇತ್ರಗಳ ಪ್ರಬಲ ಅಭ್ಯರ್ಥಿಗಳ ಹೆಸರು ಚರ್ಚೆಗೆ ಬಂದಿತು. ಸೋಮವಾರ ರಾತ್ರಿ ಅಥವಾ ಮಂಗಳವಾರ ರಾಜ್ಯ ಪ್ರಮುಖ ನಾಯಕರ ಸಭೆ ನಡೆಯಲಿದೆ. ಇದರಲ್ಲಿ ಪಾಲ್ಗೊಳ್ಳಲು ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಅವರು ಸೋಮವಾರ ಬೆಂಗಳೂರಿಗೆ ಬರಲಿದ್ದಾರೆ.

6ನೇ ಪುಟ ನೋಡಿ

‘ಕೈ’ ಟಿಕೆಟ್‌ಗೆ ಪಟ್ಟು: ನಾಯಕರ ಮನೆಗೆ ದೌಡು

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟಿಸಲು ಕಾಂಗ್ರೆಸ್ ತಯಾರಿ ನಡೆಸುತ್ತಿದ್ದಂತೆ, ಟಿಕೆಟ್ ಗಿಟ್ಟಿಸಿಕೊಳ್ಳಲು ಆಕಾಂಕ್ಷಿಗಳು ತಮ್ಮ ನಾಯಕರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮನೆಗೆ ದೌಡಾಯಿಸುತ್ತಿದ್ದಾರೆ. ಕೆಲವರು ಬೆಂಬಲಿಗರ ಮೂಲಕ ಒತ್ತಡ ಹೇರುತ್ತಿದ್ದಾರೆ.

ಈಗಾಗಲೇ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕಾಂಗ್ರೆಸ್ ಘೋಷಿಸಿದೆ. ಟಿಕೆಟ್ ಘೋಷಣೆಯಾಗಿರುವ ಕ್ಷೇತ್ರಗಳಲ್ಲಿ ದೊಡ್ಡಮಟ್ಟದ ವಿರೋಧ ವ್ಯಕ್ತವಾಗಿಲ್ಲ. ಆದರೆ, ಉಳಿದ 100 ಕ್ಷೇತ್ರಗಳ ಪೈಕಿ ಅರ್ಧಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಪ್ರಬಲ ಆಕಾಂಕ್ಷಿಗಳಿದ್ದಾರೆ. ಹೀಗಾಗಿ, ಅಭ್ಯರ್ಥಿ ಹೆಸರು ಅಂತಿಮಗೊಳಿಸುವುದು ಕಾಂಗ್ರೆಸ್ ನಾಯಕರಿಗೆ ಕಗ್ಗಂಟಾಗಿದೆ.

ಎಐಸಿಸಿ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಸಭೆ ಇದೇ 4ರಂದು ದೆಹಲಿಯಲ್ಲಿ ನಡೆಯಲಿದೆ. ಸ್ಕ್ರೀನಿಂಗ್ ಸಮಿತಿ ಶಿಫಾರಸು ಮಾಡಿದ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಯಲಿದೆ. ಅಲ್ಲದೆ, ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರು ಅಂತಿಮಗೊಳ್ಳುವ ನಿರೀಕ್ಷೆಯಿದೆ. ನಂತರ ಎರಡು ಮೂರು ದಿನಗಳಲ್ಲಿ ಎರಡನೇ ಪಟ್ಟಿ ಪ್ರಕಟವಾಗುವ ಇದೆ ಎಂದು ಕಾಂಗ್ರೆಸ್ ಹಿರಿಯ ನಾಯಕರೊಬ್ಬರು ಹೇಳಿದರು.

6ನೇ ಪುಟ ನೋಡಿ

ಎರಡನೇ ಪಟ್ಟಿ ಇಂದು: ಕುಮಾರಸ್ವಾಮಿ

ಬೆಂಗಳೂರು: ಎಲ್ಲ ಪಕ್ಷಗಳಿಗಿಂತ ಮೊದಲೇ 93 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದ್ದ ಜೆಡಿಎಸ್, ಹಾಸನ ಟಿಕೆಟ್ ಗೊಂದಲದ ಕಾರಣಕ್ಕೆ ಎರಡನೇ ಪಟ್ಟಿ ಘೋಷಣೆಯನ್ನು ತಡೆಹಿಡಿದಿದೆ.

ಹಾಸನ ಕ್ಷೇತ್ರದ ಟಿಕೆಟ್ ಯಾರಿಗೆ ನೀಡಬೇಕೆಂಬ ಬಗ್ಗೆ ಚರ್ಚಿಸಲು ಪದ್ಮನಾಭನಗರದಲ್ಲಿರುವ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರ ಮನೆಯಲ್ಲಿ ಭಾನುವಾರ ರಾತ್ರಿ ಸಭೆ ನಡೆಯಿತು. ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಶಾಸಕ ಎಚ್‌.ಡಿ. ರೇವಣ್ಣ, ಭವಾನಿ ರೇವಣ್ಣ ಭಾಗವಹಿಸಿದರು.

ಸಭೆಗೂ ಮೊದಲ ಮಾತನಾಡಿದ ಕುಮಾರಸ್ವಾಮಿ, ‘ಸೋಮವಾರ ಎರಡನೇ ಪಟ್ಟಿ ಬಿಡುಗಡೆ ಮಾಡುತ್ತೇವೆ. ಹಾಸನ ಟಿಕೆಟ್ ಗೊಂದಲ ಸಣ್ಣ ವಿಷಯ. ಅದನ್ನೂ ಪರಿಹರಿಸಿಕೊಂಡು ಟಿಕೆಟ್ ಘೋಷಣೆ ಮಾಡುತ್ತೇವೆ’ ಎಂದರು.

ಕಾಂಗ್ರೆಸ್, ಬಿಜೆಪಿಯಿಂದ ಈಗಾಗಲೇ ಕೆಲವು ನಾಯಕರು ಜೆಡಿಎಸ್‌ನತ್ತ ಮುಖ ಮಾಡಿದ್ದಾರೆ. ಅವರನ್ನೂ ಒಳಗೊಂಡಂತೆ, ಆ ಪಕ್ಷಗಳಿಂದ ಟಿಕೆಟ್ ಸಿಗದೆ ಮುನಿಸಿಕೊಂಡವರನ್ನು ಸೆಳೆದು ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಜೆಡಿಎಸ್ ಮುಂದಾಗಿದೆ.

ಪಂಚ ಮಹಾರಥೋತ್ಸವ ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಭಾನುವಾರ ನಡೆದ ಶ್ರೀಕಂಠೇಶ್ವರ ಪಂಚ ಮಹಾರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಜಾನುವಾರು ಸಾಗಣೆ: ಇದ್ರೀಷ್ ಅನುಮಾನಾಸ್ಪದ ಸಾವು

ಪುನೀತ್ ಕೆರೆಹಳ್ಳಿ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಸಾತನೂರು ಸಮೀಪ ಶುಕ್ರವಾರ ತಡರಾತ್ರಿ ಅನುಮಾನಾಸ್ಪದವಾಗಿ ಮೃತಪಟ್ಟ ಇದ್ರೀಷ್ ಪಾಷ (45) ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕೆರೆಹಳ್ಳಿ ವಿರುದ್ಧ ಪ್ರಕರಣ ದಾಖಲಾಗಿದೆ.

‘ಇದ್ರೀಷ್ ಮದ್ದೂರು ಸಮೀಪದ ತೆಂಡೆಕೆರೆ ಸಂತೆಯಲ್ಲಿ ಜಾನುವಾರುಗಳನ್ನು ಖರೀದಿಸಿ ರಸೀದಿ ಸಮೇತ ಒಯ್ಯುತ್ತಿದ್ದರು. ಈ ಸಂದರ್ಭ ಸಾತನೂರಿನ ಸಂತೆಮಾಳ ಸರ್ಕಲ್‌ನಲ್ಲಿ ಅವರನ್ನು ಅಡ್ಡಗಟ್ಟಿದ ಪುನೀತ್ ಮತ್ತು ಸಹಚರರು ₹2 ಲಕ್ಷಕ್ಕೆ ಬೇಡಿಕೆ ಇಟ್ಟರು. ಹಣ ನೀಡದಿದ್ದಾಗ ಮಾರಕಾಸ್ತ್ರ ತೋರಿಸಿ ಬೆದರಿಸಿ ಹಲ್ಲೆ ನಡೆಸಿದರು. ಪೊದೆಯಲ್ಲಿ ಅವಿತಿದ್ದ ಇದ್ರೀಷ್ ಅವರನ್ನು ಎಳೆತಂದು ಹಲ್ಲೆ ನಡೆಸಿ ಕೊಂದಿದ್ದಾರೆ’ ಎಂದು ಆರೋಪಿಸಿ ಅವರ ಸಂಬಂಧಿ ಯುನುಸ್ ಪಾಷ ಎಂಬುವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

4ನೇ ಪುಟ ನೋಡಿ

ಗೋರಕ್ಷಣೆ ಹೆಸರಲ್ಲಿ ನಡೆದ ಹತ್ಯೆಯ ತನಿಖೆಯಾಗಲಿ: ಸಿದ್ದರಾಮಯ್ಯ

ಬೆಂಗಳೂರು: ‘ಕನಕಪುರ ತಾಲ್ಲೂಕಿನ ಸಾತನೂರು ಬಳಿ ಗೋರಕ್ಷಣೆ ಹೆಸರಲ್ಲಿ ನಡೆದ ಯುವಕನ ಹತ್ಯೆ ಕೇವಲ ಹುಚ್ಚಾಟ ಆಗಿರಲಾರದು. ಇದು ಚುನಾವಣಾ ದಿನಗಳಲ್ಲಿ ಕೋಮುದ್ವೇಷವನ್ನು ಬಡಿದೆಬ್ಬಿಸುವ ಯೋಜಿತ ಸಂಚಿನ ಭಾಗವಾಗಿರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣದ ಕೂಲಂಕಷ ತನಿಖೆ ನಡೆಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಸರಣಿ ಟ್ವೀಟ್ ಮಾಡಿರುವ ಅವರು, ‘ಧರ್ಮ ರಕ್ಷಣೆ ಹೆಸರಲ್ಲಿ ರಾಜ್ಯ ಬಿಜೆಪಿ ಸರ್ಕಾರ ಬೆಳೆಸಿದ ಗೂಂಡಾ ಸಂಸ್ಕೃತಿಗೆ ಈ ಹತ್ಯೆ ಸಾಕ್ಷಿ. ಈ ಹತ್ಯೆಯ ಹೊಣೆಯನ್ನು ಆರಗ ಜ್ಞಾನೇಂದ್ರ ಅವರಂಥ ಅಸಮರ್ಥ ಗೃಹ ಸಚಿವರೇ ಹೊರಬೇಕು’ ಎಂದಿದ್ದಾರೆ.

4ನೇ ಪುಟ ನೋಡಿ

ಆರೋಪಿಗಳ ಬಂಧನಕ್ಕೆ ಎಚ್‌ಡಿಕೆ ಒತ್ತಾಯ

ಘಟನೆ ಖಂಡಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಸರಣಿ ಟ್ವೀಟ್ ಮಾಡಿದ್ದು, ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿದ್ದಾರೆ.

‘ಸಾತನೂರು ಬಳಿ ಜಾನುವಾರು ಸಾಗಣೆ ಮಾಡುತ್ತಿದ್ದ ಕಾರಣಕ್ಕೆ ಯುವಕನೊಬ್ಬ ಹತ್ಯೆಗೀಡಾಗಿದ್ದಾನೆ. ಇದು ಸರ್ವಜನಾಂಗದ ಶಾಂತಿಯ ತೋಟವಾದ ಕರ್ನಾಟಕದಲ್ಲಿ ಕಳೆದ ಮೂರೂವರೆ ವರ್ಷದಲ್ಲಿ ಬಿಜೆಪಿ ಸರ್ಕಾರ ವ್ಯವಸ್ಥಿತವಾಗಿ ಬೆಳೆಸಿ ಪೋಷಿಸಿರುವ ಅಸಹನೆ, ಅಸಹಿಷ್ಣುತೆಯೇ ಕಾರಣ’ ಎಂದು ಕುಮಾರಸ್ವಾಮಿ ಕಿಡಿಕಾರಿದ್ದಾರೆ.

4ನೇ ಪುಟ ನೋಡಿ

ಜೈಲು ಶಿಕ್ಷೆ: ಇಂದು ರಾಹುಲ್ ಮೇಲ್ಮನವಿ

22ರ ಒಳಗಾಗಿ ನ್ಯಾಯಾಲಯದಿಂದ ಪರಿಹಾರ ಸಿಗದಿದ್ದರೆ ಸೆರೆವಾಸ ತಪ್ಪದು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾನನಷ್ಟ ಮೊಕದ್ದಮೆಯಲ್ಲಿ ತಮಗೆ ಜೈಲು ಶಿಕ್ಷೆ ವಿಧಿಸಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೂರತ್‌ನ ಸೆಷನ್ಸ್ ನ್ಯಾಯಾಲಯಕ್ಕೆ ಸೋಮವಾರ ಮೇಲ್ಮನವಿ ಸಲ್ಲಿಸಲಿದ್ದಾರೆ.

ರಾಹುಲ್ ಅವರು ಖುದ್ದಾಗಿ ನ್ಯಾಯಾಲಯಕ್ಕೆ ತೆರಳಿ, ಮೇಲ್ಮನವಿಯನ್ನು ಸಲ್ಲಿಸುವರು ಎಂದು ಪಕ್ಷದ ಮೂಲಗಳು ಹೇಳಿವೆ.

ಪ್ರಕರಣವು ಇತ್ಯರ್ಥವಾಗುವವರೆಗೆ ತಮಗೆ ನೀಡಲಾದ ಶಿಕ್ಷೆಗೆ ಮಧ್ಯಂತರ ತಡೆ ನೀಡುವಂತೆ ರಾಹುಲ್ ಕೋರುವ ಸಾಧ್ಯತೆ ಇದೆ. ನ್ಯಾಯಾಲಯವು ಮಧ್ಯಂತರ ತಡೆ ನೀಡಿದರೆ ಮಾತ್ರ ಅವರ ಲೋಕಸಭಾ ಸದಸ್ಯತ್ವ ಉಳಿದುಕೊಳ್ಳಲಿದೆ.

ಒಂದು ವೇಳೆ, ಸೆಷನ್ಸ್ ಅಥವಾ ಉನ್ನತ ನ್ಯಾಯಾಲಯದಿಂದ ಏಪ್ರಿಲ್ 22ರ ಒಳಗಾಗಿ ಯಾವುದೇ ಪರಿಹಾರ ಸಿಗದೇ ಇದ್ದಲ್ಲಿ, ರಾಹುಲ್ ಗಾಂಧಿ ಸೆರೆವಾಸ ಅನುಭವಿಸಬೇಕಾಗುತ್ತದೆ.

ರಾಹುಲ್ ಅವರಿಗೆ ನ್ಯಾಯಾಲಯದಿಂದ ಶೀಘ್ರವೇ ಪರಿಹಾರ ಸಿಗಲಿದೆ. ಸಂಸದ ಸ್ಥಾನವೂ ಉಳಿಯಲಿದೆ ಎಂಬ ವಿಶ್ವಾಸವನ್ನು ಅವರ ವಕೀಲರ ತಂಡ ವ್ಯಕ್ತಪಡಿಸಿದೆ.

ಶಿಕ್ಷೆ ಪ್ರಕಟವಾಗಿ ಹತ್ತು ದಿನಗಳ ನಂತರ ರಾಹುಲ್ ಅವರು ಮೇಲ್ಮನವಿ ಸಲ್ಲಿಸುತ್ತಿದ್ದಾರೆ. ಪಕ್ಷದ ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ಈ ಸಂದರ್ಭದಲ್ಲಿ ಅವರಿಗೆ ಸಾಥ್ ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ.

2019ರ ಲೋಕಸಭೆ ಚುನಾವಣಾ ಪ್ರಚಾರ ಸಭೆಯಲ್ಲಿ ರಾಹುಲ್ ಕೋಲಾರದಲ್ಲಿ ಭಾಷಣ ಮಾಡಿ ‘ಎಲ್ಲ ಕಳ್ಳರಿಗೂ ಮೋದಿ ಎಂಬ ಉಪನಾಮ ಏಕಿದೆ’ ಎಂದು ಪ್ರಶ್ನಿಸಿದ್ದರು. ಅದನ್ನು ಪ್ರಶ್ನಿಸಿ ಸೂರತ್ (ಪಶ್ಚಿಮ) ಕ್ಷೇತ್ರದ ಶಾಸಕ ಪೂರ್ಣೇಶ್ ಮೋದಿ ಅವರು ಮಾನನಷ್ಟಮೊಕದ್ದಮೆದಾಖಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಸೂರತ್ ನ್ಯಾಯಾಲಯವು ರಾಹುಲ್ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಮಾರ್ಚ್ 23ರಂದು ತೀರ್ಪು ನೀಡಿತ್ತು.

ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದ್ದ ನ್ಯಾಯಾಲಯ, ತೀರ್ಪನ್ನು 30 ದಿನಗಳ ಕಾಲ ಅಮಾನತನಲ್ಲಿಟ್ಟಿದೆ. ಜೈಲು ಶಿಕ್ಷೆ ಪ್ರಕಟಗೊಂಡ ಮಾರನೇ ದಿನವೇ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿತ್ತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಕಾಂಗ್ರೆಸ್, ದೇಶದ ವಿವಿಧೆಡೆ ವ್ಯಾಪಕ ಪ್ರತಿಭಟನೆಗಳನ್ನು ನಡೆಸಿತ್ತು.

ಏಪ್ರಿಲ್ 22ರ ಒಳಗಾಗಿ ಸರ್ಕಾರಿ ಬಂಗಲೆಯನ್ನು ತೊರೆಯುವಂತೆಯೂ ರಾಹುಲ್ ಅವರಿಗೆ ಸೂಚಿಸಲಾಗಿದೆ.

ಎಚ್ಚರಿಕೆ ಹೆಜ್ಜೆ: ಮೇಲ್ಮನವಿ ಸಲ್ಲಿಸುವಲ್ಲಿನ ವಿಳಂಬವನ್ನು ಪ್ರಶ್ನಿಸಿದ್ದ ಬಿಜೆಪಿ, ಇದೇ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿತ್ತು.

ಮೇಲ್ಮನವಿ ಸಲ್ಲಿಸುವುದಕ್ಕೆ ಸಂಬಂಧಿಸಿ ಎಚ್ಚರಿಕೆಯ ಹೆಜ್ಜೆಗಳನ್ನಿಡಲು ನಿರ್ಧರಿಸಿದ್ದ ಕಾಂಗ್ರೆಸ್, ಯಾವುದೇ ನ್ಯೂನತೆಗಳು ಇಲ್ಲದ ಮೇಲ್ಮನವಿಯನ್ನು ಸಲ್ಲಿಸಲು ಮುತುವರ್ಜಿ ವಹಿಸಿದೆ ಎಂದು ಮುಖಂಡರು ಹೇಳಿದ್ದರು.

ರಾಹುಲ್ ವಿರುದ್ಧ ದೇಶದ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಹೀಗಾಗಿ, ಪಕ್ಷ ಸಲ್ಲಿಸುವ ಮೇಲ್ಮನವಿಯಲ್ಲಿ ದೋಷಗಳಿದ್ದರೆ, ವಿರೋಧಿಗಳು ಅದನ್ನೇ ಅಸ್ತ್ರವನ್ನಾಗಿಸಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ, ಈ ವಿಷಯದಲ್ಲಿ ಅವಸರ ಮಾಡದಿರಲು ನಿರ್ಧರಿಸಲಾಗಿತ್ತು ಎಂದೂ ಹೇಳಿದ್ದಾರೆ.

ಕಾಂಗ್ರೆಸ್ ಕೊನೆಗೂ ನ್ಯಾಯಾಂಗದಲ್ಲಿ ನಂಬಿಕೆ ಇರಿಸಿದ್ದು ಸ್ವಾಗತಾರ್ಹ: ಬಿಜೆಪಿ

ಕಾಂಗ್ರೆಸ್ ಕೊನೆಗೂ ನ್ಯಾಯಾಂಗದ ಮೇಲೆ ನಂಬಿಕೆ ತೋರಿದೆ. ಇದರೊಂದಿಗೆ ಪಕ್ಷವು ಹಿಂದುಳಿದ ವರ್ಗಗಳಿಗೆ ‘ಅವಮಾನ’ ಮಾಡಿದ್ದಕ್ಕಾಗಿ ಈಗ ಕ್ಷಮೆ ಯಾಚಿಸಲೇಬೇಕು ಎಂದು ಬಿಜೆಪಿ ಭಾನುವಾರ ಹೇಳಿದೆ.

ಮಾನನಷ್ಟ ಮೊಕದ್ದಮೆಯಲ್ಲಿ ತಮಗೆ ಜೈಲು ಶಿಕ್ಷೆ ವಿಧಿಸಿದ ಸೂರತ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ರಾಹುಲ್ ಗಾಂಧಿ ಅವರು ಸೆಷನ್ಸ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಿದ್ದಾರೆ ಎಂಬ ವರದಿ ಬೆನ್ನಲ್ಲೇ ಈ ಹೇಳಿಕೆ ನೀಡಿದೆ.

‘ಇದು ಸ್ವಾಗತಾರ್ಹ ಹೆಜ್ಜೆ. ತಡವಾಗಿಯಾದರೂ ಕಾಂಗ್ರೆಸ್ ನ್ಯಾಯಾಂಗದ ಮೇಲೆ ನಂಬಿಕೆ ಇರಿಸಿದೆ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಝಾದ್ ಪೂನಾವಾಲ ಸುದ್ದಿಗಾರರಿಗೆ ತಿಳಿಸಿದರು. ‘ಬೇರೆ ಪ್ರಕರಣಗಳಲ್ಲಿ ಕೆಲವೇ ಗಂಟೆಗಳಲ್ಲಿ ಮೇಲ್ಮನವಿ ಸಲ್ಲಿಸುತ್ತಿದ್ದ ಕಾಂಗ್ರೆಸ್, ತಮ್ಮ ನಾಯಕನ ವಿರುದ್ಧದ ಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಇಷ್ಟು ದಿನ ತೆಗೆದುಕೊಂಡಿದ್ದೇಕೆ ಎಂಬುದು ವಿಮರ್ಶೆಗೆ ಅರ್ಹ’ ಎಂದು ಹೇಳಿದರು.

ಒಳ ಪುಟಗಳು

‘ಸಂವಿಧಾನಕ್ಕೆ ತಿದ್ದುಪಡಿ: ಮೀಸಲಾತಿ ಹೆಚ್ಚಳ’ 6
ಮೌಲ್ಯಮಾಪಕರ ನೇಮಕ: ಜೇಷ್ಠತೆ ಕಡೆಗಣನೆ– ಆರೋಪ 4
ಅಮೃತ್‌ಪಾಲ್ ಸಿಂಗ್ ಸಹಚರರ ವಿರುದ್ಧ ತನಿಖೆ 10
ಬಯೊಮೆಟ್ರಿಕ್ ವಿವರ ನೀಡಲು ಹಿಂಜರಿಕೆ 11

ಹೆಲಿಕಾಪ್ಟರ್ ಮೂಲಕ 4.5 ಕಿ.ಮೀ. ಎತ್ತರ ಹಾರಾಟ ಜಗತ್ತಿನಲ್ಲೇ ಮೊದಲು

ಇಸ್ರೊ: ಮರುಬಳಕೆ ವಾಹನ ಪ್ರಯೋಗ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನರ್ ಬಳಕೆಯ ಉಡಾವಣಾ ವಾಹನದ ಪ್ರಯೋಗ ಪರೀಕ್ಷೆಯನ್ನು (ಆರ್‌ಎಲ್‌ವಿ ಎಲ್‌ಇಎಕ್ಸ್) ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ಭಾನುವಾರ ಯಶಸ್ವಿಯಾಗಿ ಕೈಗೊಂಡಿದೆ.

ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಸಮೀಪದ ವೈಮಾನಿಕ ಪರೀಕ್ಷಾ ವಲಯದಲ್ಲಿ (ಎಟಿಆರ್) ‘ಚಿನೂಕ್’ ಹೆಲಿಕಾಪ್ಟರ್ ಬಳಸಿ ಈ ಪರೀಕ್ಷೆ ಕೈಗೊಳ್ಳಲಾಗಿದೆ. ಡಿಆರ್‌ಡಿಒ ಮತ್ತು ಭಾರತೀಯ ವಾಯು ಪಡೆ ಸಹಯೋಗದಲ್ಲಿ ಈ ಕಾರ್ಯ ಕೈಗೊಳ್ಳಲಾಗಿದೆ.

ಭಾರತೀಯ ವಾಯುಪಡೆಯ ಚಿನೂಕ್ ಹೆಲಿಕಾಪ್ಟರ್‌ನಿಂದ ಬೆಳಿಗ್ಗೆ 7.10ಕ್ಕೆ ‘ಆರ್‌ಎಲ್‌ವಿ’ ಟೇಕಾಫ್ ಆಗಿ 4.5 ಕಿ.ಮೀ. ಎತ್ತರದಷ್ಟು ಹಾರಾಟ ನಡೆಸಿತು. ನಂತರ, ಸ್ವಯಂಚಾಲಿತವಾಗಿ 7.40ಕ್ಕೆ ಇಳಿಯಿತು ಎಂದು ಪ್ರಕಟಣೆ ತಿಳಿಸಿದೆ

ಹೆಲಿಕಾಪ್ಟರ್ ಮೂಲಕ 4.5 ಕಿಮೀ ಎತ್ತರಕ್ಕೆ ಸಾಗಿಸಿ ರನ್‌ವೇಯಲ್ಲಿ ಸ್ವಯಂ ‘ಲ್ಯಾಂಡಿಂಗ್’ ಮಾಡಿರುವುದು ವಿಶ್ವದಲ್ಲಿ ಇದೇ ಮೊದಲು ಹಾಗೂ ಇಸ್ರೊ ಅಭಿವೃದ್ಧಿಪಡಿಸಿರುವ ಹಲವು ಸ್ವದೇಶಿ ವ್ಯವಸ್ಥೆಗಳನ್ನು ‘ಎಲ್‌ಇಎಕ್ಸ್’ ಬಳಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಸಮೀಪದ ವೈಮಾನಿಕ ಪರೀಕ್ಷಾ ವಲಯದಲ್ಲಿ ಪುನರ್ ಬಳಕೆಯ ಉಡಾವಣಾ ವಾಹನದ ಪ್ರಯೋಗ ಪರೀಕ್ಷೆಯನ್ನು ಇಸ್ರೊ ಭಾನುವಾರ ಕೈಗೊಂಡಿತು – ಪಿಟಿಐ ಚಿತ್ರ

ಆರ್‌ಸಿಬಿ ಶುಭಾರಂಭ... ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಅಜೇಯ 82 ರನ್ ಗಳಿಸಿದ ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಖರಿ. ಪಂದ್ಯವನ್ನು ಆರ್‌ಸಿಬಿ 8 ವಿಕೆಟ್‌ಗಳಿಂದ ಗೆದ್ದುಕೊಂಡಿತು –ಪ್ರಜಾವಾಣಿ ಚಿತ್ರ/ ರಂಜು ಪಿ.

ಸುದ್ದಿ 12

ರಾಜ್ಯದಲ್ಲಿ ಹೆಚ್ಚುತ್ತಿದೆ ಬಿಸಿಲ ಧಗೆ: ಕೆಲವೆಡೆ ಮಳೆ ಸಾಧ್ಯತೆ

ಕಲಬುರಗಿ: 38.3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಧಗೆ ಹೆಚ್ಚುತ್ತಿದ್ದು, ಜನರನ್ನು ಬಸವಳಿಯುವಂತೆ ಮಾಡಿದೆ. ಬೆಳಿಗ್ಗೆ ಸೂರ್ಯ ನೆತ್ತಿಯ ಮೇಲೆ ಬರುತ್ತಿದ್ದಂತೆಯೇ ತಾಪಮಾನ ಏರಿಕೆ ಕಾಣಿಸುತ್ತಿದೆ.

ದಕ್ಷಿಣ ಒಳನಾಡಿನ ಕೆಲವು ಕಡೆ ಕಳೆದ ಎರಡು ದಿನಗಳಲ್ಲಿ ಮಳೆಯಾಗಿದ್ದರೂ, ವಾತಾವರಣ ತಂಪಾಗಿಲ್ಲ. ಭಾನುವಾರ ಕಲಬುರಗಿ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 38.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಗದಗ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 36, ಚಿತ್ರದುರ್ಗ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಗರಿಷ್ಠ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಮುಂದಿನ 24 ಗಂಟೆಯ ಅವಧಿಯಲ್ಲಿ ದಕ್ಷಿಣ ಒಳನಾಡಿನ ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಚಾಮರಾಜನಗರ, ಕೋಲಾರ, ರಾಮನಗರ ಜಿಲ್ಲೆಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ. ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ.

ಬಿಸಿಲು ಹೆಚ್ಚಾಗಿದ್ದರಿಂದ ಸವಾರರೊಬ್ಬರು ತಮ್ಮ ಸ್ಕೂಟರ್‌ಗೆ ಛತ್ರಿ ಅಳವಡಿಸಿಕೊಂಡು ಹೊರಟ ದೃಶ್ಯ ಕಲಬುರಗಿಯ ಹಳೆ ಜೇವರ್ಗಿ ರಸ್ತೆಯಲ್ಲಿ ಕಂಡು ಬಂತು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೋವಿಡ್ ಮತ್ತೆ ಏರಿಕೆ: ಒಂದೇ ದಿನ 3,824 ಪ್ರಕರಣ



ನವದೆಹಲಿ(ಪಿಟಿಐ): ದೇಶದಲ್ಲಿ ಕೋವಿಡ್ –19 ಪ್ರಕರಣಗಳ ಸಂಖ್ಯೆ ಮತ್ತೆ ದಿಢೀರ್ ಏರುಗತಿಗೆ ಹೊರಳಿದ್ದು, ಭಾನುವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ ದೇಶದಾದ್ಯಂತ 3,824 ಪ್ರಕರಣಗಳು ವರದಿಯಾಗಿವೆ.

ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿ ಪ್ರಕಾರ, ಕಳೆದ ಆರು ತಿಂಗಳ ಅವಧಿಯಲ್ಲಿ (184 ದಿನಗಳಲ್ಲಿ) ಇದೇ ಮೊದಲ ಬಾರಿಗೆ ಸೋಂಕಿತ ಪ್ರಕರಣಗಳ ಸಂಖ್ಯೆ ಇಷ್ಟೊಂದು ಪ್ರಮಾಣದಲ್ಲಿ ದಾಖಲಾಗಿವೆ. ಶನಿವಾರದ ಪ್ರಕರಣಗಳಿಗೆ ಹೋಲಿಸಿದರೆ ಕೇವಲ ಒಂದು ದಿನದಲ್ಲಿ ಶೇ 27ರಷ್ಟು ಏರಿಕೆ ಕಂಡುಬಂದಿದೆ.

ಸದ್ಯ, ಸಕ್ರಿಯ ಪ್ರಕರಣಗಳ ಸಂಖ್ಯೆ 18,389ಕ್ಕೆ ತಲುಪಿದೆ. ಸೋಂಕಿನ ಹೊಸ ಪ್ರಕರಣಗಳ ಸಂಖ್ಯೆ ಒಟ್ಟು 4,47,22,605ಕ್ಕೆ ಏರಿದೆ. ಚೇತರಿಕೆಯ ಪ್ರಮಾಣ ಶೇಕಡ 98.77ರಷ್ಟಿದೆ.

ಅಂಕಿ ಅಂಶದ ಪ್ರಕಾರ, ಕಳೆದ 24 ತಾಸುಗಳಲ್ಲಿ ಕೋವಿಡ್ ಸೋಂಕಿನಿಂದ ಐವರು ಸಾವನ್ನಪ್ಪಿದ್ದು, ದೆಹಲಿ, ಹರಿಯಾಣ, ಕೇರಳ ಮತ್ತು ರಾಜಸ್ಥಾನದಲ್ಲಿ ಸಾವು ಸಂಭವಿಸಿವೆ.

ಅಪಘಾತ: ಕಲಾವಿದ ಬೆಳಗಲ್ ವೀರಣ್ಣ ಸಾವು

ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ಹಿರೇಹಳ್ಳಿ ಬಳಿ ಭಾನುವಾರ ಬೆಳಿಗ್ಗೆ ಶ್ರೀರಂಗಪಟ್ಟಣ - ಜೇವರ್ಗಿ ಹೆದ್ದಾರಿಯ ಡಿವೈಡರ್‌ಗೆ ಕಾರು ಡಿಕ್ಕಿ ಹೊಡೆದು ರಂಗಭೂಮಿ ಹಾಗೂ ತೊಗಲುಗೊಂಬೆಯಾಟದ ಪ್ರಸಿದ್ಧ ಕಲಾವಿದ ಬೆಳಗಲ್ ವೀರಣ್ಣ (91) ಮೃತಪಟ್ಟಿದ್ದಾರೆ. ಬಳ್ಳಾರಿ ತಾಲ್ಲೂಕಿನ ಬೆಳಗಲ್‌ನ ವೀರಣ್ಣ ಅವರು ಪುತ್ರನ ಜೊತೆ ಬೆಂಗಳೂರಿನತ್ತ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಬೆಳಿಗ್ಗೆ 8.45ಕ್ಕೆ ಅಪಘಾತವಾಗಿದೆ. ಘಟನೆಯಲ್ಲಿ ಗಾಯಗೊಂಡಿದ್ದ ವೀರಣ್ಣ ಅವರ ಪುತ್ರ ಹನುಮಂತ (43) ಪ್ರಾಣಾಪಾಯದಿಂದ ಪಾರಾಗಿದ್ದಾರೆ.

4ನೇ ಪುಟ ನೋಡಿ

ರಾಜಕಾಲುವೆ ಹೊಸ ಒತ್ತುವರಿ ವಿಶೇಷ ಕೋರ್ಟ್‌ನಲ್ಲಿ ಪ್ರಕರಣ

ವರದಿ ಪರಿಣಾಮ

ಬೆಂಗಳೂರು: ಪೂರ್ವ ತಾಲ್ಲೂಕಿನಲ್ಲಿ ರಾಜಕಾಲುವೆ ಹೊಸ ಒತ್ತುವರಿಯನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ಸ್ವಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದೆ.

'ಪ್ರಜಾವಾಣಿ'ಯಲ್ಲಿ ಮಾರ್ಚ್ 30ರಂದು 'ಅಳತೆ ಮಾಡಿದ್ದಷ್ಟೂ ಒತ್ತುವರಿ ಹೆಚ್ಚಳ' ಶೀರ್ಷಿಕೆಯಡಿ ಪೂರ್ವ ಮುಳುಗಡೆಗೆ ಕಾರಣವಾದ ರಾಜಕಾಲುವೆ ಒತ್ತುವರಿ ತೆರವು ನಿರೀಕ್ಷಿತ ಮಟ್ಟದಲ್ಲಿ ನಡೆಯುತ್ತಿಲ್ಲ. ಆದರೆ, ಒತ್ತುವರಿ ಮಾತ್ರ ಅಳತೆ ಮಾಡಿದಂತೆಲ್ಲಾ ಹೆಚ್ಚಾಗುತ್ತಿದೆ. ಪೂರ್ವ ತಾಲ್ಲೂಕಿನ ಮೂರು ಹೋಬಳಿಗಳಲ್ಲಿ 26 ಎಕರೆಗೂ ಹೆಚ್ಚಿನ ಪ್ರಮಾಣದಲ್ಲಿ ರಾಜಕಾಲುವೆ ಒತ್ತುವರಿಯಾಗಿದೆ ಎಂದು ಪ್ರಕಟಿಸಲಾಗಿತ್ತು.

ಈ ವಿಷಯವು ಭೂ ಒತ್ತುವರಿಗೆ ಸಂಬಂಧಿಸಿದ್ದು, ಭೂ ಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 9ರಡಿಯಲ್ಲಿ ವಿಶೇಷ ನ್ಯಾಯಾಲಯ ಪ್ರಕರಣ ದಾಖಲಿಸಿಕೊಂಡಿದೆ. ಬಿಬಿಎಂಪಿ ಮಹದೇವಪುರ ವಲಯದ ಜಂಟಿ ಆಯುಕ್ತರಿಗೆ ಸಮಗ್ರ ವರದಿ ಸಲ್ಲಿಸಲು ಸೂಚಿಸಿ ಮೇ 25ಕ್ಕೆ ಪ್ರಕರಣ ಮುಂದೂಡಲಾಗಿದೆ ಎಂದು ಸರ್ಕಾರಿ ಅಭಿಯೋಜಕರು ತಿಳಿಸಿದ್ದಾರೆ.

ಡ್ರಗ್ಸ್ ಮಾರಾಟ: ಲೆಕ್ಕಾಧಿಕಾರಿ ಬಂಧನ

ಬೆಂಗಳೂರು: ಮಾದಕ ವಸ್ತು (ಡ್ರಗ್ಸ್) ಸಾಗಣೆ, ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಹೋಟೆಲ್ ಲೆಕ್ಕಾಧಿಕಾರಿ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.

'ಕೇರಳ ಕಣ್ಣೂರಿನ ಕೆ.ಪಿ. ಮೊಹಮ್ಮದ್ ಸೈಯದ್ (26), ನೈಜೀರಿಯಾದ ಚಿಕೆ ಬೆನ್ರಾಡ್ ಐಕೆವೋಹಾ (39) ಬಂಧಿತರು. ಇವರ ವಿರುದ್ಧ ಬಾಣಸವಾಡಿ ಹಾಗೂ ಕೋಣನಕುಂಟೆ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಹೇಳಿದರು. 'ಕೇರಳದ ಎರ್ನಾಕುಲಂನಲ್ಲಿರುವ ಹೋಟೆಲೊಂದರಲ್ಲಿ ಲೆಕ್ಕಾಧಿಕಾರಿ ಆಗಿದ್ದ ಮೊಹಮ್ಮದ್ ಸೈಯದ್, ವೈಟ್‌ಫೀಲ್ಡ್‌ನ ಐಟಿಪಿಎಲ್ ರಸ್ತೆಯಲ್ಲಿರುವ ಪರಿಚಯಸ್ಥರೊಬ್ಬರ ಮನೆಯಲ್ಲಿ ವಾಸವಿದ್ದ' ಎಂದು ತಿಳಿಸಿದರು.

'ಹೆಚ್ಚು ಹಣ ಸಂಪಾದಿಸಲು ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ. ಈತನಿಂದ 52 ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದರು.
'ಚಿಕೆ ಬೆನ್ರಾಡ್, ಐಟಿ–ಬಿಟಿ ಸಿಬ್ಬಂದಿ ಸೇರಿ ಹಲವರಿಗೆ ಡ್ರಗ್ಸ್ ಮಾರುತ್ತಿದ್ದ. ಈತನಿಂದ ₹ 5 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿಮಾಡಲಾಗಿದೆ. ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ನೆಲೆಸಿದ್ದ' ಎಂದರು.

ಬಾಣಂತಿ ಸಾವು: ಚಿಕಿತ್ಸೆ ವಿಳಂಬ ಆರೋಪ

ಬಂಗಾರಪೇಟೆ: ಹೆರಿಗೆಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸೇರಿಸಿದ್ದ ಮಹಿಳೆಗೆ ಸಕಾಲಕ್ಕೆ ಚಿಕಿತ್ಸೆ ಸಿಗದೆ ಶನಿವಾರ ತಡರಾತ್ರಿ ಮೃತಪಟ್ಟಿದ್ದಾರೆ ಎಂದು ಸಂಬಂಧಿಕರು ದೂರಿದ್ದಾರೆ.

ಪಟ್ಟಣದ ಶಾಂತಿನಗರ ನಿವಾಸಿ ಮಂಜುನಾಥ ಅವರ ಪತ್ನಿ ಭಾರತಿ (28) ಮೃತರು. ಶನಿವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಾಗಿದ್ದರು. ಮಧ್ಯಾಹ್ನ ಶಸ್ತ್ರಚಿಕಿತ್ಸೆ ಆಗಿದ್ದು, ಹೆಣ್ಣುಮಗುವಾಗಿದೆ. ಮಹಿಳೆಗೆ ರಾತ್ರಿ ತೀವ್ರ ಕಾಲು ನೋವು ಉಂಟಾಗಿದೆ.

ಚಿಕಿತ್ಸೆ ನೀಡಿದ ನಂತರವೂ ನೋವು ಕಡಿಮೆ ಆಗದ ಕಾರಣ ಕೋಲಾರ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ಸೂಚಿಸಿದ್ದಾರೆ. ಆದರೆ, ಮಾರ್ಗಮಧ್ಯದಲ್ಲಿ ಬಾಣಂತಿ ಮೃತಪಟ್ಟಿದ್ದಾರೆ.

'ಚುಚ್ಚುಮದ್ದು ತರಲು ನರ್ಸ್ ಹೇಳಿದರು. ಚುಚ್ಚುಮದ್ದು ನೀಡಿದರೂ ನೋವು ಕಡಿಮೆಯಾಗಲಿಲ್ಲ. ಆಗ

> **ಚಿಕಿತ್ಸೆಯಲ್ಲಿ ಲೋಪ ಆಗಿಲ್ಲ. ರಕ್ತನಾಳ ಹೆಪ್ಪುಗಟ್ಟುವಿಕೆಯಿಂದ ಮೃತಪಟ್ಟಿರಬಹುದೆಂದು ಮೇಲ್ನೋಟಕ್ಕೆ ಗೊತ್ತಾಗಿದೆ.**
> **ಡಾ.ಭಾರತಿ,** ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ

> **ಪತ್ನಿಗೆ ಸಕಾಲದಲ್ಲಿ ಚಿಕಿತ್ಸೆ ಕೊಟ್ಟಿಲ್ಲ. ಸ್ಟ್ರೆಚರ್ ತಳ್ಳುವವರಿಗೆ ₹ 300, ವೈದ್ಯರಿಗೆ ₹3 ಸಾವಿರ, ನರ್ಸ್‌ಗೆ ₹ 500 ಲಂಚ ಕೊಟ್ಟಿರುವೆ. ಆದರೂ ಪತ್ನಿ ಬದುಕಿಲ್ಲ**
> **ಮಂಜುನಾಥ,** ಮೃತ ಮಹಿಳೆಯ ಪತಿ

ವೈದ್ಯರು ಕೋಲಾರದ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು' ಎಂದು ಮಹಿಳೆ ಪತಿ ಮಂಜುನಾಥ ಹೇಳಿದರು.

ಕುಟುಂಬಸ್ಥರು, ವಿವಿಧ ಸಂಘಟನೆಗಳವರು ಆಸ್ಪತ್ರೆ ಬಳಿ ಪ್ರತಿಭಟಿಸಿದರು.

ನಾಯಂಡಹಳ್ಳಿ ಜಂಕ್ಷನ್ ಬಳಿ ಅಪಘಾತ • ರೊಚ್ಚಿಗೆದ್ದ ಜನ, ಲಾರಿ ಪ್ರಹಾರ

ಲಾರಿ ಹರಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ನಾಯಂಡಹಳ್ಳಿ ಜಂಕ್ಷನ್ ಬಳಿ ಲಾರಿಯ ಚಕ್ರ ತಲೆ ಮೇಲೆ ಹರಿದು ಅನುಷಾ (29) ಎಂಬುವವರು ಸ್ಥಳದಲ್ಲೇ ಮೃತಪಟ್ಟಿದ್ದು, ಅಪಘಾತದಿಂದ ರೊಚ್ಚಿಗೆದ್ದ ಜನ ಲಾರಿ ಮೇಲೆ ಕಲ್ಲು ತೂರಾಟ ನಡೆಸಿದರು.

ಅನುಷಾ

ಅಪಘಾತ ಸ್ಥಳದಲ್ಲಿದ್ದ ಲಾರಿ ಹಾಗೂ ಕೆಎಸ್‌ಆರ್‌ಟಿಸಿ ಬಸ್

ವಾಹನಗಳ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

'ಮಂಡ್ಯ ಜಿಲ್ಲೆಯ ಅನುಷಾ, ನಗರದ ಅತ್ತಿಗುಪ್ಪೆಯಲ್ಲಿರುವ ಪ್ಲೈವುಡ್ ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ರಜೆ ಇದ್ದಿದ್ದರಿಂದ, ತಾಯಿ ವನಜಾಕ್ಷಿ ಹಾಗೂ 7 ವರ್ಷದ ಮಗನ ಜೊತೆ ರಾಜರಾಜೇಶ್ವರಿನಗರದ ಗೋಪಾಲನ್ ಆರ್ಕೇಡ್ ಮಾಲ್‌ಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ತಿಳಿಸಿದರು.

'ಅಪಘಾತದಲ್ಲಿ ವನಜಾಕ್ಷಿ ಅವರ ಕಾಲುಗಳ ಮೇಲೆ ಲಾರಿ ಚಕ್ರ ಹರಿದಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಗನಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದು ಹೇಳಿದರು.

ದ್ವಿಚಕ್ರ ವಾಹನಕ್ಕೆ ಗುದ್ದಿ ಬಸ್‌ಗೆ ಡಿಕ್ಕಿ: ಅನುಷಾ ಅವರು ದೀಪಾಂಜಲಿನಗರ ಕಡೆಯಿಂದ ನಾಯಂಡಹಳ್ಳಿ ಜಂಕ್ಷನ್

ಅಪರಾಧ ಸುದ್ದಿ

ಮೂಲಕ ರಾಜರಾಜೇಶ್ವರಿನಗರ ಕಡೆ ಹೊರಟಿದ್ದರು.

'ಮಧ್ಯಾಹ್ನ 2.45ರ ಸುಮಾರಿಗೆ ನಾಯಂಡಹಳ್ಳಿ ಮೇಲ್ಸೇತುವೆ ಇಳಿಯುತ್ತಿದ್ದಂತೆ ಪಂತರಪಾಳ್ಯ ಬಳಿ ಅತೀ ವೇಗವಾಗಿ ಬಂದಿದ್ದ ಲಾರಿ ದ್ವಿಚಕ್ರ ವಾಹನಕ್ಕೆ ಗುದ್ದಿತ್ತು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ದ್ವಿಚಕ್ರ ವಾಹನದ ಹಿಂಬದಿ ಕುಳಿತಿದ್ದ ಮಗ ರಸ್ತೆಬದಿಗೆ ಬಿದ್ದಿದ್ದ. ಅನುಷಾ ಹಾಗೂ ವನಜಾಕ್ಷಿ ರಸ್ತೆ ಮೇಲೆ ಬಿದ್ದಿದ್ದರು. ಅನುಷಾ ತಲೆ ಮೇಲೆ ಹರಿದು ಹೋಗಿದ್ದ ಲಾರಿಯ ಚಕ್ರ, ವನಜಾಕ್ಷಿ ಕಾಲಿನ ಮೇಲೂ ಹರಿದಿತ್ತು. ತಲೆ ಭಾಗ ಛಿದ್ರವಾಗಿ ಅನುಷಾ ಮೃತಪಟ್ಟರು. ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದ ಚಾಲಕ, ಅವಸರದಲ್ಲಿ ಲಾರಿ ಚಲಾಯಿಸಿ ಎದುರಿಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದ್ದ. ಸ್ಥಳದಲ್ಲಿ ಲಾರಿ ನಿಂತುಕೊಂಡಿತ್ತು. ಜನ ಸೇರುತ್ತಿದ್ದಂತೆ ಚಾಲಕ ಓಡಿಹೋಗಿದ್ದಾನೆ.

ಬಸ್‌ನಲ್ಲಿದ್ದ ಕೆಲ ಪ್ರಯಾಣಿಕರಿಗೂ ಗಾಯಗಳಾಗಿವೆ' ಎಂದರು. 'ಲಾರಿಯಲ್ಲಿ ಸಿಮೆಂಟ್ ಚೀಲಗಳನ್ನು ಸಾಗಿಸಲಾಗುತ್ತಿತ್ತು. ಲಾರಿ ಜಪ್ತಿ ಮಾಡಲಾಗಿದೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿ, ಆತನಿಗೆ ಶೋಧ ನಡೆದಿದೆ' ಎಂದು ತಿಳಿಸಿದರು.

ಪ್ರತಿಭಟನೆ, ದಟ್ಟಣೆ: ಸ್ಥಳದಲ್ಲಿ ಸೇರಿದ್ದ ಜನ, ಮೈಸೂರು ರಸ್ತೆಯಲ್ಲಿ ವಾಹನಗಳ ಸಂಚಾರ ತಡೆದು ಪ್ರತಿಭಟನೆ ನಡೆಸಿದರು. ಲಾರಿ ಮೇಲೆ ಕಲ್ಲು ತೂರಾಟ ನಡೆಸಿದರು.

'ನಾಯಂಡಹಳ್ಳಿ ಜಂಕ್ಷನ್ ರಸ್ತೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಆಗಾಗ್ಗೆ ಅಪಘಾತಗಳು ಸಂಭವಿಸುತ್ತಿವೆ. ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ವಾಹನಗಳ ವೇಗಕ್ಕೆ ಮಿತಿ ಇಲ್ಲದಂತಾಗಿದೆ. ಜಂಕ್ಷನ್ ಸುಧಾರಣೆಗೆ ಮನವಿ ಸಲ್ಲಿಸಿದರೂ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಪಂದಿಸಿಲ್ಲ' ಎಂದು ಸ್ಥಳೀಯರು ಆರೋಪಿಸಿದರು.

ಪ್ರತಿಭಟನೆಯಿಂದಾಗಿ ಮೈಸೂರು ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗಿ, ಎರಡು ಗಂಟೆಗಳವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸ್ಥಳಕ್ಕೆ ಬಂದ ಪೊಲೀಸರು, ಪ್ರತಿಭಟನಕಾರರ ಮೇಲೆ ಲಾರಿ ಪ್ರಹಾರ ನಡೆಸಿ ಚದುರಿಸಿದರು.

ಪ್ರಾಣ ಬಿಟ್ಟಿದ್ದ ಎಸ್‌ಬಿಐ ಉದ್ಯೋಗಿ

ನಾಯಂಡಹಳ್ಳಿ ಜಂಕ್ಷನ್‌ನಲ್ಲಿ 2022ರ ಏಪ್ರಿಲ್ 4ರಂದು ದ್ವಿಚಕ್ರ ವಾಹನಕ್ಕೆ ಬಿಬಿಎಂಪಿ ಕಸ ಸಾಗಣೆ ಲಾರಿ ಡಿಕ್ಕಿ ಹೊಡೆದಿತ್ತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಉದ್ಯೋಗಿ ಪದ್ಮಿನಿ (40) ಮೃತಪಟ್ಟಿದ್ದರು.

ರಾಜರಾಜೇಶ್ವರಿನಗರದ ಪದ್ಮಿನಿ ಅವರು ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಲಾರಿ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ಬಿದ್ದಿದ್ದ ಪದ್ಮಿನಿ ಅವರ ಮೇಲೆಯೇ ಲಾರಿ ಚಕ್ರ ಹರಿದಿತ್ತು. ಈ ಸಂಬಂಧ ಚಾಲಕನನ್ನು ಪೊಲೀಸರು ಬಂಧಿಸಿದ್ದರು.

ಕಮಿಷನ್‌ಗಾಗಿ ಠಾಣೆಯಲ್ಲಿ ಸಂಧಾನ: ಮತ್ತಿಬ್ಬರು ಕಾನ್‌ಸ್ಟೆಬಲ್ ಅಮಾನತು

ಬೆಂಗಳೂರು: ರೈಸ್ ಪುಲ್ಲಿಂಗ್ ವಂಚನೆ ಪ್ರಕರಣದ ಆರೋಪಿಯನ್ನು ಅಕ್ರಮವಾಗಿ ಬಂಧಿಸಿ ಕಮಿಷನ್ ಆಸೆಗಾಗಿ ಠಾಣೆಯಲ್ಲಿ ಸಂಧಾನ ಮಾಡಿಸಿದ್ದ ಪ್ರಕರಣದಲ್ಲಿ ಮತ್ತಿಬ್ಬರು ಕಾನ್‌ಸ್ಟೆಬಲ್‌ಗಳನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪುಲಿಕೇಶಿನಗರ ಠಾಣೆಯ ಪಿಎಸ್‌ಐ ರುಮಾನ್ ಪಾಷಾ, ಕಾನ್‌ಸ್ಟೆಬಲ್‌ಗಳಾದ ಲೇಪಾಕ್ಷಪ್ಪ, ಲಕ್ಷ್ಮಣ್ ಹಾಗೂ ಗಿರೀಶ್ (ಸದ್ಯ ಜೆ.ಸಿ.ನಗರ ಠಾಣೆ) ಅವರನ್ನು ಇತ್ತೀಚೆಗಷ್ಟೇ ಅಮಾನತು ಮಾಡಲಾಗಿತ್ತು.

ಪ್ರಕರಣದಲ್ಲಿ ಭಾಗಿಯಾಗಿರುವ ಮಾಹಿತಿ ಆಧರಿಸಿ ಕಾನ್‌ಸ್ಟೆಬಲ್‌ಗಳಾದ ನಸ್ರುಲ್ಲಾ ಹಾಗೂ ಸನಾವುಲ್ಲಾರನ್ನು ಅಮಾನತು ಮಾಡಿ ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ಆದೇಶ ಹೊರಡಿಸಿದ್ದಾರೆ.

ಪರಿಚಯಸ್ಥ ಎಂದು ಸಂಧಾನ: 'ರೈಸ್ ಪುಲ್ಲಿಂಗ್ ಹೆಸರಿನಲ್ಲಿ ವಂಚಿಸಿದ್ದ ಆರೋಪಿ ವಿರುದ್ಧ ವ್ಯಕ್ತಿಯೊಬ್ಬರು ಠಾಣೆಗೆ ದೂರು ನೀಡಿದ್ದರು. ದೂರುದಾರ ಪರಿಚಯಸ್ಥ ಎಂದು 'ಪ್ರಕರಣ ದಾಖಲಿಸುವುದು ಬೇಡ. ಹಣ ವಾಪಸು ಕೊಡಿಸುತ್ತೇವೆ. ಕಮಿಷನ್ ಕೊಡಿ' ಎಂದಿದ್ದರು. ಅದಕ್ಕೆ ದೂರುದಾರ ಒಪ್ಪಿದ್ದರು' ಎಂದು ಮೂಲಗಳು ಹೇಳಿವೆ.

'ಆರೋಪಿಯಿಂದ ₹ 15 ಲಕ್ಷ ವಸೂಲಿ ಮಾಡಿ, ದೂರುದಾರರಿಗೆ ಕೊಡಿಸಿದ್ದರು. ಅದೇ ಹಣದಲ್ಲಿ ಕಮಿಷನ್ ಸಹ ಪಡೆದಿದ್ದರೆಂಬ ಮಾಹಿತಿ ಇದೆ. ಪ್ರಕರಣ ದಾಖಲಿಸಿಕೊಳ್ಳದೇ ಪೊಲೀಸರು ಕರ್ತವ್ಯಲೋಪ ಎಸಗಿದ್ದರು. ವ್ಯಕ್ತಿಯನ್ನು ಅಕ್ರಮ ಬಂಧನದಲ್ಲಿಟ್ಟಿದ್ದರು. ಹೀಗಾಗಿ, ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಛತ್ತೀಸ್‌ಗಢ: ವೇದಿಕೆ ಕುಸಿದು ಶಾಸಕರಿಗೆ ಗಾಯ

ಬಿಲಾಸ್‌ಪುರ್ (ಪಿಟಿಐ): ಛತ್ತೀಸ್‌ಗಢದ ಬಿಲಾಸ್‌ಪುರ ಜಿಲ್ಲೆಯಲ್ಲಿ ಭಾನುವಾರ ಪ್ರತಿಭಟನೆ ವೇಳೆ ವೇದಿಕೆಯು ಕುಸಿದ ಕಾರಣ ಕಾಂಗ್ರೆಸ್‌ನ ಇಬ್ಬರು ಶಾಸಕರು ಮತ್ತು ಪಕ್ಷದ ಕೆಲವು ಮುಖಂಡರು ಗಾಯಗೊಂಡರು.

ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದ್ದನ್ನು ವಿರೋಧಿಸಿ ಏರ್ಪಡಿಸಿದ್ದ ಪಕ್ಷದ ರ್‍ಯಾಲಿಯಲ್ಲಿ ಈ ಘಟನೆ ಸಂಭವಿಸಿತು. ಶಾಸಕರಾದ ಶೈಲೇಶ್ ಪಾಂಡೆ, ರಶ್ಮಿ ಸಿಂಗ್ ಅವರು ಗಾಯಗೊಂಡಿದ್ದಾರೆ ಎಂದು ಮುಖಂಡರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ನೂರಕ್ಕೂ ಅಧಿಕ ಡೆಂಗಿ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಮಳೆ, ಬಿಸಿಲಿನಿಂದಾಗಿ ಎರಡು ವಾರಗಳಲ್ಲಿ ನೂರಕ್ಕೂ ಅಧಿಕ ಮಂದಿ ಡೆಂಗಿ ಜ್ವರ ಪೀಡಿತರಾಗಿದ್ದಾರೆ. ಒಟ್ಟು ಪ್ರಕರಣ ಸಾವಿರದ ಗಡಿ ಸಮೀಪಿಸಿದೆ.

ಈ ವರ್ಷ ಈವರೆಗೆ 19 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರ ತಪಾಸಣೆ ನಡೆಸಲಾಗಿದೆ. 12 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿಯ ಪರೀಕ್ಷೆ ಮಾಡಲಾಗಿದೆ. 981 ಮಂದಿಯಲ್ಲಿ ಡೆಂಗಿ ಜ್ವರ ದೃಢಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 1,567 ಮಂದಿಯಲ್ಲಿ ಡೆಂಗಿ ಶಂಕೆ ಇದ್ದು, 262 ಮಂದಿಯಲ್ಲಿ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 107, ವಿಜಯಪುರ 65, ಬಳ್ಳಾರಿಯಲ್ಲಿ 50, ಚಿತ್ರದುರ್ಗದಲ್ಲಿ 48 ಪ್ರಕರಣಗಳಿವೆ. ಉಳಿದ ಜಿಲ್ಲೆಗಳಲ್ಲಿ 30ರ ಆಸುಪಾಸಿನಲ್ಲಿದೆ.

24 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 8 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ.

'ಮನೆಯ ಸುತ್ತಲಿನ ಪ್ರದೇಶಗಳು, ಕಟ್ಟಡ ಕಾಮಗಾರಿ ನಡೆಯುವ ಸ್ಥಳಗಳು, ಘನತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಮುಂಜಾಗ್ರತೆ ವಹಿಸಬೇಕು' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ಸಲಹೆ ಮಾಡಿದರು.

ಅಧಿಕ ಉಷ್ಣಾಂಶ: ಮುನ್ನೆಚ್ಚರಿಕೆಗೆ ಆರೋಗ್ಯ ಇಲಾಖೆ ಸೂಚನೆ

ಬೆಂಗಳೂರು: ಅಧಿಕ ಉಷ್ಣಾಂಶದ ಕಾರಣ ಮುಂದಿನ ಕೆಲ ದಿನಗಳು ಮಕ್ಕಳು, ವೃದ್ಧರು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸಬೇಕು. ಅನಾರೋಗ್ಯ ಕಾಣಿಸಿಕೊಂಡಲ್ಲಿ ವೈದ್ಯರನ್ನು ಸಂಪರ್ಕಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಅವಧಿಯಲ್ಲಿ ಅತಿನೇರಳೆ ಕಿರಣಗಳು ತೀಕ್ಷ್ಣವಾಗಿರುತ್ತವೆ. ಆದ್ದರಿಂದ ಮಕ್ಕಳು ಹಾಗೂ ವೃದ್ಧರ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಸಾಂಕ್ರಾಮಿಕ ರೋಗತಡೆಗೆ ಶುದ್ಧ ನೀರು ಕುಡಿಯುವುದು ಬಹಳ ಮುಖ್ಯ. ರಸ್ತೆ ಬದಿಯಲ್ಲಿ ತೆರೆದಿಟ್ಟ ಆಹಾರ ಪದಾರ್ಥ ಹಾಗೂ ಕತ್ತರಿಸಿದ ಹಣ್ಣುಗಳನ್ನು ತಿನ್ನುವುದರಿಂದ ರೋಗಾಣುಗಳು ಹರಡಿ, ಸಾಂಕ್ರಾಮಿಕ ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಇಲಾಖೆ ಹೇಳಿದೆ.

ಮಕ್ಕಳನ್ನು ಶಾಖದ ಅಲೆಯಿಂದ ರಕ್ಷಿಸಲು ನಿಂಬೆ ಹಣ್ಣಿನ ರಸ ಸೇರಿಸಿದ ನೀರು, ಮಜ್ಜಿಗೆ, ಎಳನೀರು, ತಾಜಾ ಹಣ್ಣಿನ ರಸ ನೀಡಬೇಕು. ತಿಳಿ ಬಣ್ಣದ, ಹಗುರವಾದ ಹತ್ತಿ ಬಟ್ಟೆಗಳನ್ನು ಧರಿಸಬೇಕು. ತಾಜಾ ಹಣ್ಣುಗಳು, ಸಲಾಡ್‌ಗಳು, ಮನೆಯಲ್ಲಿ ತಯಾರಿಸಿದ ಊಟ ಸೇವಿಸಬೇಕು. ಹೊರಗಿನ ಆಹಾರ ಸುರಕ್ಷಿತವಲ್ಲ. ಮಧ್ಯಾಹ್ನ 12ರಿಂದ ಸಂಜೆ 4 ಗಂಟೆ ಅವಧಿಯಲ್ಲಿ ಆದಷ್ಟೂ ಒಳಾಂಗಣ ಪ್ರದೇಶದಲ್ಲಿ ಇರಬೇಕು ಎಂದು ತಿಳಿಸಿದೆ.

ಬ್ರಹ್ಮೋತ್ಸವ 4ರಿಂದ

ಬೆಂಗಳೂರು: ರಾಜಾಜಿನಗರದ ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಹರೇ ಕೃಷ್ಣ ಹಿಲ್‌ನಲ್ಲಿ ಏ. 4ರಿಂದ 15ರವರೆಗೆ ಬ್ರಹ್ಮೋತ್ಸವ ನಿಮಿತ್ತ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಪ್ರತಿದಿನ ಸಂಜೆ ರಾಧಾ ಕೃಷ್ಣಚಂದ್ರರನ್ನು ವಿಶೇಷ ಅಲಂಕಾರ ಮಾಡಲಾಗುವುದು. ಏಪ್ರಿಲ್ 14ರಂದು ಮಹಾ ಅಭಿಷೇಕ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 080–23372233 ಸಂಪರ್ಕಿಸಿ.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ ಶ್ರೀರಾಮೋತ್ಸವ: ಬೆಳಿಗ್ಗೆ 7.30ಕ್ಕೆ ರಾಮೇಶ್ವರ ಸ್ವಾಮಿಗೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪ್ರದೋಷ ಪೂಜೆ, ಭಜನೆ: ಆದಿಶಕ್ತಿ ಮಹಿಳಾ ಮಂಡಳಿ, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ವಿನಯ್ ಶರ್ಮಾ, ಪಿಟೀಲು: ಜನಾರ್ದನ್, ಮೃದಂಗ: ಬಿ.ಎಸ್. ಪ್ರಶಾಂತ್, ಆಯೋಜನೆ. ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

ಶ್ರೀರಾಮ ನವಮಿ ಸಂಗೀತೋತ್ಸವ: ಹರಿಕಥೆ: ದುಶ್ಯಂತ್ ಶ್ರೀಧರ್ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, 'ಪ್ರಜಾವಾಣಿ', ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ದುಶ್ಯಂತ್ ಶ್ರೀಧರ್

ಶ್ರೀರಾಮೋತ್ಸವ ಕಾರ್ಯಕ್ರಮ: ಬೆಳಿಗ್ಗೆ 8: ಆಂಜನೇಯ ಹೋಮ, ಅಭಿಷೇಕ, ಅಲಂಕಾರ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸೋಮ ಪ್ರದೋಷ ಪೂಜೆ, ಶಯನೋತ್ಸವ, ಆಯೋಜನೆ: ಸನಾತನ ಭಕ್ತ ಮಂಡಳಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನದ ರಸ್ತೆ, ವಿಜಯನಗರ, ಸಂಜೆ 6ರಿಂದ

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ:ರಕ್ಷಿತಾ ರಮೇಶ್, ಮೃದಂಗ: ರಘು ಭಾಗವತ್, 'ಕೃಷ್ಣ ಕಾರುಣ್ಯ' ಪ್ರವಚನ ಮಾಲಿಕೆ: ಪಾವಗಡ ಪ್ರಕಾಶರಾವ್, ಕರ್ನಾಟಕ ಶಾಸ್ತ್ರೀಯ ಸಂಗೀತ, ಕೊಳಲು: ಎಚ್.ಎಸ್. ವೇಣುಗೋಪಾಲ್, ಎಂ.ಎಸ್. ಪ್ರಮುಖ್, ಶಶಾಂಕ್ ಜೋಡಿದಾರ್, ಅಚ್ಯುತ್ ಎಂ. ಆತ್ರೇಯ, ಅಪ್ರಮೇಯ ಶೇಷಾದ್ರಿ, ಮೃದಂಗ: ವಿನಯ್ ಎಂ. ನಾಗರಾಜನ್, ಮೋರ್ಚಿಂಗ: ಪ್ರಸನ್ನ ಕುಮಾರ್ ಡಿ.ವಿ., ಘಟ: ಶ್ರೀನಿಧಿ ಎಂ. ಕೌಂಡಿನ್ಯ, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

ರಾಮಾಯಣ ಸಪ್ತಾಹ: ಪ್ರವಚನ: ಸಾಯಿ ಗಿರಿಧರ್ ಸಾಯಿರಾಮ್, ಆಯೋಜನೆ ಮತ್ತು ಸ್ಥಳ: ಸತ್ಯ ಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 5ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವೈಷ್ಣವಿ ವಿ., ಗಾಯತ್ರಿ ವಿ., ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಗಾಯನ: ಜಯತೀರ್ಥ ಮೇವುಂಡಿ, ಹಾರ್ಮೋನಿಯಂ: ಸತೀಶ್ ಕೊಳ್ಳಿ, ತಬಲಾ: ರಾಜೇಂದ್ರ ನಾಕೋಡ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ

ಶ್ರೀರಾಮ ನವಮಿ ಉತ್ಸವ: ಹರಿದಾಸ ಗಾಯನ: ಸುಚೇತನಾ ರಂಗಸ್ವಾಮಿ ಮತ್ತು ತಂಡ, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಹರಿನಾಮ ಸಂಕೀರ್ತನೆ, ಗಾಯನ: ಮನಸ್ವಿ ಕಶ್ಯಪ್, ದೀಪ್ತಿ ಶ್ರೀನಿವಾಸನ್, ಕೀ–ಬೋರ್ಡ್:ಅಮಿತ್ ಶರ್ಮಾ, ತಬಲಾ: ಸುದರ್ಶನ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಭರತ್ ಸುಂದರ್, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ಡೆಲ್ಲಿ ಸಾಯಿರಾಂ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮೋತ್ಸವ: ರಾಗ ರಂಜನಿ–ಬಾನ್ಸುರಿ ವಾದನ: ಪ್ರವೀಣ್ ಗೋಡ್ಖಿಂಡಿ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಮಹಾವೀರ ಜನ್ಮಕಲ್ಯಾಣ: ಸಾನ್ನಿಧ್ಯ: ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ, ಅಧ್ಯಕ್ಷತೆ: ಕೆ.ಎನ್. ವಿಜಯಕುಮಾರ್, ಉಪಸ್ಥಿತಿ: ಧರ್ಮಸ್ಥಳದ ಸುರೇಂದ್ರಕುಮಾರ್, ಅನಿಲ್ ಸೇಥಿ, ಅತಿಥಿ: ಮನೂಜ್ ಜೈನ್, ಉಪನ್ಯಾಸ: ಮುನಿರಾಜರೆಂಜಾಳ, ಆಯೋಜನೆ: ದಿಗಂಬರ ಮಹಾವೀರ ಸಂಘ, ಸ್ಥಳ: ಎಚ್‌ಎಎಲ್ ಕಲ್ಯಾಣ ಮಂಟಪ, ವಿಮಾನಪುರ, ಬೆಳಿಗ್ಗೆ 10.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಮುತ್ಯಾಲಮ್ಮ ದೇವಿಗೆ ದೃಷ್ಟಿ ಮತ್ತು ಆವಾಹನ ಪೂಜೆ, ಅನ್ನಸಂತರ್ಪಣೆ, ಮಂದಾಸನೋತ್ಸವ, ಆಯೋಜನೆ. ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಮಧ್ಯಾಹ್ನ 12ರಿಂದ

ವಿಶ್ವವಿಖ್ಯಾತ ಕರಗ ಶಕ್ತ್ಯೋತ್ಸವ: ವಿಶೇಷ ಪೂಜೆ, ಆಯೋಜನೆ: ಬೆಂಗಳೂರು ನಗರದ ಧರ್ಮರಾಯಸ್ವಾಮಿ ದೇವಸ್ಥಾನ, ಸ್ಥಳ: ಅಣ್ಣಮ್ಮ ದೇವಸ್ಥಾನ, ಕೆಂಪೇಗೌಡ ವೃತ್ತ, ಮಧ್ಯಾಹ್ನ 12.30

ಪ್ರವಚನ ವಾಹಿನಿ: 'ಶರೀರ ತ್ರಯ' ಕುರಿತು ಪ್ರವಚನ: ಶ್ರೀನಿವಾಸ ಪ್ರಸಾದ್ ಸಿ.ವಿ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact : 9886213331 : 9901641752
9845114560 : 9731810277
080 - 45557163 / 164

RENTAL PROPERTIES

Accommodation Wanted

Farm House/Land/ Resorts

REQUIREMENT OF
Land for Rent @ Hulimavu Bannerghatta Rd & Peenya Industrial area Tumkur Rd Frontage :60 feet Above Total land 10000 sqft contact: +919845208082.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಚಿತ್ರಾವಳಿ

ರಾಮನವಮಿ ಹಬ್ಬದ ಅಂಗವಾಗಿ ವಿಜಯನಗರದ ಪತ್ರಿಕಾ ವಿತರಕರ ಬಳಗದ ಸದಸ್ಯರು ಬೀದಿ ಬದಿ ವ್ಯಾಪಾರಿಗಳು ಮತ್ತು ಸಾರ್ವಜನಿಕರಿಗೆ ಪ್ರಸಾದ ವಿತರಿಸಿದರು

ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನ ಆಯೋಜಿಸಿದ 'ಟಿ. ಸುನಂದಮ್ಮ ಪ್ರಶಸ್ತಿ' ಯನ್ನು ಹಾಸ್ಯ ಸಾಹಿತಿ ಭುವನೇಶ್ವರಿ ಹೆಗಡೆ ಅವರಿಗೆ ಎಂ.ಎಸ್. ನರಸಿಂಹಮೂರ್ತಿ (ಎಡದಿಂದ ಮೂರನೆಯವರು) ಭಾನುವಾರ ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಪ್ರಧಾನ ಮಾಡಿದರು. ವಸುಂಧರಾ ಭೂಪತಿ, ಎಚ್. ಡುಂಡಿರಾಜ್, ಅಧ್ಯಕ್ಷ ಎಂ. ನರಸಿಂಹಮೂರ್ತಿ, ಎಚ್.ಎಲ್. ಪುಷ್ಪ, ಪತ್ರಕರ್ತೆ ಆರ್. ಪೂರ್ಣಿಮಾ, ಎಲ್.ವಿ. ಶಾಂತಕುಮಾರಿ ಇದ್ದಾರೆ. –ಪ್ರಜಾವಾಣಿ ಚಿತ್ರ

ರಾಜಧಾನಿಯ 23 ಕ್ಷೇತ್ರಗಳಿಗೆ ಪದವೀಧರರನ್ನೇ ಹುಡುಕಿ ಟಿಕೆಟ್ ಘೋಷಿಸಿದ ಆಮ್ ಆದ್ಮಿ ಪಕ್ಷ

ಸವಾಲೊಡ್ಡಲು ವೈದ್ಯ, ಎಂಜಿನಿಯರ್‌ಗಳ ಸಿದ್ಧತೆ

• ಆದಿತ್ಯ ಕೆ.ಎ.

ಬೆಂಗಳೂರು: ದೆಹಲಿ ಹಾಗೂ ಪಂಜಾಬ್‌ನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಆಮ್ ಆದ್ಮಿ ಪಕ್ಷ (ಎಎಪಿ) ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲೂ ಅಚ್ಚರಿ ಮೂಡಿಸುವ ತವಕದಲ್ಲಿದೆ.

ಬೆಂಗಳೂರಿನ 28 ಕ್ಷೇತ್ರಗಳ ಪೈಕಿ 23 ಕ್ಷೇತ್ರಗಳಿಗೆ ಆಪ್ ಅಭ್ಯರ್ಥಿಗಳ ಹೆಸರು ಘೋಷಿಸಿದ್ದು, ಉಳಿದ 5 ಕ್ಷೇತ್ರಗಳಿಗೆ ಪದವೀಧರರ ಹುಡುಕಾಟದಲ್ಲಿದೆ.

ರಾಜಧಾನಿಯ ಎಲ್ಲ ಕ್ಷೇತ್ರಗಳ‌ಲ್ಲೂ ಎಎಪಿಯಿಂದ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. 'ಆಪ್' ಅಭ್ಯರ್ಥಿಗಳ ಮತ ಗಳಿಕೆಯೂ ಫಲಿತಾಂಶದ ಮೇಲೂ ಪರಿಣಾಮ ಬೀರಲಿದೆ ಎಂದು ಹೇಳುತ್ತಿರುವ ಮುಖಂಡರು, ಅಭ್ಯರ್ಥಿಗಳ ಆಯ್ಕೆಯಲ್ಲೂ ಅಚ್ಚರಿ ಮೂಡಿಸಿದ್ದಾರೆ.



ಗೆದ್ದರೆ ಕ್ಷೇತ್ರದಲ್ಲಿ ರಸ್ತೆಗಳ ಸ್ಥಿತಿ ಸುಧಾರಣೆ, ಶುದ್ಧ ಕುಡಿಯುವ ನೀರು, ಬಡ ಕುಟುಂಬದ ಮಕ್ಕಳಿಗೆ ಉತ್ತಮ ಶಿಕ್ಷಣ ಕಲ್ಪಿಸಲಾಗುವುದು.
ಸೀತಾರಾಮ್ ಗುಂಡಪ್ಪ
ಬೊಮ್ಮನಹಳ್ಳಿ ಅಭ್ಯರ್ಥಿ

ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಎಂ.ಬಿ.ಎ ಪದವೀಧರರು, ಮಾಜಿ ಸೈನಿಕರು, ವೈದ್ಯರು, ವಕೀಲರು, ವಿದೇಶಗಳಲ್ಲಿ ಕೆಲಸ ಮಾಡಿದ್ದವರಿಗೆ ಟಿಕೆಟ್ ಘೋಷಿಸಿದೆ. ಆಗಲೇ ಅವರೆಲ್ಲರೂ ಅಖಾಡದಲ್ಲಿ ಪ್ರಚಾರ ನಡೆಸುತ್ತಿದ್ದು ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸವಾಲೊಡ್ಡಲು ತಯಾರಿ ನಡೆಸಿದ್ದಾರೆ.

ಕೆ.ಮಥಾಯ್ ಅವರು ಶಾಂತಿನಗರ ಕ್ಷೇತ್ರದ ಅಭ್ಯರ್ಥಿ. ಮಥಾಯ್ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದರು. ಅವರು ನಿವೃತ್ತ ಕೆಎಎಸ್ ಅಧಿಕಾರಿಯೂ ಹೌದು. ಶಾಂತಿನಗರದಲ್ಲಿ ಪ್ರಮುಖ ರಾಜಕೀಯ ಪಕ್ಷದ ಅಭ್ಯರ್ಥಿಗಳಿಗೆ ಸವಾಲು ಹಾಕಲು ತಯಾರಾಗಿದ್ದಾರೆ.

ಇನ್ನು ಪುಲಿಕೇಶಿ ನಗರದಿಂದ ಸ್ಪರ್ಧಿಸುತ್ತಿರುವ ಸುರೇಶ್ ರಾಥೋಡ್ ಸಾಫ್ಟ್‌ವೇರ್ ಎಂಜಿನಿಯರ್. ವೃತ್ತಿ ಬಿಟ್ಟು ಈಗ ಪೂರ್ಣ ಪ್ರಮಾಣದಲ್ಲಿ ರಾಜಕೀಯ ಕ್ಷೇತ್ರ ಪ್ರವೇಶಿಸಿ ಎಎಪಿ ಅಭ್ಯರ್ಥಿ.

ಸಿ.ವಿ.ರಾಮನ್ ನಗರದ ಅಭ್ಯರ್ಥಿ ಮೋಹನ ದಾಸರಿ ಸುರತ್ಕಲ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನಗರದಲ್ಲಿ ಆರುಶಿ ಫೌಂಡೇಶನ್ ಸ್ಥಾಪಿಸಿದ್ದಾರೆ. 200 ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸುತ್ತಿದ್ದಾರೆ ಎಂದು ಪಕ್ಷದ ಮುಖಂಡರೊಬ್ಬರು ಹೇಳುತ್ತಾರೆ.

ರಾಜಾಜಿನಗರ ಕ್ಷೇತ್ರದ ಅಭ್ಯರ್ಥಿ ಬಿ.ಟಿ.ರಾಜಣ್ಣ, ಪದ್ಮನಾಭ ನಗರದ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ 36 ವರ್ಷದ ಅಜಯ್‌ಗೌಡ, ಬಿ.ಟಿ.ಎಂ ಲೇಔಟ್‌ನಿಂದ ಕಣಕ್ಕೆ ಇಳಿಯುತ್ತಿರುವ ಶ್ರೀನಿವಾಸ ರೆಡ್ಡಿ ಬಿ.ಇ ಪದವೀಧರರು.

ಬೊಮ್ಮನಹಳ್ಳಿಯಿಂದ ಅಖಾಡಕ್ಕೆ ಇಳಿಯುತ್ತಿರುವ 70 ವರ್ಷದ ಸೀತಾರಾಮ್ ಗುಂಡಪ್ಪ ಅವರು, ವಿದೇಶದ ಪ್ರಮುಖ ತೈಲ ಕಂಪನಿಗಳಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ್ದರು. ಸೌದಿ ಅರೇಬಿಯಾ, ಇರಾಕ್, ಇರಾನ್, ಕತಾರ್‌ನಲ್ಲಿ ಕೆಲಸ ಮಾಡಿದ್ದ ಗುಂಡಪ್ಪ ಅವರನ್ನು 'ಆಪ್' ಕಣಕ್ಕೆ ಇಳಿಸುತ್ತಿದೆ.

ಸುಪ್ರೀಂ ಕೋರ್ಟ್ ವಕೀಲ ಬ್ರಿಜೇಶ್ ಕಾಳಪ್ಪ ಚಿಕ್ಕಪೇಟೆಯ ಅಭ್ಯರ್ಥಿ. ದಾಸರಹಳ್ಳಿ, ಮಹಾಲಕ್ಷ್ಮಿ, ಮಲ್ಲೇಶ್ವರ, ಹೆಬ್ಬಾಳ, ಶಿವಾಜಿನಗರದಲ್ಲೂ ಎಂಬಿಎ, ಎಂ.ಕಾಂ ಪದವಿ ಪಡೆದ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಲಾಗುತ್ತಿದೆ.

'ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆ ತರಲು, ಉನ್ನತ ಶಿಕ್ಷಣ ಪಡೆದವರಿಗೇ ಟಿಕೆಟ್ ನೀಡಲಾಗುತ್ತಿದೆ' ಎಂದು ಎಎಪಿ ಅಧ್ಯಕ್ಷ ಪ್ರತಾಪ್ ರೆಡ್ಡಿ ಹೇಳುತ್ತಾರೆ.

ವಿದೇಶದಿಂದ ವಾಪಸಾದ ವೈದ್ಯರಿಗೆ ಟಿಕೆಟ್

ವಿಜಯನಗರ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ 70 ವರ್ಷದ ರಮೇಶ್ ಬೆಲ್ಲಂಕೊಂಡ ಅವರು ವೃತ್ತಿಯಲ್ಲಿ ವೈದ್ಯರು. ಬೆಂಗಳೂರಿನಲ್ಲೇ ಎಂಬಿಬಿಎಸ್ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದ ಇವರು, 21 ವರ್ಷಗಳ ಕಾಲ ಅಮೆರಿಕದಲ್ಲಿ ವೈದ್ಯರಾಗಿದ್ದರು. ಅಲ್ಲಿಂದ ವಾಪಸಾದ ಬಳಿಕ ರಾಜ್ಯದಲ್ಲಿ ವೈದ್ಯ ವೃತ್ತಿ ಆರಂಭಿಸಿದ್ದರು.

'ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆ ತರುವ ಉದ್ದೇಶದಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ' ಎಂದು ರಮೇಶ್ ಬೆಲ್ಲಂಕೊಂಡ ಹೇಳುತ್ತಾರೆ.

ಯಲಹಂಕದಲ್ಲಿ ನಡೆದ 'ಪಂಚರತ್ನ ಯಾತ್ರೆ'ಯಲ್ಲಿ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾತನಾಡಿದರು. ಕ್ಷೇತ್ರದ ಅಭ್ಯರ್ಥಿ ಮುನೇಗೌಡ ಇದ್ದರು

'ಯೋಜನೆಗಳ ಹೆಸರಿನಲ್ಲಿ ಲೂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಯೋಜನೆಗಳ ಹೆಸರಿನಲ್ಲಿ ಜನರ ತೆರಿಗೆ ಹಣದ ಲೂಟಿ ಆಗುತ್ತಿದೆ. ಜೆಡಿಎಸ್ ನೇತೃತ್ವದ ಸರ್ಕಾರ ಬಂದರೆ ಇದಕ್ಕೆ ಇತಿಶ್ರೀ ಹಾಡುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಯಲಹಂಕ ಕ್ಷೇತ್ರದಲ್ಲಿ ಭಾನುವಾರ ಪಂಚರತ್ನ ರಥಯಾತ್ರೆಯಲ್ಲಿ ಅವರು ಮಾತನಾಡಿದರು.

'ಬಡವರಿಗೆ ಉಚಿತ ಮನೆ, ಉಚಿತ ಆರೋಗ್ಯ, ಅವರ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಲಾಗುವುದು. ಸಾಮಾನ್ಯವಾಗಿ ಬಡ ಮಧ್ಯಮ ವರ್ಗದವರು ಸಾಲ ಮಾಡುವುದೇ ಮಕ್ಕಳ ಶಿಕ್ಷಣ, ಆರೋಗ್ಯ ಹಾಗೂ ಮನೆ ಕಟ್ಟುವುದಕ್ಕಾಗಿ. ಮುಂದೆ ಇವರು ಶಾಶ್ವತವಾಗಿ ಸಾಲ ಮಾಡುವುದನ್ನು ತಪ್ಪಿಸುವುದೇ ನನ್ನ ಉದ್ದೇಶ' ಎಂದು ಎಚ್‌ಡಿಕೆ ಹೇಳಿದರು.

'ನನಗೆ ದ್ವೇಷದ ರಾಜಕಾರಣ ಗೊತ್ತಿಲ್ಲ. ಎಲ್ಲರೂ ಶಾಂತಿಯಿಂದ ಇರಬೇಕು ಎಂದು ಬಯಸುವವನು. ಹೀಗಾಗಿ, ಇಂತಹ ಆಡಳಿತ ಬೇಕು ಎನ್ನುವುದನ್ನು ಜನರೇ ತೀರ್ಮಾನ ಮಾಡಿಕೊಳ್ಳಬೇಕು' ಎಂದು ಹೇಳಿದರು.

ಕ್ಷೇತ್ರದ ಅಭ್ಯರ್ಥಿ ಮುನೇಗೌಡ, ಮಾಜಿ ಶಾಸಕ ಇ. ಕೃಷ್ಣಪ್ಪ, ಪಕ್ಷದ ಯಲಹಂಕ ಕ್ಷೇತ್ರದ ಅಧ್ಯಕ್ಷ ಕೃಷ್ಣಪ್ಪ, ಪಕ್ಷದ ಕಾನೂನು ಘಟಕದ ರಾಜ್ಯ ಅಧ್ಯಕ್ಷ ಎ.ಪಿ.ರಂಗನಾಥ್ ಇದ್ದರು.

ಚುನಾವಣೆ ಬಹಿಷ್ಕಾರಕ್ಕೆ ನಿರ್ಧಾರ

ಬೆಂಗಳೂರು: ಮೂಲಸೌಕರ್ಯ ದಿಂದ ವಂಚಿತವಾಗಿರುವ ಲಿಂಗಧೀರನ ಹಳ್ಳಿ (ಡಿ ಗ್ರೂಪ್) ಕುವೆಂಪುನಗರ ನಿವಾಸಿಗಳು ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸಲು ಮುಂದಾಗಿದ್ದಾರೆ.

ಅಂಧ್ರಹಳ್ಳಿ ಮುಖ್ಯರಸ್ತೆಯಲ್ಲಿನ ಈ ಬಡಾವಣೆ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, 1,500 ಮನೆಗಳಿವೆ. ಹಲವು ವರ್ಷಗಳಿಂದ ಮೂಲಸೌಕರ್ಯ ಇಲ್ಲದೆ ನಿವಾಸಿಗಳು ತೊಂದರೆ ಅನುಭವಿಸುವಂತಾಗಿದೆ ಎಂದು ನಿವಾಸಿಗಳು ಹೇಳಿದ್ದಾರೆ. ಪಕ್ಕದ ಬಡಾವಣೆಗಳು ಅಭಿವೃದ್ಧಿಯಾಗಿದ್ದು, ಡಿ ಗ್ರೂಪ್ ಬಡಾವಣೆ ಅಭಿವೃದ್ಧಿ ಕಂಡಿಲ್ಲ. ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಕುಡಿಯುವ ನೀರು, ಬೀದಿದೀಪ, ಚರಂಡಿ, ಸ್ಯಾನಿಟರಿ ವ್ಯವಸ್ಥೆ ಇಲ್ಲ. ಆಟೊರಿಕ್ಷಾ, ಕ್ಯಾಬ್ ಚಾಲಕರು ಬಡಾವಣೆಗೆ ಬರಲು ನಿರಾಕರಿಸುತ್ತಿದ್ದಾರೆ ಎಂದು ದೂರಿದ್ದಾರೆ.

'ಸರ್ಕಾರದ ಗಮನ ಸೆಳೆಯಲು ಮತದಾನ ಬಹಿಷ್ಕರಿಸಲು ನಿರ್ಧರಿಸಿದ್ದೇವೆ. ಇದು, ಸುದುದ್ದೇಶದ ನಿರ್ಧಾರ. ಬೆಂಬಲಿಸಬೇಕು' ಎಂದು ನಿವಾಸಿಗಳ ಸಂಘ ಕರಪತ್ರವನ್ನು ಮುದ್ರಿಸಿ ಇಡೀ ಬಡಾವಣೆಗೆ ವಿತರಿಸಿದೆ.

'ಸ್ಯಾಂಕಿ ಮೇಲ್ಸೇತುವೆ: ಸರ್ಕಾರದ ದಬ್ಬಾಳಿಕೆ'

ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಮುಖ್ಯಸ್ಥ, ಶಾಸಕ ಪ್ರಿಯಾಂಕ್ ಖರ್ಗೆ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿರೋಧ ಪಕ್ಷದವರು, ಜನಸಾಮಾನ್ಯರು ಸರ್ಕಾರದ ವಿರುದ್ಧ ಮಾತನಾಡಿದರೆ ದೌರ್ಜನ್ಯ, ಪ್ರಕರಣ ದಾಖಲಿಸಲಾಗುವುದು ಎಂಬ ಸಂದೇಶವನ್ನು ಸಚಿವ ಅಶ್ವತ್ಥನಾರಾಯಣ ಮೂಲಕ ಬಿಜೆಪಿ ಸರ್ಕಾರ ಕಳುಹಿಸುತ್ತಿದೆ' ಎಂದು ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಸ್ಯಾಂಕಿ ಮೇಲ್ಸೇತುವೆ ಯೋಜನೆ ವಿರೋಧಿಸಿ ಮಲ್ಲೇಶ್ವರದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾದ 60ರಿಂದ 70 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿರುವುದನ್ನು ಉಲ್ಲೇಖಿಸಿ ಅವರು ಈ ಮಾತು ಹೇಳಿದರು.

'ಮುಖ್ಯಮಂತ್ರಿ ಬೊಮ್ಮಾಯಿ ಹೇಳುತ್ತಿರುವಂತೆ ಉತ್ತರ ಪ್ರದೇಶ ಮಾದರಿ ಜಾರಿ ಆಗುತ್ತಿದೆ. ಅಲ್ಲಿನ ಮಾದರಿಯಲ್ಲೇ ಸರ್ಕಾರದ ವಿರುದ್ಧ ಯಾರೂ ಮಾತನಾಡಬಾರದು, ಪ್ರಶ್ನಿಸಬಾರದು, ಪ್ರತಿಭಟಿಸಬಾರದು‌ ಎಂಬ ದಬ್ಬಾಳಿಕೆ ನಡೆದಿದೆ' ಎಂದು ಆರೋಪಿಸಿದರು.

ಎಐಸಿಸಿ ಸಂಶೋಧನಾ ವಿಭಾಗದ ಅಧ್ಯಕ್ಷ ಪ್ರೊ. ರಾಜೀವ್ ಗೌಡ, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ಮತ್ತು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅನೂಪ್ ಅಯ್ಯಂಗಾರ್ ಜತೆ ಅವರು ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದರು.

'ಸ್ಯಾಂಕಿ ಮೇಲ್ಸೇತುವೆ ರಸ್ತೆ ವಿಸ್ತರಣೆ ಬೇಡವೆಂಬ ಮನವಿಗೆ 22 ಸಾವಿರ ಜನರು ಸಹಿ ಹಾಕಿದ್ದಾರೆ. ಎರಡು ಸಾವಿರ ಶಾಲಾ ಮಕ್ಕಳು ಬೊಮ್ಮಾಯಿ ಅಂಕಲ್‌ಗೆ ಪತ್ರ ಬರೆದು, ಪರಿಸರ, ಶಾಲೆಗೆ ತೊಂದರೆಯಾಗಲಿದೆ ಎಂದು ಮನವಿ ಸಲ್ಲಿಸಿದ್ದಾರೆ. ಯೋಜನೆ ಜನಪರವಾಗಿದ್ದರೆ ಸಾರ್ವಜನಿಕರ ಅಭಿಪ್ರಾಯ ಯಾಕೆ ಸಂಗ್ರಹಿಸಿಲ್ಲ ಯಾಕೆ? ಪರಿಸರದ ಮೇಲೆ ಆಗುವ ಪರಿಣಾಮದ ಅಧ್ಯಯನ ವರದಿ ಎಲ್ಲಿದೆ? ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಆದೇಶ ಪಾಲನೆ ಆಗಿದೆಯೇ?ಇಷ್ಟು ದೊಡ್ಡ ಯೋಜನೆಗೆ ಡಿಪಿಆರ್ ಎಲ್ಲಿದೆ? ಈ ಬಗ್ಗೆ ತಜ್ಞರ ಅಭಿಪ್ರಾಯ ಕೇಳಿಲ್ಲ ಯಾಕೆ?' ಎಂದೂ ಅವರು ಪ್ರಶ್ನಿಸಿದ್ದಾರೆ.

ಅನೂಪ್ ಅಯ್ಯಂಗಾರ್ ಮಾತನಾಡಿ, 'ಸರ್ಕಾರದ ಜನವಿರೋಧಿ ಯೋಜನೆ ವಿರೋಧಿಸಿ ನಡೆದ ಮೌನ ಪ್ರತಿಭಟನೆಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆ ಮೂಲಕ, ಸಾರ್ವಜನಿಕರ ವಿರುದ್ಧ ದೌರ್ಜನ್ಯ ನಡೆಸಲಾಗಿದೆ' ಎಂದು ಆರೋಪಿಸಿದರು.

ರಾಜಕೀಯ ಗಿಮಿಕ್: ಸಚಿವ ಅಶ್ವತ್ಥನಾರಾಯಣ ತಿರುಗೇಟು

ಬೆಂಗಳೂರು: 'ಸ್ಯಾಂಕಿ ಮೇಲ್ಸೇತುವೆ ಯೋಜನೆ ಸಂಬಂಧ ಅಂತಿಮ ನಿರ್ಧಾರವನ್ನು ಜನಾಭಿಪ್ರಾಯಕ್ಕೆ ಸ್ಪಂದಿಸಿ, ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರಕ್ಕೆ (ಬಿಎಂಎಲ್‌ಟಿಎ) ವಹಿಸಲಾಗಿದೆ. ಇದರಲ್ಲಿ ನನ್ನ ನಿರ್ಧಾರ ಏನೂ ಇಲ್ಲ. ಪ್ರಿಯಾಂಕ್ ಖರ್ಗೆ ಅವರಿಗೂ ಇದು ಗೊತ್ತಿದೆ. ಆದರೂ ಅವರು ಇದರಲ್ಲಿ ರಾಜಕೀಯ ಗಿಮಿಕ್ ಮಾಡುತ್ತಿದ್ದಾರೆ' ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಕಿಡಿಕಾರಿದ್ದಾರೆ.

ಪ್ರಿಯಾಂಕ್ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಅವರು, 'ಅವರು ಚಿತ್ತಾಪುರದ ರಾಜಕೀಯವನ್ನು ಮಲ್ಲೇಶ್ವರಕ್ಕೆ ತರುವ ದುಸ್ಸಾಹಸ ಮಾಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದ್ದಾರೆ.

'ಪೊಲೀಸರು ಪ್ರಕರಣ ದಾಖಲಿಸಿರುವುದಕ್ಕೂ ನನಗೂ ಸಂಬಂಧವಿಲ್ಲ. ಕಾನೂನು ಸುವ್ಯವಸ್ಥೆಗೆ ಧಕ್ಕೆ ಬಂದಾಗ ಅವರು ತಮ್ಮ ಕರ್ತವ್ಯ ನಿರ್ವಹಿಸಿರುತ್ತಾರೆ. ಇಷ್ಟಕ್ಕೂ ಬೆಂಗಳೂರಿನಲ್ಲಿ ಎಲ್ಲೆಂದರಲ್ಲಿ ಪ್ರತಿಭಟನೆ ಮಾಡುವಂತಿಲ್ಲ ಎಂದು ಹೈಕೋರ್ಟ್ ಸೂಚನೆ ನೀಡಿರುವುದು ಇವರ ಗಮನಕ್ಕೆ ಬಾರದಿರುವುದು ದುರಂತ' ಎಂದೂ ಟೀಕಿಸಿದ್ದಾರೆ.

'ಮೇಲ್ಸೇತುವೆಗೆ ವಿರೋಧ ವ್ಯಕ್ತಪಡಿಸುವವರ ಜೊತೆ ನಾನೂ ಮಾತನಾಡಿದ್ದೇನೆ. ಅವರ ಸಲಹೆ ಪ್ರಕಾರ ಬಿಬಿಎಂಪಿಯು ಬಿಎಂಎಲ್‌ಟಿಎಗೆ ವಹಿಸಿದೆ. ಈ ಸತ್ಯ ಗೊತ್ತಿದ್ದರೂ ಮಲ್ಲೇಶ್ವರದಲ್ಲಿ ಮೂಲೆಗುಂಪಾಗಿರುವ ಕಾಂಗ್ರೆಸ್, ಆಧಾರರಹಿತ ಆರೋಪ ಮಾಡುತ್ತ, ಅರ್ಥಹೀನವಾಗಿ ವರ್ತಿಸುತ್ತಿದೆ' ಎಂದಿದ್ದಾರೆ.

ಡಿಕೆಶಿ ಎದುರು ಅಪ್ಪಾಜಿ ಗೌಡ?

ರಾಮನಗರ: ಒಕ್ಕಲಿಗರ ಪ್ರಾಬಲ್ಯ ಇರುವ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಇದೇ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಮೂಲಕ ಸಮುದಾಯದ ಮತಗಳನ್ನು ಸೆಳೆಯಲು ಬಿಜೆಪಿ ಮುಂದಾಗಿದೆ.

ಬೆಂಗಳೂರಿನ ರೆಸಾರ್ಟ್ ಒಂದರಲ್ಲಿ ಭಾನುವಾರ ನಡೆದ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಜಿಲ್ಲೆಯ ನಾಲ್ಕು ಕ್ಷೇತ್ರಗಳ ಅಭ್ಯರ್ಥಿ ಕುರಿತು ಚರ್ಚೆ ನಡೆದಿದೆ. ಅಚ್ಚರಿ ಬೆಳವಣಿಗೆಯಲ್ಲಿ ಕನಕಪುರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಅಪ್ಪಾಜಿಗೌಡ ಅವರನ್ನು ಕಣಕ್ಕೆ ಇಳಿಸಲು ಪಕ್ಷ ಆಸಕ್ತಿ ತೋರಿದೆ ಎಂದು ಮೂಲಗಳು ತಿಳಿಸಿವೆ.

ಚನ್ನಪಟ್ಟಣ ವಿರೂಪಸಂದ್ರದವರಾದ ಅಪ್ಪಾಜಿಗೌಡ ವೃತ್ತಿಯಲ್ಲಿ ವೈದ್ಯರಾಗಿದ್ದು, ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕಳೆದ ಬಾರಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದರು. ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರಿರುವ ಅಪ್ಪಾಜಿಗೌಡ ರಾಮನಗರ, ಚನ್ನಪಟ್ಟಣ, ಕನಕಪುರ ಸೇರಿದಂತೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಟಿಕೆಟ್ ನೀಡುವಂತೆ ಬಿಜೆಪಿ ವರಿಷ್ಠರನ್ನು ಕೋರಿದ್ದರು.

ಕನಕಪುರದಿಂದ ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ನಂದಿನಿಗೌಡ ಸ್ಪರ್ಧಿಸಿದ್ದು, ಠೇವಣಿ ಕಳೆದುಕೊಂಡಿದ್ದರು. ಈ ಬಾರಿ ಇಲ್ಲಿಂದ ಯಾವುದೇ ಪ್ರಬಲ ಟಿಕೆಟ್ ಆಕಾಂಕ್ಷಿಗಳು ಕಮಲ ಪಾಳಯದಲ್ಲಿ ಇಲ್ಲ. ಇಂತಹ ಹೊತ್ತಿನಲ್ಲಿ ಅಪ್ಪಾಜಿಗೌಡ ಹೆಸರು ಮುನ್ನಲೆಗೆ ಬಂದಿರುವುದು ಕುತೂಹಲ ಕೆರಳಿಸಿದೆ.

ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ನಡುವಣ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಕೆ. ಸುಧಾಕರ್ (ಎಡಚಿತ್ರ), ವಿಧಾನಸಭೆ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ವೀಕ್ಷಿಸಿದರು —ಪ್ರಜಾವಾಣಿ ಚಿತ್ರಗಳು

ಗುರುದೇವರಿಗೆ ವಚನ ಪ್ರಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಜನ್ಮದಿನ ನಿಮಿತ್ತ ವಚನ ಜ್ಯೋತಿ ಬಳಗವು 'ಶ್ರೀ ಗುರುದೇವರಿಗೆ ವಚನ ಪ್ರಣಾಮ' ಕಾರ್ಯಕ್ರಮ ಏರ್ಪಡಿಸಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಬೆಂಗಳೂರು ಯೂನಿವರ್ಸಿಟಿ ಟೀಚರ್ಸ್ ಕೌನ್ಸಿಲ್ ಮಾಜಿ ಅಧ್ಯಕ್ಷ ಡಾ. ಮುನಿರಾಜಪ್ಪ, 'ಕಾವಿಯ ಮೌಲ್ಯ ಕಡಿಮೆಯಾಗುತ್ತಿರುವಾಗ, ಅದರ ಘನತೆಯನ್ನು ಎತ್ತಿಹಿಡಿದವರು ಶಿವಕುಮಾರ ಸ್ವಾಮೀಜಿ' ಎಂದು ಹೇಳಿದರು.

'ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ಶಿಕ್ಷಣದ ಅವಕಾಶ ನೀಡಿ ಕೋಟ್ಯಂತರ ಜನರು ಬದುಕನ್ನು ಕಟ್ಟಿಕೊಳ್ಳಲು ಕಾರಣಕರ್ತರಾದ ಶಿವಕುಮಾರ ಸ್ವಾಮೀಜಿ ನಡೆದಾಡಿದ ದೇವರು' ಎಂದು ಬಣ್ಣಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, 'ವರ್ಗ, ವರ್ಣ ಭೇದವಿಲ್ಲದೆ, ಜಾತಿ ತಾರತಮ್ಯ ಮಾಡದೆ ಸಮ ಸಮಾಜವನ್ನು ಕಟ್ಟಿದವರು ಶಿವಕುಮಾರ ಸ್ವಾಮೀಜಿ. ಅವರ ಮಾರ್ಗದಲ್ಲಿಯೇ ವಚನಜ್ಯೋತಿ ಬಳಗ ಹೆಜ್ಜೆ ಹಾಕುತ್ತಿದೆ' ಎಂದು ಹೇಳಿದರು.

ನೃತ್ಯದಿಶಾ ಶಾಲೆಯ ಗುರುದರ್ಶಿನಿ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ಹಿಂದೂಸ್ಥಾನಿ ಗಾಯಕರಾದ ಸರಸ್ವತಿ ಹೆಗಡೆ, ಮೀನಾಕ್ಷಿ ಮೇಟಿ, ಕರ್ನಾಟಕ ಸಂಗೀತದ ಗಾಯಕಿ ಸರ್ವಾಣಿ, ಬಾಲ ಪ್ರತಿಭೆ ಪೂರ್ಣಿಕ, ದಿಶಾ ವಚನಗಳನ್ನು ಹಾಡಿದರು.

ಬಳಗದ ಪ್ರಭು ಇಸುವನಹಳ್ಳಿ, ರಾಜಾ ಗುರುಪ್ರಸಾದ್, ಪದ್ಮಜ ಪ್ರಸನ್ನ, ಕಲ್ಯಾಣ ಪಟ್ಟಣ ಕ್ಷೇಮಾಭಿವೃದ್ಧಿ ಸಂಘದ ಚೆನ್ನಮಲ್ಲಯ್ಯ, ಜನಪದ ಗಾಯಕಿ ಶಕುಂತಲ ಬಾಗಲಕೋಟ್ ಇದ್ದರು.

ಕಾರ್ಯಕ್ರಮದಲ್ಲಿ ನೃತ್ಯಗುರು ದರ್ಶಿನಿ ಮಂಜುನಾಥ ಅವರನ್ನು ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಪ್ರಸನ್ನ, ಪ್ರಭು, ಕೆ.ಸಿ. ಎಚ್.ಎಸ್. ಬಡಾವಣೆ ಮಾಜಿ ಅಧ್ಯಕ್ಷ ಚೆನ್ನಮಲ್ಲಯ್ಯ, ಬಿಯುಟಿಸಿ ಮಾಜಿ ಅಧ್ಯಕ್ಷ ಡಾ. ಮುನಿರಾಜಪ್ಪ, ಬಳಗದ ಸಿಇಒ ಗುರುಪ್ರಸಾದ್ ಇದ್ದಾರೆ

ನವಜಾತ ಶಿಶು ಕಚ್ಚಿಕೊಂಡು ಅಡ್ಡಾಡಿದ ನಾಯಿ

ಶಿವಮೊಗ್ಗ: ಇಲ್ಲಿನ ಮೆಗ್ಗಾನ್ ಆಸ್ಪತ್ರೆ ಆವರಣದಲ್ಲಿ ಮಾರ್ಚ್ 31ರಂದು ನವಜಾತ ಹೆಣ್ಣು ಶಿಶು ಕಚ್ಚಿಕೊಂಡು ನಾಯಿ ಓಡಾಡಿದೆ. ಸಾರ್ವಜನಿಕರು, ಭದ್ರತಾ ಸಿಬ್ಬಂದಿ ನಾಯಿಯನ್ನು ಓಡಿಸಿ, ಪರೀಕ್ಷಿಸಿದಾಗ ಶಿಶು ಮೃತಪಟ್ಟಿರುವುದು ಗೊತ್ತಾಗಿದೆ.

ಈ ಬಗ್ಗೆ ಭದ್ರತಾ ಸಿಬ್ಬಂದಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನಮ್ಮ ಆಸ್ಪತ್ರೆಯದ್ದಲ್ಲ: 'ಬೇರೆ ಕಡೆ ಸಾವಿಗೀಡಾಗಿದ್ದ ಶಿಶುವನ್ನು ತಂದು ಆಸ್ಪತ್ರೆ ಹೆರಿಗೆ ವಾರ್ಡ್ ಹಿಂಭಾಗ ಎಸೆದು ಹೋಗಿದ್ದಾರೆ. ಅದನ್ನು ನಾಯಿ ಕಚ್ಚಿಕೊಂಡು ಬಂದಿದೆ. ಆ ದಿನ ಹೆರಿಗೆ ವಾರ್ಡ್‌ನಲ್ಲಿ ಯಾವುದೇ ಮಗು ಸಾವಿಗೀಡಾಗಿಲ್ಲ. ಶಿಶುವಿನ ತಂದೆ–ತಾಯಿ ಯಾರು ಎಂಬುದೂ ಗೊತ್ತಾಗಿಲ್ಲ. ತನಿಖೆ ನಡೆಸಲು ಜಿಲ್ಲಾಧಿಕಾರಿ ಸೂಚಿಸಿದ್ದು, ಎಫ್‌ಐಆರ್ ದಾಖಲಿಸಿದ್ದೇವೆ' ಎಂದು ಮೆಗ್ಗಾನ್ ಆಸ್ಪತ್ರೆಯ ಅಧೀಕ್ಷಕ ಡಾ.ಎಸ್.ಶ್ರೀಧರ್ ಹೇಳಿದರು.

4ರಂದು ಮಾಂಸ ಮಾರಾಟ ನಿಷೇಧ

ಬೆಂಗಳೂರು: ಮಹಾವೀರ ಜಯಂತಿ ನಿಮಿತ್ತ ಬಿಬಿಎಂಪಿ ವ್ಯಾಪ್ತಿ ಕಸಾಯಿಖಾನೆಗಳಲ್ಲಿ ಏ.4ರಂದು ಪ್ರಾಣಿವಧೆ ಹಾಗೂ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಧ್ವಜ ದಿನ ಸರಳ ಆಚರಣೆ

ಬೆಂಗಳೂರು: ವಿಧಾನಸಭಾ ಚುನಾವಣೆ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಪದಕ ಪ್ರದಾನ ಕಾರ್ಯಕ್ರಮ ಮುಂದೂಡಿ ಪೊಲೀಸ್ ಧ್ವಜ ದಿನಾಚರಣೆಯನ್ನು ಭಾನುವಾರ ಸರಳವಾಗಿ ಆಚರಿಸಲಾಯಿತು.

ಕೋರಮಂಗಲದಲ್ಲಿರುವ ರಾಜ್ಯ ಪೊಲೀಸ್ ಮೀಸಲು ಪಡೆಯ (ಕೆಎಸ್‌ಆರ್‌ಪಿ) ಮೈದಾನದಲ್ಲಿ ಸಮಾರಂಭ ನಡೆಯಿತು. ಪೊಲೀಸ್ ಪಡೆಗಳು ಸೇವಾ ಕವಾಯತು ನಡೆಸಿ, ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದವು.

ಅತಿಥಿಯಾಗಿದ್ದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಪೊಲೀಸ್ ಧ್ವಜ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ವಂದಿತಾ ಶರ್ಮಾ ಅವರು, 'ವಿಧಾನಸಭೆ ಚುನಾವಣೆ ಸಂದರ್ಭದಲ್ಲೂ ಪೊಲೀಸರು ಉತ್ತಮ ಕರ್ತವ್ಯ ನಿರ್ವಹಿಸಲಿದ್ದಾರೆಂಬ ನಂಬಿಕೆ ಇದೆ' ಎಂದರು.

ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಜನೀಶ್ ಗೋಯೆಲ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹಾಜರಿದ್ದರು.

ಚುನಾವಣೆ ಬಳಿಕ ಪದಕ ಪ್ರದಾನ: 'ಅತ್ಯುತ್ತಮ ಸೇವೆ ಸಲ್ಲಿಸಿದ್ದ ರಾಜ್ಯದ 42 ಪೊಲೀಸರಿಗೆ 2022ನೇ ಸಾಲಿನ ಮುಖ್ಯಮಂತ್ರಿ ಪದಕ ಘೋಷಿಸಲಾಗಿತ್ತು. ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರು ಪದಕ ಪ್ರದಾನ ಮಾಡಬೇಕಿತ್ತು. ಚುನಾವಣೆ ಘೋಷಣೆ ಆಗಿರುವುದರಿಂದ ಪದಕ ಪ್ರದಾನ ಮುಂದೂಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಾನೂನು ಅರಿವು ಹಾಗೂ ನೆರವು ಶಿಬಿರ'ದಲ್ಲಿ ನ್ಯಾಯಮೂರ್ತಿ ಬಿ.ವೀರಪ್ಪ, ಕುಲಪತಿ ಡಾ. ಎಸ್.ಎಂ.ಜಯಕರ, ನ್ಯಾಯಾಧೀಶರಾದ ಮಾವರ್ಕರ್, ಜೈಶಂಕರ್, ಎಸ್.ಎಫ್. ಗೌತಮ್ ಚಂದ್, ಕುಲಸಚಿವ ಎನ್.ಮಹೇಶ್ ಬಾಬು ಇದ್ದರು.

'ಮತ ಮಾರಾಟ ಮಾಡಬೇಡಿ'

ಬೆಂಗಳೂರು: 'ಚುನಾವಣೆಯಲ್ಲಿ ಮತಗಳ ಮಾರಾಟವಾಗಬಾರದು' ಎಂದು ನ್ಯಾಯಮೂರ್ತಿ ಬಿ.ವೀರಪ್ಪ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ರಾಮನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ಮಂಚನಬೆಲೆಯ ಸರ್ಕಾರಿ ಶಾಲಾ ಆವರಣದಲ್ಲಿ ನಡೆದ 'ಕಾನೂನು ಅರಿವು ಹಾಗೂ ನೆರವು ಶಿಬಿರ'ದಲ್ಲಿ ಮಾತನಾಡಿದ ಅವರು, 'ಜಾತಿ ಸಂಕೋಲೆಗಳಿಂದ ಬಂದಿ ಆಗಬಾರದು. ಜಾತಿ ಎಂಬ ವಿಷ ಬೀಜವನ್ನು ಕಿತ್ತು ಹಾಕಬೇಕು' ಎಂದು ಹೇಳಿದರು.

ಬೆಂಗಳೂರು ವಿ.ವಿ ಕುಲಪತಿ ಡಾ. ಎಸ್.ಎಂ.ಜಯಕರ ಮಾತನಾಡಿ, 'ಜನಸಾಮಾನ್ಯರು ಕಾನೂನಿನ ಸೌಲಭ್ಯ ಸದುಪಯೋಗ ಪಡೆದುಕೊಳ್ಳಬೇಕು' ಎಂದರು. ಬಾಲ್ಯ ವಿವಾಹ ವಿರುದ್ಧ ಜಾಗೃತಿಗೆ ನಾಟಕ ಪ್ರದರ್ಶನ ನಡೆಯಿತು.

14 ಮಕ್ಕಳಿಗೆ 'ಪಲ್ಲವ ಪುರಸ್ಕಾರ' ಗೌರವ

ಹವ್ಯಕ ಸಂಸ್ಥಾಪನ ದಿನ, ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವ್ಯಕ ಮಹಾಸಭೆ 80ನೇ ವರ್ಷದ ಸಂಸ್ಥಾಪನೆ ಉತ್ಸವ ಆಚರಿಸಿಕೊಳ್ಳುತ್ತಿದೆ. ಹಿರಿಯರ ಪ್ರಯತ್ನದಿಂದ ಮಹಾಸಭೆ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾಗಿ ಇಂದು ಹೆಮ್ಮರವಾಗಿ ಬೆಳೆದಿದೆ' ಎಂದು ಮಹಾಸಭೆ ಅಧ್ಯಕ್ಷ ಡಾ.ಗಿರಿಧರ ಕಜೆ ಹೇಳಿದರು.

ಭಾನುವಾರ ಅಖಿಲ ಹವ್ಯಕ ಮಹಾಸಭೆ ಆಯೋಜಿಸಿದ್ದ ಹವ್ಯಕ ಸಂಸ್ಥಾಪನ ದಿನ ಮತ್ತು ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಹವ್ಯಕ ಮಹಾಸಭೆಯ ಪ್ರಾದೇಶಿಕ ಕೇಂದ್ರವನ್ನು ಪುತ್ತೂರಿನಲ್ಲಿ ಆರಂಭಿಸಲಾಗಿದೆ. ಸಾಗರ, ಶಿರಸಿ, ಯಲ್ಲಾಪುರ ಹಾಗೂ ಉಡುಪಿಯಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗುವುದು' ಎಂದು ವಿವರಿಸಿದರು.

'ಹವ್ಯಕ ವಿಶೇಷ' ಪ್ರಶಸ್ತಿಗಳು ಅರ್ಜಿ ಹಾಕಿ ಪಡೆಯುವ ಪ್ರಶಸ್ತಿಗಳಲ್ಲ. ಸಮಾಜದಿಂದ ನಾಮನಿರ್ದೇಶನಗೊಂಡು ಆಯ್ಕೆಮಾಡುವ ಪ್ರಶಸ್ತಿ ಇದಾಗಿದೆ' ಎಂದರು.

'ಹವ್ಯಕ ವಿಭೂಷಣ' ಪ್ರಶಸ್ತಿಯನ್ನು ಪೆರುವೋಡಿ ನಾರಾಯಣ ಭಟ್ (ತೆಂಕುತಿಟ್ಟು ಯಕ್ಷಗಾನ), 'ಹವ್ಯಕ ಭೂಷಣ' ಪ್ರಶಸ್ತಿಯನ್ನು ಡಾ. ಲಕ್ಷ್ಮೀಶ್ ಸೋಂದಾ (ಇತಿಹಾಸಕಾರರು ಮತ್ತು ಶಿಕ್ಷಣ ತಜ್ಞರು), ಜಿ. ಎಸ್. ಹೆಗಡೆ ಸಪ್ತಕ (ಸಂಗೀತ ಕ್ಷೇತ್ರ), 'ಹವ್ಯಕಶ್ರೀ' ಪ್ರಶಸ್ತಿಯನ್ನು ಡಾ. ಕಿಶನ್ ಭಾಗವತ್ (ವೈದ್ಯಕೀಯ ಮತ್ತು ಸಾಮಾಜಿಕ ಸೇವೆ), ಲೆಫ್ಟಿನೆಂಟ್ ಕರ್ನಲ್ ವಿವೇಕ್ ಸಾಯ (ಭಾರತೀಯ ಭೂ ಸೇನಾ), ಅರ್ಪಿತಾ. ವಿ. ಎಂ (ಕ್ರೀಡೆ), 'ಹವ್ಯಕ ಸೇವಾಶ್ರೀ' ಪ್ರಶಸ್ತಿಯನ್ನು ನಾರಾಯಣ ಶಾನಭಾಗ (ವಿಶ್ರಾಂತ ನಿರ್ದೇಶಕರು ಹವ್ಯಕ ಅಧ್ಯಯನ ಕೇಂದ್ರ) ಇವರಿಗೆ ಪ್ರದಾನ ಮಾಡಲಾಯಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ 14 ಮಕ್ಕಳಿಗೆ 'ಪಲ್ಲವ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಪತ್ರಕರ್ತರಾದ ಎಂ.ಕೆ ಭಾಸ್ಕರ್ ರಾವ್ ಮತ್ತು ಈಶ್ವರ ದೈತೋಟ, ಮಹಾಸಭಾ ಪ್ರಧಾನ ಕಾರ್ಯದರ್ಶಿ ವೇಣುವಿಘ್ನೇಶ ಸಂಪ, ಉಪಾಧ್ಯಕ್ಷರಾದ ಆರ್. ಎಂ ಹೆಗಡೆ, ಶ್ರೀಧರ ಜೆ. ಭಟ್ಟ ಕೆಕ್ಕಾರು, ಕಾರ್ಯದರ್ಶಿಗಳಾದ ಪ್ರಶಾಂತ ಕುಮಾರ ಜಿ. ಭಟ್ಟ ಮಲವಳ್ಳಿ, ಆದಿತ್ಯ ಹೆಗಡೆ ಕಲಗಾರು, ಕಾರ್ಯಕ್ರಮದ ಸಂಚಾಲಕರಾದ ರವಿನಾರಾಯಣ ಪಟ್ಟಾಜೆ, ಮುಗಲೋಡಿ ಕೃಷ್ಣಮೂರ್ತಿ ಇದ್ದರು.

ಭಾನುವಾರ ನಡೆದ ಹವ್ಯಕ ಸಂಸ್ಥಾಪನದ ಸಮಾರಂಭದಲ್ಲಿ ವಿಶೇಷ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

'ಕಸ ತೆರವುಗೊಳಿಸಿ'

ಕಬ್ಬನ್‌ಪೇಟೆಯ ಬನ್ನಪ್ಪ ಪಾರ್ಕ್ ರಸ್ತೆಯಲ್ಲಿನ ಪಾಳು ಕಟ್ಟಡದಲ್ಲಿ ರಾಶಿಗಟ್ಟಲೆ ಕಸ ಹಾಕಲಾಗಿದೆ. ಸ್ಥಳೀಯ ನಿವಾಸಿಗಳು ಇಲ್ಲಿಗೆ ಕಸ ತಂದು ಹಾಕುತ್ತಿದ್ದು, ಅರ್ಧ ರಸ್ತೆ ತಿಪ್ಪೆಗುಂಡಿಯಾಗಿದೆ. ಕಸ ವಿಲೇವಾರಿಗೆ ಬಿಬಿಎಂಪಿ ಸಿಬ್ಬಂದಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಇನ್ನಾದರೂ ಇತ್ತ ಗಮನಹರಿಸಲಿ.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

'ಕಡತದಲ್ಲಿ ದುರಸ್ತಿಗೊಂಡ ರಸ್ತೆಗಳು'

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ನಾಗಶೆಟ್ಟಿ ಹಳ್ಳಿಯ ಕುವೆಂಪು ಶಾಲೆಗೆ ಸಂಪರ್ಕಿಸುವ ರಸ್ತೆ ಹದಗೆಟ್ಟಿದೆ. ಈ ಭಾಗದ ಕೆಲ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುತ್ತಿತ್ತು. ಆದರೆ, ಯುಗಾದಿ ಮುಗಿದರೂ ಡಾಂಬರೀಕರಣ ಮುಗಿದಿಲ್ಲ. ಇದರ ಅರ್ಥ ಏನು? ರಸ್ತೆಗಳು ಕೇವಲ ಕಡತದಲ್ಲೇ ಡಾಂಬರೀಕರಣಗೊಂಡಿವೆಯೋ ಎನ್ನುವ ಪ್ರಶ್ನೆ ನಾಗರಿಕರನ್ನು ಕಾಡುತ್ತಿದೆ. ಅಧಿಕಾರಿಗಳೇ ಉತ್ತರಿಸಬೇಕು.

ಶೋಭಾ ಹೆಗಡೆ, ಸ್ಥಳೀಯ ನಿವಾಸಿ

'ಹೋಟೆಲ್ ತ್ಯಾಜ್ಯ ತೆರವುಗೊಳಿಸಿ'

ಕೆಂಗೇರಿ-ಉತ್ತರಹಳ್ಳಿ ರಸ್ತೆಯಲ್ಲಿರುವ ಬಿ.ಜಿ.ಎಸ್ ಆಸ್ಪತ್ರೆ ವೃತ್ತದಿಂದ ಗ್ಲೋಬಲ್ ಟೆಕ್‌ಪಾರ್ಕ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯಲ್ಲಿ ತ್ಯಾಜ್ಯ ಸುರಿಯಲಾಗಿದೆ. ನಿತ್ಯ ಹೋಟೆಲ್, ಮೊಬೈಲ್ ಕ್ಯಾಂಟೀನ್‌ನವರು ತ್ಯಾಜ್ಯ ಹಾಕುತ್ತಿದ್ದಾರೆ. ಇದರಿಂದ ಈ ಪ್ರದೇಶದಲ್ಲಿ ದುರ್ವಾಸನೆ ಬೀರುತ್ತಿದೆ. ಸೊಳ್ಳೆಗಳು ಹೆಚ್ಚಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಇದೆ. ತ್ವರಿತಗತಿಯಲ್ಲಿ ತ್ಯಾಜ್ಯಕ್ಕೆ ಮುಕ್ತಿ ನೀಡಿ ಸ್ವಚ್ಛತೆ ಕಾಪಾಡಬೇಕು.

ಸೋಮಶೇಖರ ಬಾಬು, ಮೈಲಸಂದ್ರ

'ಖಾಲಿ ನಿವೇಶನದಲ್ಲಿನ ಕಸ ತೆರವುಗೊಳಿಸಿ'

ಸಂಜಯನಗರದ ಆರ್‌ಎಂವಿ 2ನೇ ಹಂತದ ವಾರ್ಡ್ ನಂ 25ರ 7ನೇ ಅಡ್ಡರಸ್ತೆಯಲ್ಲಿ ಖಾಲಿ ನಿವೇಶನಗಳಲ್ಲಿ ಕಸ ಸುರಿಯಲಾಗುತ್ತಿದೆ. ಹಲವು ವರ್ಷಗಳಿಂದ ನಿವೇಶನದ ನಿರ್ವಹಣೆ ಆಗಿಲ್ಲ. ಗಿಡ–ಗಂಟಿಗಳು ಬೆಳೆದಿವೆ. ಸೊಳ್ಳೆಗಳ ಉತ್ಪತ್ತಿ ಕೇಂದ್ರವಾಗಿದೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಶಶಿಧರ್, ಸ್ಥಳೀಯ ನಿವಾಸಿ

ತೀರ್ಥಹಳ್ಳಿಯ ತುಂಗಾ ಕಣಿವೆಯ 1081 ಎಕರೆ ಅರಣ್ಯಭೂಮಿ ಮಾಲೀಕತ್ವ

ಮೇಲ್ಮನವಿ ಸಲ್ಲಿಕೆಗೆ ವಿಳಂಬ: ಪರಿಸರಾಸಕ್ತರ ಆತಂಕ

• ವೆಂಕಟೇಶ ಜಿ.ಎಚ್

ಪ್ರಜಾವಾಣಿ ವಿಶೇಷ

ಶಿವಮೊಗ್ಗ: ತೀರ್ಥಹಳ್ಳಿಯ ತುಂಗಾ ಕಣಿವೆಯ 1,081 ಎಕರೆ ಅರಣ್ಯ ಭೂಮಿಯ ಮಾಲೀಕತ್ವದ ವಿಚಾರದಲ್ಲಿ ಹೈಕೋರ್ಟ್‌ನ ಏಕಸದಸ್ಯ ಪೀಠ ನೀಡಿರುವ ಆದೇಶದ ವಿರುದ್ಧ ವಿಭಾಗೀಯ ಪೀಠಕ್ಕೆ ಮೂರೂವರೆ ತಿಂಗಳು ಕಳೆದರೂ ಸರ್ಕಾರ ಮೇಲ್ಮನವಿ ಸಲ್ಲಿಸಿಲ್ಲ. ಇದು ಪರಿಸರಾಸಕ್ತರಲ್ಲಿ ಆತಂಕಕ್ಕೆ ಕಾರಣವಾಗಿದೆ.

ತೀರ್ಥಹಳ್ಳಿ ಭೀಮನಕಟ್ಟೆಯ ಭೀಮ ಸೇತುಮಠ ಮತ್ತು ಸರ್ಕಾರದ ಮಧ್ಯೆ 60 ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ 2022ರ ಡಿ. 12ರಂದು ನ್ಯಾಯಾಲಯ ಮಠದ ಪರವಾಗಿ ತೀರ್ಪು ಪ್ರಕಟಿಸಿದೆ.

‘ಇಲ್ಲಿಯವರೆಗೂ ಅರಣ್ಯ ಹಾಗೂ ಕಂದಾಯ ಇಲಾಖೆಗಳು ಮೇಲ್ಮನವಿ ಸಲ್ಲಿಸಿಲ್ಲ. ಅರಣ್ಯಭೂಮಿ ಮಾಲೀಕತ್ವ ಖಾಸಗಿಯವರ ಪಾಲಾಗಲಿದೆ’ ಎಂದು ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಬೇಸರ ವ್ಯಕ್ತಪಡಿಸುತ್ತಾರೆ.

ತೀರ್ಥಹಳ್ಳಿ ತಾಲ್ಲೂಕಿನ ತುಂಗಾ ಕಣಿವೆಯಲ್ಲಿರುವ ಅರಣ್ಯ ಪ್ರದೇಶ

ತೀರ್ಥಹಳ್ಳಿ ತಾಲ್ಲೂಕಿನ ಬಿಕ್ಸೆ-ಕೆಂಚಗುಡ್ಡೆ, ಕುಡುಮಲ್ಲಿಗೆ, ಮುತ್ತೂರು, ದಬ್ಬಣಗದ್ದೆ, ಹಾಲ್‌ಮಹಿಷಿ ಗ್ರಾಮಗಳಲ್ಲಿ ಈ ಅರಣ್ಯಭೂಮಿ ವ್ಯಾಪಿಸಿದೆ.

ಈ ಪ್ರದೇಶದಲ್ಲಿ ಅರಣ್ಯ ಇಲಾಖೆ ನೆಡುತೋಪು ಹಾಗೂ ಮೈಸೂರು ಕಾಗದ ಕಾರ್ಖಾನೆಯ (ಎಂಪಿಎಂ) ನೆಡುತೋಪು ಇದೆ. ನಂದಿ, ಶ್ರೀಗಂಧ, ಜಂಬೆ, ನೇರಳೆ ಮೊದಲಾದ ಮಲೆನಾಡಿನ ಅಪಾರ ಸಸ್ಯ ವೈವಿಧ್ಯ ಇಲ್ಲಿದೆ.

ಏನಿದು ಪ್ರಕರಣ?: 1890ರಲ್ಲಿ ಟಿಪ್ಪು ಸುಲ್ತಾನ್ ಕಾಲದಲ್ಲಿ ಸನ್ನದು (ಇನಾಂ) ಆಗಿ ನೀಡಲಾಗಿದ್ದ ಈ ಕಾನು ಭೂಮಿಯ ಮಾಲೀಕತ್ವ ಮುಂದೆ ಹಲವರಿಂದ ಕೈ ಬದಲಾಗಿ 1917–18ರಲ್ಲಿ ಭೀಮ ಸೇತುಮಠದ ಶ್ರೀಗಳ ಹೆಸರಿನಲ್ಲಿ ಖರೀದಿ ಒಪ್ಪಂದ (ಸೇಲ್ ಡೀಡ್) ಆಗಿದೆ. ಮುಂದೆ ಈ ಜಮೀನಿನಲ್ಲಿ 565 ಎಕರೆಯನ್ನು ಅರಣ್ಯಪ್ರದೇಶ ಎಂದು ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಸರ್ಕಾರ ಅರಣ್ಯಭೂಮಿ ಉಳಿಸಿಕೊಳ್ಳಲು ತುರ್ತಾಗಿ ಮೇಲ್ಮನವಿ ಸಲ್ಲಿಸಬೇಕು. ಕಾನೂನು ತಜ್ಞರ ತಂಡ ರಚಿಸಿ ಪ್ರಬಲವಾಗಿ ವಾದ ಮಂಡಿಸಬೇಕಿದೆ.

ಅನಂತ ಹೆಗಡೆ ಆಶೀಸರ
ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ

ಇದನ್ನು ಪ್ರಶ್ನಿಸಿ 1958ರಲ್ಲಿ ಮಠದ ಆಡಳಿತ ಸಂಪೂರ್ಣ ಭೂಮಿಯ ಮಾಲೀಕತ್ವ ಮಠದ ಹೆಸರಿಗೆ ವರ್ಗಾಯಿಸಿ ಕೊಡುವಂತೆ ಶಿವಮೊಗ್ಗದ ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ಮೊರೆ ಹೋಗಿತ್ತು. 1963ರಲ್ಲಿ ನ್ಯಾಯಾಲಯ ಆ ಅರ್ಜಿಯನ್ನು ವಜಾಗೊಳಿಸಿದೆ. ಅದನ್ನು ಪ್ರಶ್ನಿಸಿ 1964ರಲ್ಲಿ ಮಠವು ಹೈಕೋರ್ಟ್‌ನಲ್ಲಿ ಮನವಿ ಸಲ್ಲಿಸಿದ್ದು, ವಿಚಾರಣೆ ನಡೆಸಿದ್ದ ನ್ಯಾಯಾಲಯ ಅರ್ಜಿದಾರರ ಪರ ತೀರ್ಪು ನೀಡಿತ್ತು. ಆಗ ಅದಕ್ಕೆ ಮೇಲ್ಮನವಿ ಸಲ್ಲಿಸಿರಲಿಲ್ಲ.

ಈಗ ಸಂಬಂಧಿಸಿದ ಜಮೀನಿನ ದಾಖಲೆಗಳಲ್ಲಿ ಮಠದ ಹೆಸರು ಸೇರ್ಪಡೆಯಾಗಿದೆ. ಮುಂದೆ ಕರ್ನಾಟಕ ಭೂ ಸುಧಾರಣಾ ಕಾಯ್ದೆಯ 1974ರ ಸೆಕ್ಷನ್ 79 (ಎ) ಹಾಗೂ (ಬಿ) ಅನ್ವಯ ತೀರ್ಥಹಳ್ಳಿ ತಹಶೀಲ್ದಾರ್ ಸದರಿ ಭೂಮಿಯ ಸ್ವಾಧೀನಕ್ಕೆ ಮುಂದಾಗಿದ್ದು, ಮಠಕ್ಕೆ ನೋಟಿಸ್ ನೀಡಿದ್ದರು. ಅದನ್ನು ಪ್ರಶ್ನಿಸಿ, ಮಠದ ಆಡಳಿತ ಮತ್ತೆ ಕಾನೂನು ಹೋರಾಟ ನಡೆಸಿತ್ತು. ಈಗ ಹೈಕೋರ್ಟ್‌ನಲ್ಲಿ ಮಠದ ಪರ ತೀರ್ಪು ಬಂದಿದೆ.

ಸರ್ಕಾರದ ಗಮನಕ್ಕೆ ತಂದಿದ್ದೇವೆ: ಡಿಸಿಎಫ್

‘ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶದ ವಿರುದ್ಧ ವಿಭಾಗೀಯ ಮೇಲ್ಮನವಿ ಸಲ್ಲಿಸಬೇಕೇ ಬೇಡವೇ ಎಂದು ಸರ್ಕಾರಿ ವಕೀಲರ ಅಭಿಪ್ರಾಯ ಕೇಳಿದ್ದೆವು. ಮೇಲ್ಮನವಿ ಸಲ್ಲಿಸಲು ಇದು ಸೂಕ್ತ ಪ್ರಕರಣವಲ್ಲ ಎಂದು ಅವರು ಅಭಿಪ್ರಾಯ ನೀಡಿದ್ದಾರೆ. ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ’ ಎಂದು ಶಿವಮೊಗ್ಗ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಇ.ಶಿವಶಂಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೇಲ್ಮನವಿ ಸಲ್ಲಿಸಬಹುದು ಎಂದು ಸರ್ಕಾರಿ ವಕೀಲರು ಅಭಿಪ್ರಾಯಪಟ್ಟಿದ್ದರೆ ಕಾನೂನು ಪ್ರಕ್ರಿಯೆ ಹಾಗೆಯೇ ಮುಂದುವರಿಯುತ್ತಿತ್ತು. ಈಗ ಸರ್ಕಾರದ ಅನುಮತಿ ಪಡೆಯುವುದು ಅನಿವಾರ್ಯವಾಗಿದೆ’ ಎಂದು ಅವರು ಹೇಳುತ್ತಾರೆ.

‘ಮಠದ ಸ್ವಾಧೀನಕ್ಕೆ ಇನ್ನೂ ಬಿಟ್ಟುಕೊಟ್ಟಿಲ್ಲ..’

‘ಕಾನೂನು ಹೋರಾಟದಲ್ಲಿ ಜಯಗಳಿಸಿದ್ದೇವೆ. 40 ವರ್ಷಗಳ ಹಿಂದೆಯೇ ಸದರಿ ಭೂಮಿಯ ದಾಖಲೆಗಳು ಮಠದ ಹೆಸರಿಗೆ ವರ್ಗಾವಣೆಗೊಂಡಿವೆ. ಆದರೆ ಭೂಮಿ ಈಗ ನಮ್ಮ ಸ್ವಾಧೀನದಲ್ಲಿ ಇಲ್ಲ. ಹೈಕೋರ್ಟ್ ತೀರ್ಪು ಬಂದ ಮೂರು ತಿಂಗಳಲ್ಲಿ ಮಠದ ಸ್ವಾಧೀನಕ್ಕೆ ಕೊಡಬೇಕು ಎಂದು ಸರ್ಕಾರಕ್ಕೆ ಆದೇಶಿಸಿದೆ. ಅವರು ಸ್ವಾಧೀನಕ್ಕೆ ಬಿಟ್ಟುಕೊಡದಿದ್ದರೆ ಮತ್ತೆ ನ್ಯಾಯಾಂಗ ನಿಂದನೆಯ ಪ್ರಕರಣ ದಾಖಲಿಸಲಿದ್ದೇವೆ’ ಎಂದು ತೀರ್ಥಹಳ್ಳಿಯ ಭೀಮಸೇತು ಮಠದ ದಿವಾನರಾದ ಸಾಗರ್ ಭಟ್ ’ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಶಂಕರಾಚಾರ್ಯರ ಬುದ್ಧಿಮತ್ತೆಯ ಅಂಬೇಡ್ಕರ್: ಅರವಿಂದರಾವ

ಹುಬ್ಬಳ್ಳಿ: ‘ಅಂಬೇಡ್ಕರ್ ಅವರಲ್ಲಿ ಶಂಕರಾಚಾರ್ಯರ ತೀಕ್ಷ್ಣ ಬುದ್ಧಿಮತ್ತೆ ಮತ್ತು ಬುದ್ಧನ ಕರುಣೆ ಸಮ್ಮಿಳಿತವಾಗಿದ್ದವು. ಯಾವ ಧರ್ಮದವರೂ ಬೇಕಾದರೂ ಅವರನ್ನು ಅನುಸರಿಸಬಹುದು’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಹ ಸಂಘಚಾಲಕ ಅರವಿಂದರಾವ ದೇಶಪಾಂಡೆ ಅಭಿಪ್ರಾಯಪಟ್ಟರು.

ಲೋಕಹಿತ ಟ್ರಸ್ಟ್ ಮತ್ತು ಸಾಮರಸ್ಯ ವೇದಿಕೆಯು ನಗರದ ಕೇಶವ ಕುಂಜದಲ್ಲಿ ಭಾನುವಾರ ಏರ್ಪಡಿಸಿದ್ದ ಅಂಬೇಡ್ಕರ್ ಅವರ ಸಮಗ್ರ ಚಿಂತನೆಗಳು ಕುರಿತ ವಿಚಾರ ಸಂಕಿರಣದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

‘ಮತಾಂತರದ ಬಗ್ಗೆ ಅಂಬೇಡ್ಕರ್ ಅವರಿಗೆ ಸ್ಪಷ್ಟತೆ ಇತ್ತು. ಅಸ್ಪೃಶ್ಯರು ಒಂದು ವೇಳೆ ಇಸ್ಲಾಂ ಅಥವಾ ಕ್ರೈಸ್ತ ಧರ್ಮಕ್ಕೆ ಮತಾಂತರವಾದರೆ ಅದು ರಾಷ್ಟ್ರ ವಿರೋಧಿ ಕೃತ್ಯವಾಗುತ್ತದೆ. ರಾಷ್ಟ್ರದ ಏಕತೆಗೆ ಧಕ್ಕೆಯಾಗುತ್ತದೆ ಎಂದು ಭಾವಿಸಿದ್ದರು’ ಎಂದರು.

‘ಬ್ರಾಹ್ಮಣ-ಬೌದ್ಧರ ಸಂಘರ್ಷದಿಂದ ಹುಟ್ಟಿದ ಅಸ್ಪೃಶ್ಯತೆ’: ‘ಎರಡನೇ ಶತನಮಾನದಲ್ಲಿ ಆರಂಭವಾದ ಅಸ್ಪೃಶ್ಯತೆ ಆರನೇ ಶತಮಾನದಲ್ಲಿ ಗುಪ್ತರ ಕಾಲದಲ್ಲಿ ಹೆಚ್ಚಾಯಿತು. ಬ್ರಾಹ್ಮಣರು ಮತ್ತು ಬೌದ್ಧರ ನಡುವಿನ ಸಂಘರ್ಷದಿಂದ ಅಸ್ಪೃಶ್ಯತೆ ಹುಟ್ಟಿಕೊಂಡಿತು ಎಂಬುದನ್ನು ಅಂಬೇಡ್ಕರ್ ತಮ್ಮ ಬರಹಗಳಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವೆಂಕಟಗಿರಿ ದಳವಾಯಿ ಹೇಳಿದರು.

‘ವೇದ, ಉಪನಿಷತ್ತುಗಳಲ್ಲಿ ಹೇಳಿದ್ದ ಸುಳ್ಳುಗಳನ್ನು ಅರಿಯಲು ಅಂಬೇಡ್ಕರ್ ಸಂಸ್ಕೃತ ಕಲಿತರು. ಭಗವದ್ಗೀತೆ ನಾಲ್ಕು ಬಾರಿ ಪರಿಷ್ಕೃತಗೊಂಡಿದೆ. ಆರಂಭದಲ್ಲಿ ಗೀತೆಯಲ್ಲಿ ಧರ್ಮ ಮತ್ತು ತತ್ವಜ್ಞಾನ ಇರಲಿಲ್ಲ. ಕೇವಲ 60 ಶ್ಲೋಕಗಳು ಮಾತ್ರ ಇದ್ದವು ಎಂಬುದನ್ನು ತೋರಿಸಿದರು. ಅವಮಾನ ಮತ್ತು ಸವಾಲುಗಳನ್ನು ಜ್ಞಾನದ ಮೂಲಕ ಎದುರಿಸಿದ ಅಂಬೇಡ್ಕರ್, ಅದರ ಮೂಲಕವೇ ತುಳಿತಕ್ಕೊಳಗಾದವರನ್ನು ಮೇಲೆತ್ತಲು ಶ್ರಮಿಸಿದರು’ ಎಂದರು.

105 ಕೆ.ಜಿ. ಅಕ್ಕಿ ಚೀಲ ಹೊತ್ತು ಅಂಜನಾದ್ರಿ ಬೆಟ್ಟ ಹತ್ತಿದ ಯುವಕ

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಹಿರೇಮ್ಯಾಗೇರಿ ಗ್ರಾಮದ 34 ವರ್ಷದ ಹನುಮಂತಪ್ಪ ಪೂಜಾರ ಎಂಬ ಯುವಕ ಭಾನುವಾರ 105 ಕೆ.ಜಿ. ತೂಕದ ಅಕ್ಕಿಚೀಲ ಹೊತ್ತು ಅಂಜನಾದ್ರಿ ಬೆಟ್ಟ ಏರಿದ್ದಾರೆ. ಬೆಳಿಗ್ಗೆ 6ಕ್ಕೆ ಬೆಟ್ಟ ಏರುವುದನ್ನು ಆರಂಭಿಸಿ 50 ನಿಮಿಷಗಳಲ್ಲಿ 575 ಮೆಟ್ಟಿಲುಗಳನ್ನು ಹತ್ತಿ ಎಲ್ಲರ ಗಮನ ಸೆಳೆದರು.

ಕುರಿಗಾಹಿ ಹನುಮಂತಪ್ಪ ಪೂಜಾರ ಆಂಜನೇಯನ ದರ್ಶನ ಪಡೆಯಬೇಕು ಎಂದು ಹಲವು ವರ್ಷಗಳಿಂದ ಕಾಯುತ್ತಿದ್ದರು. ಮೊದಲ ಬಾರಿಗೆ ಬೆಟ್ಟ ಹತ್ತಿದ ನೆನಪನ್ನು ಸ್ಮರಣೀಯವಾಗಿರಿಸಬೇಕು ಎನ್ನುವ ಕಾರಣಕ್ಕೆ ಅಕ್ಕಿಚೀಲ ಹೊತ್ತು ಹತ್ತಲು ನಿರ್ಧರಿಸಿದ್ದರು.

ಕಳೆದ ವಾರ ಜಮಖಂಡಿ ತಾಲ್ಲೂಕಿನ ಹುನ್ನೂರು ಗ್ರಾಮದ ರಾಯಪ್ಪ ದಫೇದಾರ ಎಂಬುವರು 101 ಕೆ.ಜಿ. ತೂಕದ ಜೋಳದ ಚೀಲ ಹೊತ್ತು ಬೆಟ್ಟ ಹತ್ತಿದ್ದರು.

ಕಲೆಯನ್ನೇ ಹಾಸಿ ಹೊದ್ದು ಉಸಿರಾಡಿದ ವೀರಣ್ಣ

• ಹೊನಕೆರೆ ನಂಜುಂಡೇಗೌಡ

ನುಡಿ ನಮನ

ಪೌರಾಣಿಕ ಕಥೆಗಳಿಗಷ್ಟೇ ಸೀಮಿತವಾಗಿದ್ದ ತೊಗಲು ಗೊಂಬೆಯಾಟಕ್ಕೆ ಐತಿಹಾಸಿಕ ಹಾಗೂ ಸಾಮಾಜಿಕ ಸ್ಪರ್ಶ ನೀಡಿ, ಜನ ಸಮುದಾಯದ ಬಳಿಗೆ ಕಲೆಯನ್ನು ಕೊಂಡೊಯ್ದ ಹಿರಿಯ ಕಲಾವಿದ ಬೆಳಗಲ್ ವೀರಣ್ಣ ಕೊನೆಯವರೆಗೂ ತಾವು ನಂಬಿದ್ದ ಕಲೆಯನ್ನೇ ಹಾಸು, ಹೊದ್ದು ಉಸಿರಾಡಿದರು.

‘ನನ್ನ ಬದುಕು ಕಲೆಗೆ ಅರ್ಪಿತವಾಗಿದೆ. ಬಡತನ, ಕಷ್ಟ, ಪಡಿಪಾಟಲು, ಸನ್ಮಾನ, ಪ್ರವಾಸ, ದುಡಿದ ಹಣ, ತೊಗಲು ಗೊಂಬೆಯಾಟ ಕೊಟ್ಟ ಸಂತಸ ಎಲ್ಲವೂ ಜೀವ ಕಲೆಯಲ್ಲಿ ಲೀನವಾಗಲಿ’ ಎಂದು ವೀರಣ್ಣನವರು ಯಾವಾಗಲೂ ಹೇಳುತ್ತಿದ್ದರು.

ಕಲೆ ನೆಚ್ಚಿಕೊಂಡು ಬದುಕು ಕಟ್ಟಿಕೊಳ್ಳುವುದು ಅಷ್ಟು ಸುಲಭವಲ್ಲ ಎಂಬ ವಾಸ್ತವ ಹಿರಿಯ ಕಲಾವಿದನಿಗೆ ಗೊತ್ತಿತ್ತು. ಕಲಾವಿದ, ವೃತ್ತಿ ಕಲಾವಿದನಾದರೆ ಕಲೆ ಉಳಿಯಬಹುದು. ಆದರೆ, ಕಲಾವಿದ ಉಳಿಯಲಾರ ಎನ್ನುವ ವಾಸ್ತವದ ಅರಿವೂ ಅವರಿಗಿತ್ತು. ಆದರೂ ಇಡೀ ಬದುಕನ್ನು ಕಲಾ ಕ್ಷೇತ್ರಕ್ಕೆ ಅರ್ಪಿಸಿ, ದೇಶ- ವಿದೇಶಗಳಲ್ಲಿ ಮಿಂಚಿ ಮರೆಯಾದರು.

ಪೌರಾಣಿಕ ಕಥೆಗಳಿಗಷ್ಟೇ ಸೀಮಿತವಾಗಿದ್ದ ತೊಗಲು ಗೊಂಬೆಯಾಟಕ್ಕೆ ಸಾಮಾಜಿಕ ಸಮಸ್ಯೆ, ಸ್ವಾತಂತ್ರ್ಯ ಸಂಗ್ರಾಮದ ಸ್ಪರ್ಶ ನೀಡಿದ ಕೀರ್ತಿ ವೀರಣ್ಣ ಅವರಿಗೇ ಸಲ್ಲಬೇಕು. ಜಗಜ್ಯೋತಿ ಬಸವೇಶ್ವರ, ಕಿತ್ತೂರು ರಾಣಿ ಚೆನ್ನಮ್ಮ, ಗಾಂಧೀಜಿ ಜೀವನ ಚರಿತ್ರೆ ಜೊತೆಗೆ ಸಾಕ್ಷರತಾ ಆಂದೋಲನ, ಜನಸಂಖ್ಯೆ ನಿಯಂತ್ರಣಾ ಯೋಜನೆ, ತಾಯಿ-ಮಗುವಿನ ಆರೋಗ್ಯ, ಪಲ್ಸ್ ಪೋಲಿಯೊ, ಏಡ್ಸ್ ಕುರಿತ ಜಾಗೃತಿಗೂ ಈ ಕಲೆಯನ್ನು ಪ್ರಯೋಗಿಸಿ ಯಶಸ್ಸು ಕಂಡರು.

ಬಳ್ಳಾರಿ ಬಳಿಯ ಬೆಳಗಲ್ಲು, ವೀರಣ್ಣನವರ ಸ್ವಂತ ಊರು. ತಂದೆ ದೊಡ್ಡ ಹನುಮಂತಪ್ಪ. ತಾಯಿ ಈರಮ್ಮ. ದಂಪತಿಗಿದ್ದ 12 ಮಕ್ಕಳಲ್ಲಿ ವೀರಣ್ಣನವರು ಮಾತ್ರ ಬದುಕುಳಿದ ಗಂಡು ಮಗ. ಹೀಗಾಗಿ, ವರುಷ ಎಂಟಾದರೂ ತಾಯಿ ಮಮತೆಯಿಂದ ಸೊಂಟದ ಮೇಲೆ ಹೊತ್ತು ಬೆಳೆಸಿದರು. ಮಗನ ಮೇಲಿನ ಮುದ್ದು ವೀರಣ್ಣ ಶಾಲೆಯಿಂದ ದೂರ ಉಳಿಯುವಂತೆ ಮಾಡಿತು.

ದಶಕದ ಹಿಂದೆ ಬಳ್ಳಾರಿಗೆ ಭೇಟಿ ನೀಡಿದ್ದ ಸ್ವಿಟ್ಸರ್‌ಲ್ಯಾಂಡ್‌ನ ತೊಗಲುಬೊಂಬೆ ಕಲಾವಿದರೊಬ್ಬರಿಗೆ ಬೆಳಗಲ್ ವೀರಣ್ಣ ತಮ್ಮ ಮನೆಯಲ್ಲಿ ತೊಗಲುಬೊಂಬೆಗಳನ್ನು ಕುರಿತು ವಿವರಿಸುತ್ತಿರುವುದು

ಅಪ್ಪ ಹನುಮಂತಪ್ಪ ಅವರಿಗೆ ಮಗನಿಗೆ ಬಯಲಾಟ ಕಲಿಸುವ ಹುಚ್ಚು. ಪಿಟೀಲು ವಾದಕರಾಗಿದ್ದ ಅವರು ಖ್ಯಾತ ರಂಗ ನಟ-ನಟಿಯರನ್ನು ಕರೆಸಿ ಬಯಲಾಟ ಆಡಿಸುತ್ತಿದ್ದರು. ಬಯಲಾಟದ ಹುಚ್ಚಿನಿಂದ 22 ಎಕರೆ ಜಮೀನು, ಇದ್ದೊಂದು ಮನೆಯೂ ಕೈಬಿಟ್ಟಿತು. ಆಗ ವೀರಣ್ಣನವರಿಗೆ ಆರು ವರ್ಷ ವಯಸ್ಸು. ತಂದೆಯ ಪ್ರೇರಣೆಯಂತೆ ಆರು ವರ್ಷ ಇರುವಾಗಲೇ ಸಖಿ ಪಾತ್ರಕ್ಕೆ ಬಯಲಾಟ ಪ್ರವೇಶಿಸಿದರು. ಇದಾದ ಎರಡು ವರ್ಷಗಳಲ್ಲಿ ಅನಾರೋಗ್ಯದಿಂದ ವೀರಣ್ಣನವರ ತಂದೆ-ತಾಯಿ ಇಬ್ಬರೂ ತೀರಿಕೊಂಡರು.

ಬದುಕಿನ ಅರಿವೇ ಇಲ್ಲದೆ ಬೆಳೆದ ವೀರಣ್ಣ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾದರು.

ದೇವರ ಗುಡಿಯಲ್ಲಿ ಭಜನೆ, ಬಯಲಾಟ ಅಭ್ಯಾಸ, ಅವರಿವರು ಕೊಟ್ಟ ಊಟ-ಉಪಾಹಾರ ಸೇವಿಸಿ ಬದುಕು ದೂಡಿದರು. ರಂಗದ ನಂಟು ಬೆಳೆಸಿಕೊಂಡು ಊರೂರು ಸುತ್ತಿದರು. ಭಕ್ತ ಪ್ರಹ್ಲಾದ ನಾಟಕದಲ್ಲಿ ಪ್ರಹ್ಲಾದನ ಪಾತ್ರದ ಮೂಲಕ ರಂಗಭೂಮಿಗೂ ಕಾಲಿಟ್ಟರು.

ವೀರಣ್ಣನವರ ಪ್ರತಿಭೆ ಕಂಡು ಯಾರೋ ಒಬ್ಬರು ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಸೇರಿಸಿದರು. ಬಳಿಕ ಸಂಗೀತ-ರಂಗ ದಿಗ್ಗಜ ಬಳ್ಳಾರಿಯ ಶಿಡಗಿನಮೊಳ ವೈ.ಎಂ.ಚಂದ್ರಯ್ಯ, ಜೋಳದರಾಶಿ ದೊಡ್ಡನಗೌಡರ ಶಿಷ್ಯರಾಗಿ ಹಾರ್ಮೋನಿಯಂ, ಸಂಗೀತ, ಹಾಡುಗಾರಿಕೆ ಕಲಿತರು. ಜೀವನ ನಿರ್ವಹಣೆಗೆ ಗುಬ್ಬಿ ವೀರಣ್ಣ ನಾಟಕ ಕಂಪನಿ ಸೇರಿದಂತೆ ಅನೇಕ ವೃತ್ತಿರಂಗಭೂಮಿ ನಾಟಕಗಳಲ್ಲಿ ಸ್ತ್ರೀಪಾತ್ರಧಾರಿಯಾಗಿ, ಖಳ ನಾಯಕನಾಗಿ, ಹಾಸ್ಯ ಕಲಾವಿದನಾಗಿ ಕೆಲಸ ಮಾಡಿದರು. ‘ರಕ್ತರಾತ್ರಿ ನಾಟಕ’ದ ಶಕುನಿ ಪಾತ್ರ ವೀರಣ್ಣನವರಿಗೆ ದೊಡ್ಡ ಹೆಸರು ತಂದುಕೊಟ್ಟಿತು. ಅವರಂತೆ ಶಕುನಿ ಪಾತ್ರ ನಿರ್ವಹಿಸುವ ಮತ್ತೊಬ್ಬ ಕಲಾವಿದನಿಲ್ಲ ಎಂದೇ ಬಳ್ಳಾರಿ ಜನ ಹೇಳುತ್ತಾರೆ.

ಅಪಘಾತ: ಕಲಾವಿದ ಬೆಳಗಲ್ ವೀರಣ್ಣ ಸಾವು

ಒಂದನೇ ಪುಟದಿಂದ...

ಹೆದ್ದಾರಿಯಲ್ಲಿ ದಿಢೀರ್ ಅಡ್ಡ ಬಂದ ನಾಯಿಯನ್ನು ತಪ್ಪಿಸಲು ಹೋದಾಗ ಕಾರು ಡಿವೈಡರ್‌ಗೆ ಅಪ್ಪಳಿಸಿ ಪಲ್ಟಿಯಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ವೀರಣ್ಣ ಅವರನ್ನು ಆಂಬುಲೆನ್ಸ್‌ನಲ್ಲಿ ನಗರದ ಸರ್ಕಾರಿ ಆಸ್ಪತ್ರೆ ಸಾಗಿಸಲಾಯಿತು. ಆದರೆ, ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾಗಿ ವೈದ್ಯರು ತಿಳಿಸಿದ್ದಾರೆ. ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗಲ್ ವೀರಣ್ಣ ಅವರು ಹಂಪಿ ಕನ್ನಡ ವಿ.ವಿ.ಯ ನಾಡೋಜ, ಕರ್ನಾಟಕ ರಾಜ್ಯೋತ್ಸವ, ಜಾನಪದ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ರಾಜ್ಯ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ತೊಗಲು ಗೊಂಬೆಯಾಟವನ್ನು ದೇಶ-ವಿದೇಶಗಳಲ್ಲಿ ಪ್ರಖ್ಯಾತಪಡಿಸಿದ್ದ ವೀರಣ್ಣ ಅವರಿಗೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂಡಿತ್ ವೆಂಕಟೇಶಕುಮಾರ್ ಇವರ ಅಳಿಯ.

ವೀರಣ್ಣ ಅವರ ಪಾರ್ಥಿವ ಶರೀರವನ್ನು ಮರಣೋತ್ತರ ಪರೀಕ್ಷೆಯ ನಂತರ ಸಂಜೆ ಬಳ್ಳಾರಿಗೆ ಕೊಂಡೊಯ್ಯಲಾಗಿದ್ದು, ಸೋಮವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ರಾಘವ ಕಲಾಮಂದಿರದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ನಂತರ ಬೆಳಗಲ್ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಯಲಾಟ ಕಲಾ ಕ್ಷೇತ್ರದಲ್ಲೇ ಮುಂದುವರಿಯಬೇಕು ಎಂದುಕೊಂಡಿದ್ದ ವೀರಣ್ಣನವರು ತೊಗಲುಗೊಂಬೆ ಕ್ಷೇತ್ರಕ್ಕೆ ಬಂದಿದ್ದೇ ಆಕಸ್ಮಿಕ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಯೊಬ್ಬರು ನೀಡಿದ ಸಲಹೆಯಂತೆ ಅಪರೂಪದ ಕಲಾ ಪ್ರಕಾರ ತೊಗಲುಗೊಂಬೆ ಪ್ರದರ್ಶನದ ಕಡೆ ಮನಸ್ಸು ವಾಲಿಸಿದ ವೀರಣ್ಣನವರು, ಪಾರಂಪರಿಕ ಕಲೆಗೆ ತಾಂತ್ರಿಕ ಕೌಶಲ್ಯಗಳನ್ನು ಅಳವಡಿಸಿ ಸೈ ಎನಿಸಿಕೊಂಡರು. ಈ ಕಲಾ ಪ್ರಕಾರದ ಕಡೆಗೇ ಹೆಚ್ಚಿನ ಗಮನ ಹರಿಸಿದರು.

‘ಶ್ರೀರಾಮಾಂಜನೇಯ ತೊಗಲುಗೊಂಬೆ ತಂಡ’ದ ಮೂಲಕ ದೇಶ-ವಿದೇಶಗಳಲ್ಲಿ ತೊಗಲುಗೊಂಬೆ ಪ್ರದರ್ಶನ ನೀಡಿ ಬಳ್ಳಾರಿ ಜಿಲ್ಲೆಗೆ ಕೀರ್ತಿ ತಂದರು. ತೊಗಲುಗೊಂಬೆ ಪ್ರದರ್ಶನಕ್ಕೆ ಹಿಂದಿನ ಲಿಂಗೈಕ್ಯ ಗದುಗಿನ ತೋಂಟದಾರ್ಯ ಶ್ರೀಗಳು ಸೇರಿದಂತೆ ಅನೇಕರು ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿದರು.

ವೀರಣ್ಣನವರಿಗೆ ರಾಜ್ಯೋತ್ಸವ, ಕರ್ನಾಟಕ ನಾಟಕ ಅಕಾಡೆಮಿ ಸೇರಿದಂತೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. ಹಂಪಿ ವಿ.ವಿಯ ನಾಡೋಜ ಗೌರವ ನೀಡಿ ಸತ್ಕರಿಸಿತ್ತು. ಬಯಲಾಟ ಅಕಾಡೆಮಿ ಅಧ್ಯಕ್ಷರಾಗಿಯೂ ವೀರಣ್ಣ ಕೆಲಸ ಮಾಡಿದ್ದಾರೆ. ವೀರಣ್ಣ ಅಕ್ಷರ ಕಲಿಯದಿದ್ದರೂ, ರಂಗಭೂಮಿ ಒಡನಾಟ ಅಕ್ಷರ, ಅರಿವು, ಆಶ್ರಯ ಎಲ್ಲವನ್ನೂ ನೀಡಿತು. ಅವರಿಗೆ ಪೌರಾಣಿಕ, ಆಧುನಿಕ ಸಾಹಿತ್ಯವನ್ನು ಅರಿಯುವಷ್ಟು ಶಕ್ತಿ ನೀಡಿತು.

ವೀರಣ್ಣನವರ ಶ್ರದ್ಧೆ, ಸರಳತೆ, ವಿನಯ ಹಾಗೂ ಕ್ರಿಯಾಶೀಲತೆ ಯುರೋಪ್, ಜರ್ಮನಿ, ಸ್ವಿಟ್ಜರ್ಲೆಂಡ್ ಮುಂತಾದ ದೇಶಗಳಿಗೂ ಕರೆದೊಯ್ಯಿತು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯರಾದ ವೀರಣ್ಣ ಇಳಿ ವಯಸ್ಸಿನಲ್ಲೂ ಚಟುವಟಿಕೆಯಿಂದ ಇರುತ್ತಿದ್ದರು.

ಶ್ರದ್ಧೆಯಿಂದ ಮಾತ್ರ ಕಲಾವಿದ ಬೆಳೆಯಲು-ಬೆಳಗಲು ಸಾಧ್ಯ ಎಂದು ನಂಬಿದ್ದ ಅವರು ತಮ್ಮ ಇಡೀ ಬದುಕನ್ನು ತೆರೆದ ಪುಸ್ತಕದಂತೆ ಇಟ್ಟು ಮರೆಯಾಗಿದ್ದಾರೆ.

ಲಕ್ಕವಳ್ಳಿ ಬಳಿ ಕಾಳ್ಗಿಚ್ಚು

ಭದ್ರಾವತಿ: ಇಲ್ಲಿನ ಲಕ್ಕವಳ್ಳಿಯ ಭದ್ರಾ ನದಿ ಯೋಜನೆ (ಬಿಆರ್‌ಪಿ) ಬಳಿಯ ಶೀಲಸಂಪಾದನ ಮಠಕ್ಕೆ ಹೋಗುವ ದಾರಿಯ ತಿರುವಿನಲ್ಲಿ ಭಾನುವಾರ ಮಧ್ಯಾಹ್ನ ತಮ್ಮಡಿಹಳ್ಳಿ ಎಸ್‌ಎಫ್ ಅರಣ್ಯಪ್ರದೇಶದಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದೆ. ಭದ್ರಾವತಿಯಿಂದ ತೆರಳಿದ್ದ ಎರಡು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸಲು ನೆರವಾದವು.

ಲಕ್ಕವಳ್ಳಿಯಿಂದ ತಮ್ಮಡಿಹಳ್ಳಿ ಕಡೆಗೆ ಹೋಗುವ ಶೀಲಸಂಪಾದನ ಮಠದ ಕಮಾನು ಬಳಿ ಕಾಳ್ಗಿಚ್ಚು ಕಾಣಿಸಿಕೊಂಡಿತ್ತು. ಈ ಪ್ರದೇಶ ಲಕ್ಕವಳ್ಳಿ ವನ್ಯಜೀವ ವಿಭಾಗದ ವ್ಯಾಪ್ತಿಗೆ ಬರುತ್ತದೆ.

ಆಕ್ರೋಶದೊಂದಿಗೆ ಇದ್ರೀಷ್ ಪಾಷ ಅಂತ್ಯಕ್ರಿಯೆ

ಮಂಡ್ಯ: ಕನಕಪುರ ತಾಲ್ಲೂಕು ಸಾತನೂರು ಬಳಿ ಅನುಮಾನಾಸ್ಪದವಾಗಿ ಮೃತಪಟ್ಟ ನಗರದ ಸಬ್ದರಿಯಾಬಾದ್ ಬಡಾವಣೆಯ ಇದ್ರೀಷ್ ಪಾಷ ಅವರ ಅಂತ್ಯಕ್ರಿಯೆ ಶಂಕರಮಠ ಬಳಿಯ ಖಬರಸ್ಥಾನದಲ್ಲಿ ಭಾನುವಾರ ನಡೆಯಿತು.

ಗುತ್ತಲು ಬಡಾವಣೆ, ಸಬ್ದರಿಯಾಬಾದ್‌ನ ಇದ್ರೀಷ್ ಪಾಷ ನಿವಾಸದಿಂದ ಖಬರಸ್ಥಾನದವರೆಗೂ ಮೆರವಣಿಗೆ ನಡೆಸಲಾಯಿತು. ಲಾರಿ, ಬಸ್‌ಗಳಲ್ಲಿ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಜನರು, ‘ಇದ್ರೀಷ್ ಪಾಷ (45) ಅವರನ್ನು ಕೊಲ್ಲಲಾಗಿದೆ’ ಎಂದು ಆರೋಪಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕೆ.ಆರ್.ವೃತ್ತದಲ್ಲಿ ಮೃತದೇಹವಿರಿಸಿ ಕೆಲಕಾಲ ಪ್ರತಿಭಟಿಸಿದರು. ಆಗ, ಸ್ಥಳದಲ್ಲಿ ಬಿಗುವಿನ ಪರಿಸ್ಥಿತಿ ಇತ್ತು, ಪೊಲೀಸರು ಬಂದೋಬಸ್ತ್ ಮಾಡಿದ್ದರು.

‘ಪುನೀತ್ ಕೆರೆಹಳ್ಳಿ ಹಾಗೂ ಆತನ ಸಹಚರರೇ ಇದ್ರೀಷ್ ಪಾಷ ಅವರನ್ನು ಕೊಲೆ ಮಾಡಿದ್ದಾರೆ, ಈ ಬಗ್ಗೆ ಸಾಕಷ್ಟು ಸಾಕ್ಷ್ಯಗಳು ಸಿಕ್ಕಿವೆ. ಕೊಲೆಗಾರರು ಮೊದಲು ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ; ಹಣ ನೀಡದಿದ್ದಾಗ ಕೊಲೆ ಮಾಡಿದ್ದಾರೆ’ ಎಂದರು.

‘ಕನಕಪುರ, ಮಂಡ್ಯ ಭಾಗದಲ್ಲಿ ಯಾವುದೇ ಕೋಮು ದ್ವೇಷವಿಲ್ಲ. ಇಲ್ಲಿನ ಜನರು ಒಗ್ಗಟ್ಟಿನಿಂದ ಇದ್ದಾರೆ. ಆದರೆ, ಹೊರಗಿನ ವ್ಯಕ್ತಿಗಳು ಇಲ್ಲಿಗೆ ಬಂದು ಈ ಭಾಗದ ಕೋಮು ಸೌಹಾರ್ದವನ್ನು ಹಾಳುಗೆಡವಲು ಯತ್ನಿಸಿದ್ದಾರೆ. ರಾಜ್ಯ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಶಾಂತಿಗೆ ಭಂಗ ತರುತ್ತಿರುವವ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಗೋರಕ್ಷಣೆ ಹೆಸರಲ್ಲಿ ನಡೆದ ಹತ್ಯೆಯ ತನಿಖೆಯಾಗಲಿ’

ಒಂದನೇ ಪುಟದಿಂದ

‘ಕರ್ನಾಟಕ ಇಂಥ ಅಸಮರ್ಥ, ಅದಕ್ಷ ಮತ್ತು ಬೇಜವಾಬ್ದಾರಿ ಗೃಹ ಸಚಿವರನ್ನು ಎಂದೂ ನೋಡಿರಲಿಲ್ಲ. ತನ್ನ ಇಲಾಖೆ ಮೇಲೆ ನಿಯಂತ್ರಣ ಇಲ್ಲದ ಈ ಸಚಿವರಿಗೆ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲು ಸಾಧ್ಯವೇ? ಮೊದಲು ಅವರನ್ನು ಸಂಪುಟದಿಂದ ಕಿತ್ತು ಹಾಕಿ’ ಎಂದೂ ಒತ್ತಾಯಿಸಿದ್ದಾರೆ.

‘ಚುನಾವಣಾ ಪ್ರಕ್ರಿಯೆ ಚಾಲನೆಯಲ್ಲಿ ಇರುವಾಗಲೇ ನಗರದಲ್ಲಿ ನಿತ್ಯ ಅತ್ಯಾಚಾರ, ಕೊಲೆಗಳು ನಿರ್ಭೀತಿಯಿಂದ ನಡೆಯುತ್ತಿರುವುದು ಕಳವಳಕಾರಿ ಸಂಗತಿ. ಈ ಸರ್ಕಾರ ಅಸ್ತಿತ್ವದಲ್ಲಿರುವಾಗ ಚುನಾವಣೆ ನ್ಯಾಯಯುತವಾಗಿ ನಡೆಯುವುದು ಅನುಮಾನ. ಚುನಾವಣಾ ಆಯೋಗ ಈ ಬೆಳವಣಿಗೆಗಳನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದೂ ಆಗ್ರಹಿಸಿದ್ದಾರೆ.

ಪುನೀತ್ ಕೆರೆಹಳ್ಳಿ ವಿರುದ್ಧ ಪ್ರಕರಣ

ಒಂದನೇ ಪುಟದಿಂದ

ಪುನೀತ್ ವಿರುದ್ಧ ಸಾತನೂರು ಠಾಣೆಯಲ್ಲಿ ಐಪಿಸಿ ಸೆಕ್ಷನ್ 302 (ಕೊಲೆ), 341 (ಹಲ್ಲೆ) , 504/ 506 (ಬೆದರಿಕೆ), 34 (ಗುಂಪುಗಾರಿಕೆ) ಅಡಿ ಪ್ರಕರಣ ದಾಖಲಾಗಿದೆ. ಕನಕಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ್ದು, ಮೇಲ್ನೋಟಕ್ಕೆ ಕೊಲೆ ನಡೆದಿರುವುದು ದೃಢಪಟ್ಟಿಲ್ಲ. ಇನ್ನಷ್ಟೇ ವರದಿ ಕೈ ಸೇರಬೇಕಿದೆ. ವಿವಿಧ ಆಯಾಮಗಳಲ್ಲಿ ಪ್ರಕರಣದ ತನಿಖೆ ನಡೆದಿದೆ. ಇದುವರೆಗೂ ಯಾರನ್ನು ಬಂಧಿಸಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ಬಂಧನಕ್ಕೆ ಎಚ್‌ಡಿಕೆ ಒತ್ತಾಯ

ಒಂದನೇ ಪುಟದಿಂದ

‘ಜಾನುವಾರು ಸಾಗಿಸುತ್ತಿದ್ದಾನೆ ಎಂದರೆ ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಬಹುದಿತ್ತು ಅಥವಾ ಮಾಹಿತಿ ನೀಡಬಹುದಿತ್ತು. ಇದರ ಹೊರತಾಗಿ ಹತ್ಯೆ ಮಾಡುವುದು ಎಂದರೆ ಅರ್ಥವೇನು? ಚುನಾವಣೆ ಹೊತ್ತಿನಲ್ಲಿ ಇದರ ಹಿಂದಿರುವ ಷಡ್ಯಂತ್ರ ಎಂಥದ್ದು ಎಂದು ಯಾರಿಗಾದರೂ ಅರ್ಥ ಆಗುವಂತದ್ದೇ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಎಲ್ಲಿಗೆ ಬಂದು ನಿಂತಿದೆ’ ಎಂದು ಪ್ರಶ್ನಿಸಿದ್ದಾರೆ.

‘ಯುವಕನ ಕೊಲೆಯಾದ ರಾತ್ರಿ ಆರೋಪಿ ಮತ್ತವನ ಸಹಚರರು ರಸ್ತೆಯಲ್ಲಿ ಕ್ರಿಕೆಟ್ ಬ್ಯಾಟ್‌ಗಳನ್ನು ಹಿಡಿದು ಗೋ ರಕ್ಷಕನ ಸೋಗು ಹಾಕಿಕೊಂಡು ಪಹರೆ ಕಾಯುವ ನಾಟಕದ ವಿಡಿಯೊ ಮಾಡಿ ತನ್ನ ಜಾಲತಾಣದಲ್ಲಿಯೇ ಹಾಕಿಕೊಂಡಿದ್ದಾನೆ. ಅವರ ಉದ್ದೇಶವೇ ಬೇರೆ ಇತ್ತು ಎನ್ನುವುದು ಸ್ಪಷ್ಟ. ಇದಕ್ಕಿಂತ ಸಾಕ್ಷಿ ಬೇಕೆ? ಕೂಡಲೇ ಪೊಲೀಸರು ಆರೋಪಿಗಳನ್ನು ಬಂಧಿಸಬೇಕು. ರಾತ್ರಿ ಹೊತ್ತು ಇವರು ರಸ್ತೆಯಲ್ಲಿ ಕ್ರಿಕೆಟ್ ಬ್ಯಾಟ್‌ಗಳನ್ನು ಹಿಡಿದುಕೊಂಡು ಗಸ್ತು ತಿರುಗುತ್ತಿದ್ದರು ಎಂದರೆ, ಇವರಿಗೆ ಪೊಲೀಸರ ಮೌನ ಅನುಮತಿ ಇತ್ತಾ? ಇವರೇನು ಮಫ್ತಿ ಪೊಲೀಸರಾ? ಅಥವಾ ಗೋ ರಕ್ಷಣೆ ನೆಪದಲ್ಲಿ ದರೋಡೆಗೆ ಹೊಂಚು ಹಾಕಿ ಕೂತಿದ್ದರಾ? ಈ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ’ ಎಂದಿದ್ದಾರೆ.

ಚೋಳರ ಕಾಲದ 65 ಚಿನ್ನದ ನಾಣ್ಯ ಪತ್ತೆ

ಕುಣಿಗಲ್: ತಾಲ್ಲೂಕಿನ ಅಮೃತೂರು ದೊಡ್ಡಕೆರೆ ಏರಿ ಮೇಲಿರುವ ಬ್ಯಾಟರಾಯಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾಮಗಾರಿ ವೇಳೆ ಮಡಿಕೆಯೊಂದರಲ್ಲಿ ಚೋಳರ ಕಾಲದ 65 ಚಿನ್ನದ ನಾಣ್ಯ ಸಿಕ್ಕಿದೆ.

ಶನಿವಾರ ಸಂಜೆ ಕಾಮಗಾರಿ ವೇಳೆ ಮಡಿಕೆ ಪತ್ತೆಯಾಗಿತ್ತು. ಕಾರ್ಮಿಕ ಕುಮಾರ್ ಎಂಬುವರು ನೀಡಿದ ಮಾಹಿತಿ ಮೇರೆಗೆ ಅಮೃತೂರು ಪೊಲೀಸರು ಚಿನ್ನದ ನಾಣ್ಯಗಳನ್ನು ವಶಕ್ಕೆ ಪಡೆದಿದ್ದು, ಪುರಾತತ್ವ ಇಲಾಖೆಗೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಮೌಲ್ಯಮಾಪಕರ ನೇಮಕ: ಜೇಷ್ಠತೆ ಕಡೆಗಣನೆ- ಆರೋಪ

ದ್ವಿತೀಯ ಪಿಯು ಮೌಲ್ಯಮಾಪನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಮೌಲ್ಯಮಾಪನ ಕಾರ್ಯವು ಸೋಮವಾರ (ಏಪ್ರಿಲ್ 3) ಆರಂಭವಾಗಲಿದೆ. ಆದರೆ, ಮೌಲ್ಯಮಾಪನ ಕಾರ್ಯಕ್ಕೆ ಮೌಲ್ಯಮಾಪಕರನ್ನು ನೇಮಿಸುವ ವೇಳೆ ಜೇಷ್ಠತೆ ಕಡೆಗಣಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ, ಧಾರವಾಡ, ಶಿವಮೊಗ್ಗ, ಹಾಸನ, ತುಮಕೂರು, ದಾವಣಗೆರೆ, ಕಲಬುರ್ಗಿ ಮತ್ತು ಬಳ್ಳಾರಿ ನಗರಗಳ ಒಟ್ಟು 65 ಕೇಂದ್ರಗಳಲ್ಲಿ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯ ನಡೆಯಲಿದೆ.

ಜೇಷ್ಠತೆಯ ಕಡೆಗಣಿಸಿರುವ ಬಗ್ಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಧ್ಯಕ್ಷರಿಗೆ ಮಾರ್ಚ್ 27ರಂದು ಮನವಿ ಸಲ್ಲಿಸಿದ್ದ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಸಂಘಗಳು, ಜೇಷ್ಠತೆಯ ಆಧಾರದ ಮೇಲೆ ಉಪಮುಖ್ಯ ಮೌಲ್ಯಮಾಪಕರು ಮತ್ತು ಸಹಾಯಕ ಮೌಲ್ಯಮಾಪಕರ ಸ್ಥಾನಗಳಿಗೆ ಮರು ಆದೇಶ ಹೊರಡಿಸುವಂತೆ ಮನವಿ ಸಲ್ಲಿಸಿದ್ದವು. ಈ ಮನವಿಗಳ ಮೇರೆಗೆ ಮಂಡಳಿ ಶನಿವಾರ (ಏ.1) ಪರಿಷ್ಕೃತ ಆದೇಶ ಹೊರಡಿಸಿದೆ. ಆದರೆ, ಪರಿಷ್ಕೃತ ಆದೇಶದಲ್ಲಿಯೂ ಜೇಷ್ಠತೆ ಕಡೆಗಣಿಸಲಾಗಿದೆ ಎಂಬ ಕೂಗು ಉಪನ್ಯಾಸಕ ಮತ್ತು ಪ್ರಾಂಶುಪಾಲರ ವಲಯದಿಂದ ಕೇಳಿಬಂದಿದೆ.

ಮೌಲ್ಯಮಾಪನ ಕಾರ್ಯಕ್ಕೆ ಉಪಮುಖ್ಯ ಮೌಲ್ಯಮಾಪಕರು ಸೋಮವಾರ, ಸಹಾಯಕ ಮೌಲ್ಯಮಾಪಕರು ಬುಧವಾರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕು ಎಂದು ಮಂಡಳಿಯ ಅಧ್ಯಕ್ಷರು ಆದೇಶದಲ್ಲಿ ತಿಳಿಸಿದ್ದಾರೆ. ಮಾರ್ಚ್ 29 ರಂದು ದ್ವಿತೀಯ ಪಿಯು ಪರೀಕ್ಷೆ ಮುಗಿದಿತ್ತು.

‘ಸೇವಾ ಜೇಷ್ಠತೆ ಆಧರಿಸಿ ಉಪನ್ಯಾಸಕರನ್ನು ಉಪಮುಖ್ಯ ಮೌಲ್ಯಮಾಪಕರು ಮತ್ತು ಸಹಾಯಕ ಮೌಲ್ಯಮಾಪಕರನ್ನಾಗಿ ನೇಮಿಸಲಾಗುತ್ತದೆ. ಪ್ರತಿಯೊಬ್ಬ ಉಪಮುಖ್ಯ ಮೌಲ್ಯಮಾಪಕರ ಅಧೀನದಲ್ಲಿ ಐವರು ಸಹಾಯ ಮೌಲ್ಯಮಾಪಕರು ಕಾರ್ಯನಿರ್ವಹಿಸುತ್ತಾರೆ. ಮಂಡಳಿ ಮೊದಲು ಬಿಡುಗಡೆ ಮಾಡಿದ ವಿವಿಧ ವಿಷಯಗಳ ಉಪ ಮುಖ್ಯ ಮೌಲ್ಯಮಾಪಕರ ಮತ್ತು ಸಹಾಯಕ ಮೌಲ್ಯಮಾಪಕರ ಆದೇಶಗಳಲ್ಲಿ ಜೇಷ್ಠತೆ ಕಡೆಗಣಿಸಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. 26 ವರ್ಷ ಸೇವಾ ಅನುಭವ ಇರುವ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಉಪನ್ಯಾಸಕರನ್ನು ಸಹಾಯಕ ಮೌಲ್ಯಮಾಪಕರನ್ನಾಗಿ, 14 ವರ್ಷಗಳ ಸೇವಾ ಅನುಭವದ ಉಪನ್ಯಾಸಕರನ್ನು ಉಪಮುಖ್ಯ ಮೌಲ್ಯಮಾಪಕರನ್ನಾಗಿ ನೇಮಿಸುವ ಮೂಲಕ ಕಿರಿಯರ ಅಧೀನದಲ್ಲಿ ಹಿರಿಯ ಉಪನ್ಯಾಸಕರು ಕಾರ್ಯನಿರ್ವಹಿಸುವಂತೆ ಮಂಡಳಿ ಮಾಡಿದೆ’ ಎಂಬ ಆರೋಪ ಉಪನ್ಯಾಸಕರಿಂದ ಕೇಳಿಬಂದಿದೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಮಂಡಳಿಯ ಅಧ್ಯಕ್ಷ ಆರ್. ರಾಮಚಂದ್ರನ್ ಅವರಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಘಟಿಕೋತ್ಸವ

18 ವಿದ್ಯಾರ್ಥಿಗಳ ಮುಡಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೆಎಲ್‌ಇ ತಾಂತ್ರಿಕ ವಿಶ್ವ ವಿದ್ಯಾಲಯದ ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ಮೊದಲ ರ‍್ಯಾಂಕ್ ಪಡೆದ 18 ವಿದ್ಯಾರ್ಥಿಗಳು ಚಿನ್ನದ ಪದಕ ಮತ್ತು ಎರಡನೇ ರ‍್ಯಾಂಕ್ ಪಡೆದ 17 ವಿದ್ಯಾರ್ಥಿಗಳು ಬೆಳ್ಳಿ ಪದಕವನ್ನು ಮುಡಿಗೇರಿಸಿಕೊಂಡರು.

ವಿದ್ಯಾನಗರದಲ್ಲಿರುವ ವಿ.ವಿ.ಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಭಾನುವಾರ ನಡೆದ 4ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಗಣ್ಯರು ಪದಕಗಳನ್ನು ಪ್ರದಾನ ಮಾಡಿದರು.

35 ಪದಕಗಳ ಪೈಕಿ, ಯುವತಿಯರು 25 ಮತ್ತು ಯುವಕಯರು 10 ಪದಕಗಳನ್ನು ಪಡೆದುಕೊಂಡರು. ಪದವಿಯ 1,380 ಮತ್ತು ಸ್ನಾತಕೋತ್ತರದ 239 ವಿದ್ಯಾರ್ಥಿಗಳು ಸೇರಿದಂತೆ, ಒಟ್ಟು 1,619 ವಿದ್ಯಾರ್ಥಿಗಳು ತಮ್ಮ ಪದವಿ ಪ್ರಮಾಣಪತ್ರ ಸ್ವೀಕರಿಸಿದರು.

ಹುಬ್ಬಳ್ಳಿಯಲ್ಲಿರುವ ಕೆಎಲ್‌ಇ ಸಂಸ್ಥೆಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಭಾನುವಾರ ನಡೆದ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ನಾಲ್ಕನೇ ಘಟಿಕೋತ್ಸವದಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ

ಇಬ್ಬರಿಗೆ ಪಿಎಚ್‌.ಡಿ: ಕಾಲೇಜಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ವಿನಾಯಕ ಎಂ. ಕುಲಕರ್ಣಿ ಹಾಗೂ ಎಂಜಿನಿಯರಿಂಗ್ ಶಿಕ್ಷಣದ ಸಂಶೋಧನೆಗಾಗಿ ಪ್ರೀತಿ ಬಳಿಗಾರ ಅವರಿಗೆ ಪಿಎಚ್‌.ಡಿ ಪ್ರದಾನ ಮಾಡಲಾಯಿತು. ವಿ.ವಿ.ಯಿಂದ ಮೊದಲ ಪಿಎಚ್‌.ಡಿ ಪಡೆದವರು ಎಂಬ ಗೌರವಕ್ಕೆ ಇಬ್ಬರೂ ಪಾತ್ರರಾದರು.

ವಿ.ವಿ ಕುಲಪತಿಯೂ ಆಗಿರುವ ಡಾ. ಅಶೋಕ ಶೆಟ್ಟರ್ ಮಾತನಾಡಿ, ‘ಎಂಜಿನಿಯರಿಂಗ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರೀತಿ ಅವರು ಪಡೆದಿರುವ ಪಿಎಚ್‌.ಡಿ ದೇಶದಲ್ಲೇ ಮೊದಲು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಈ ಸಲದ ಕ್ಯಾಂಪಸ್ ನೇಮಕಾತಿಯಲ್ಲಿ ಕಾಲೇಜಿನ 1,512 ವಿದ್ಯಾರ್ಥಿಗಳು ವಿವಿಧ ಉದ್ಯೋಗಗಳಿಗೆ ಆಯ್ಕೆಯಾಗಿದ್ದಾರೆ. ಕಂಪ್ಯೂಟರ್ ವಿಜ್ಞಾನ ವಿಭಾಗದ ಪ್ರವೀಣ ನಾಯಕ್ ವಾರ್ಷಿಕ ಗರಿಷ್ಠ ₹43 ಲಕ್ಷ ವೇತನದ ಟ್ವಿಲಿಯೊ ಕಂಪನಿ ಉದ್ಯೋಗಕ್ಕೆ ನೇಮಕವಾಗಿದ್ದಾರೆ’ ಎಂದು ಸಂತಸ ವ್ಯಕ್ತಪಡಿಸಿದರು.

ಕಸ್ತೂರಿ ರಂಗನ್ ಗೈರು: ಘಟಿಕೋತ್ಸವದ ಮುಖ್ಯ ಅತಿಥಿಯಾಗಿ ಭಾಗವಹಿಸಬೇಕಿದ್ದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಸಮಿತಿ ಮುಖ್ಯಸ್ಥ ಡಾ. ಕೆ. ಕಸ್ತೂರಿರಂಗನ್ ಅವರು ಗೈರಾಗಿದ್ದರು. ಅವರು ಸಿದ್ಧಪಡಿಸಿದ್ದ ಭಾಷಣವನ್ನು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಗೋಪಾಲಕೃಷ್ಣ ಜೋಶಿ ಓದಿದರು.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ, ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಗೋಪಾಲಕೃಷ್ಣ ಜೋಶಿ, ಕುಲಸಚಿವರಾದ ಡಾ. ಬಸವರಾಜ ಅನಾಮಿ, ಡಾ. ಪ್ರಕಾಶ ತೇರಿ, ಡಾ. ಅನಿಲ ನಂಬಿ, ಕಾರ್ಯನಿರ್ವಾಹಕ ಡೀನ್ ಪ್ರೊ. ಬಿ.ಎಲ್. ದೇಸಾಯಿ ಇದ್ದರು.

ಶಿಕ್ಷಣ

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

MATHEMATICS

MULTIPLE CHOICE QUESTIONS

23) If $|x+5| \geq 10$ then

a) $x \in (-15, 5]$ b) $x \in (-5, 5]$
c) $x \in (-\infty, -15] \cup [5, \infty)$
d) $x \in [-\infty, -15] \cup [5, \infty)$

Ans: (c)

$\Rightarrow |x+5| \geq 10$
$\Rightarrow x+5 \leq -10$ or $x+5 \geq 10$
$\Rightarrow x \leq -15$ or $x \geq 5$
$\Rightarrow x \in (-\infty, -15] \cup [5, \infty)$

24) The constant term in the expansion of $(x^2 - [1/x^2])^{16}$ is ……..

a) ${}^{16}C_8$ b) ${}^{16}C_7$
c) ${}^{16}C_9$ d) ${}^{16}C_{10}$

Ans: (a)

Let T_{r+1} be the constant term.
$\Rightarrow T_{r+1} = {}^{16}C_r (x^2)^{16-r} (1/x^2)^r$
$= {}^{16}C_r x^{32-4r}$
For constant term $32 - 4r = 0$
$\Rightarrow 4r = 32$
$\Rightarrow r = 8$
$\Rightarrow T_{8+1} = {}^{16}C_8$

25) The product of the degree and other of the D.E. $\left(\frac{d^2y}{dx^2}\right)^2 - \left(\frac{dy}{dx}\right)^3 = y^3$ is

(A) 4 **(B) 6**
(C) 2 **(D) 3**

Ans: (a) 4

Expln:- The order of a differential equation is that of the highest order derivative. Here it is 2.
The degree of a D.E. is the degree of the highest ordered derivative. Here it is 2. Their product is 4

9. The value of the integral $\int_0^{\pi} \frac{x \sin^{2n} x}{\sin^{2n} x + \cos^{2n} x} dx$ is

(A) π^2 (B) $2\pi^2$
(C) $\frac{\pi^2}{4}$ (D) $\frac{\pi^2}{2}$

Ans : (C) $\frac{\pi^2}{4}$

$$I = \int_0^{\pi} \frac{x \sin^{2n} x \, dx}{\sin^{2n} x + \cos^{2n} x} \quad ...(1)$$

$$I = \int_0^{\pi} \frac{(\pi - x) \sin^{2n}(\pi - x)}{\sin^{2n} x + \cos^{2n} x} dx = \int_0^{\pi} \frac{(\pi - x) \sin^{2n} x}{\sin^{2n} x + \cos^{2n} x} dx \quad ...(2)$$

Adding (1) and (2),

$$2I = \pi \int_0^{\pi} \frac{x \sin^{2n} x \, dx}{\sin^{2n} x + \cos^{2n} x}$$

$$2I = \pi . 2 \int_0^{\pi/2} \frac{\sin^{2n} x \, dx}{\sin^{2n} x + \cos^{2n} x} \text{ (applying } \int_0^{2a} f(x)\,dx = 2\int_0^{a} f(x)\,dx \text{ if } f(2a - x) = f(x)]$$

$$I = \pi \int_0^{\pi/2} \frac{\sin^{2n} x}{\sin^{2n} x + \cos^{2n} x} dx \quad ...(3)$$

$$= \pi \int_0^{\pi/2} \frac{\sin^{2n}\left(\frac{\pi}{2} - x\right)}{\sin^{2n}\left(\frac{\pi}{2} - x\right) + \cos^{2n}\left(\frac{\pi}{2} - x\right)} dx$$

$$I = \pi \int_0^{\pi/2} \frac{\cos^{2n} x}{\cos^{2n} x + \sin^{2x} n} dx \quad ...(4)$$

Adding (3) and (4), $2I = \pi \int_0^{\pi/2} \frac{\sin^{2n} x + \cos^{2n} x}{\sin^{2n} x + \cos^{2n} x} dx$

$2I = \pi \int_0^{\pi/2} dx.$ $2I = \pi[x]_0^{\pi/2} = \pi . \frac{\pi}{2}$ $\therefore I = \frac{\pi^2}{4}.$

26) Everybody in a room shakes hands with everybody else. The total number of handshakes is 45. The total number of persons in the room is

a) 9 b) 10
c) 5 d) 15

Answer: (b)

Let the total number of handshake = ${}^nC_2$
We know $\Rightarrow {}^nC_2 = 45$
$\Rightarrow n!/2!\,!(n-2)! = 45$
$\Rightarrow n(n-1)/2 = 45$
$\Rightarrow n^2 - n - 90 = 0$
$\Rightarrow n = 10, -9$ (not possible)
Total no. of persons in the room is 10.

27) If $\begin{bmatrix} 1 & 1 \\ -1 & 1 \end{bmatrix} \begin{bmatrix} x \\ y \end{bmatrix} = \begin{bmatrix} 2 \\ 4 \end{bmatrix}$ then the Value of x and y respectively are

A) -3 , -1 **B) 1, 3**
C) 3, 1 **D) -1, 3**

Ans:- D

Expln:-

$$\begin{bmatrix} 1 & 1 \\ -1 & 1 \end{bmatrix} \begin{bmatrix} x \\ y \end{bmatrix} = \begin{bmatrix} x+y \\ -x+y \end{bmatrix} = \begin{bmatrix} 2 \\ 4 \end{bmatrix}$$

$x + y = 2$
$-x + y = 4$
Add $2y - 6$ $\therefore y = 3$ Then $x = -1$

Ans:- -1, 3

28) $\int \frac{x^3 - 1}{x^3 + x} dx =$

(A) $x - \log x + \log(x^2 + 1) - \tan^{-1} x + c$

(B) $x - \log x + \frac{1}{2}\log(x^2 + 1) - \tan^{-1} x + c$

(C) $x + \log x + \log(x^2 + 1) - \tan^{-1} x + c$

(D) $x + \log x + \frac{1}{2}\log(x^2 + 1) - \tan^{-1} x + c$

Ans : (B) $x - \log x + \frac{1}{2}\log(x^2 + 1) - \tan^{-1} x + c$

(Contd……)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

BIOLOGY

21) Which one of the following is not a fungal disease?

a) Rust of wheat b) Smut of Bajra
c) Black rot of crucifers
d) Red rot of sugarcane

Ans:- c

22) Identify the 'order' from the following:

a) Carnivora b) Muscidae
c) Insecta d) Panthera

Answer: (a)

Expln:- • Carnivora is the order of eutherian mammals, which refer to any meat-eating organism. Example- Dogs, Cats, Wolves etc.
• Muscidae is a family of flies found in the superfamily Muscoidea. Example- Housefly, Musca.
• Insects are a class of hexapod invertebrates within the arthropod phylum. Example- Ant, Bugs etc.
• Panthera is a genus within the Felidae family. Example- Tiger, Lion etc.

23) In virus-infected plants the meristematic tissues in both apical and axillary buds are free of virus because:

a) the dividing cells are virus resistant
b) meristems have anti viral compounds
c) the cell division of meristems are faster than the rate of viral multiplication
d) Viruses cannot multiply within meristem cell (S).

Ans:- c

24) Several South Indian states raise 2 - 3 crops of rice annually. The agronomic feature that makes this possible is because of………………

a) shorter rice plant
b) better irrigation facilities
c) early yielding rice variety
d) disease resistant rice variety

Ans:- c

25) Which of the following options show the characters of mycoplasma?

a) Smallest living cell without cell wall survive with oxygen
b) Smallest living cell with cell wall survive with oxygen
c) Smallest living cell without cell wall survive without oxygen
d) Smallest living cell with cell wall survive without oxygen

Ans: (c)

Expln:- Mycoplasma is the smallest cell which does not possess a cell wall as an outer covering but has cell membrane as an outer covering. As they do not have cell walls they do not get affected by the antibiotics and cause severe diseases to the plants and animals. They can even survive without oxygen and respire anaerobically.

26) Which one of the following combination would a sugarcane farmer look for in the sugarcane crop?

a) Thick stem, long internodes, high sugar content and disease resistant
b) Thick stem, high sugar content and profuse flowering
c) Thick stem, short internodes, high sugar content, disease resistant
d) Thick stem, low sugar content, disease resistant

Ans:- a

27) Fungicides and antibiotics are chemicals that:

a) enhance yield and disease resistance
b) kill pathogenic fungi and bacteria, respectively
c) kill all pathogenic microbes
d) kill pathogenic bacteria and fungi respectively.

Ans:- b

28) Use of certain chemicals and radiation to change the base sequences of genes of crop plants is termed:

a) recombinant DNA technology
b) transgenic mechanism
c) mutation breeding d) gene therapy

Ans:- c

29) The scientific process by which crop plants are enriched with certain desirable nutrients is called:

a) crop protection b) breeding
c) bio-fortification d) bio-remediation

Ans:- c

30) The term 'totipotency' refers to the capacity of a:

a) cell to generate whole plant
b) bud to generate whole plant
c) seed to germinate
d) cell to enlarge in size.

Ans:- a

31) Given below are a few statements regarding somatic hybridization. Choose the correct statements.

i) protoplasts of different cells of the same plant are fused
ii) protoplasts from cells of different species can be fused
iii) treatment of cells with cellulose and pectinase is mandatory
iv) the hybrid protoplast contains characters of only one parental protoplast.

a) (ii) and (iii) b) (i) and (ii)
c) (iii) and (ii) d) (ii) and (iii)

Ans:- d

ಉದ್ಯೋಗಸೇತುವಾಗಬಲ್ಲ ಕೌಶಲ ಕೋರ್ಸ್

ಸಿಬಂತಿ ಪದ್ಮನಾಭ ಕೆ. ವಿ.

ನಮ್ಮ ಶಿಕ್ಷಣ ವ್ಯವಸ್ಥೆ ಹಾಗೂ ಉದ್ಯೋಗರಂಗದ ನಡುವೆ ಅಡ್ಡ ನಿಂತಿರುವ ದೊಡ್ಡ ಗೋಡೆ ಕೌಶಲಗಳ ಕೊರತೆ. ಶಿಕ್ಷಣ ಸಂಸ್ಥೆಗಳಿಂದ ಲಕ್ಷಾಂತರ ಪದವೀಧರರು ಪ್ರತಿವರ್ಷ ಹೊರಬರುತ್ತಲೇ ಇದ್ದರೂ ಉದ್ಯೋಗ ಜಗತ್ತಿನ ಅವಶ್ಯಕತೆಗಳು ಪೂರೈಕೆಯಾಗುತ್ತಿಲ್ಲ. ಒಂದೆಡೆ ಖಾಲಿ ಉಳಿದಿರುವ ಅಸಂಖ್ಯ ಉದ್ಯೋಗಗಳು, ಇನ್ನೊಂದೆಡೆ ಹೆಚ್ಚುತ್ತಲೇ ಇರುವ ನಿರುದ್ಯೋಗ. ಈ ವೈರುಧ್ಯವನ್ನು ಸರಿಪಡಿಸುವ ಏಕೈಕ ದಾರಿಯೆಂದರೆ ಶಿಕ್ಷಣ ಹಾಗೂ ಉದ್ಯೋಗ ಜಗತ್ತಿನ ನಡುವಿನ ಅಂತರವನ್ನು ನಿವಾರಿಸುವುದು; ಅಂದರೆ ನಮ್ಮ ಯುವ ಸಮೂಹವನ್ನು ಹೊಸಕಾಲದ ಕೌಶಲಗಳೊಂದಿಗೆ ಸಶಕ್ತರೂ ಸಮರ್ಥರನ್ನಾಗಿ ಬೆಳೆಸುವುದು.

> ಸಾಂಪ್ರದಾಯಿಕ ಉದ್ಯೋಗಗಳ ಜತೆಗೆ ಹೊಸ ಉದ್ಯೋಗಗಳತ್ತ ಗಮನ ಹರಿಸುವುದು ಇಂದಿನ ಅನಿವಾರ್ಯ. ಹೊಸ ಉದ್ಯೋಗಗಳು ತಕ್ಷಣಕ್ಕೆ ತಾಂತ್ರಿಕ ಹುದ್ದೆಗಳೆನಿಸಿದರೂ, ಇವು ಎಲ್ಲ ಹಿನ್ನೆಲೆಯವರನ್ನು ಸ್ವಾಗತಿಸುವ ಕ್ಷೇತ್ರಗಳೆಂಬುದು ವಾಸ್ತವ ಸಂಗತಿ.

ಈಗ ಕಾಲ ಬದಲಾಗಿದೆ, ಉದ್ಯೋಗಗಳೂ ಬದಲಾಗಿವೆ, ಅದಕ್ಕೆ ತಕ್ಕಂತೆ ಶಿಕ್ಷಣ ಹಾಗೂ ತರಬೇತಿ ಬದಲಾಗದೆ ಇರುವುದೇ ಇಂದಿನ ಎಲ್ಲ ಸಮಸ್ಯೆಗಳ ಮೂಲ.

ಉದ್ಯೋಗ ಜಗತ್ತು ಡೇಟಾ ಸೈನ್ಸ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಸೈಬರ್ ಸೆಕ್ಯುರಿಟಿ, ವರ್ಚುವಲ್ ರಿಯಾಲಿಟಿ, 3-ಡಿ ಪ್ರಿಂಟಿಂಗ್, ರೊಬೊಟಿಕ್ಸ್, ಕ್ಲೌಡ್ ಕಂಪ್ಯೂಟಿಂಗ್ ಮುಂತಾದ ಕ್ಷೇತ್ರಗಳೆಡೆಗೆ ಭರದಿಂದ ವ್ಯಾಪಿಸುತ್ತಿದೆ. ನಾವು ಕೇವಲ ಸಾಂಪ್ರದಾಯಿಕ ಉದ್ಯೋಗಗಳ ಕಡೆಗಷ್ಟೇ ಗಮನಹರಿಸಿದರೆ ಏನೇನೂ ಸಾಲದು. ಹೊಸತನದತ್ತ ತೆರೆದುಕೊಳ್ಳುವುದು ಇಂದಿನ ಅನಿವಾರ್ಯ. ಹೊಸ ಉದ್ಯೋಗ ಸಾಧ್ಯತೆಗಳನ್ನು ಗಮನಿಸಿದಾಗ ತಕ್ಷಣಕ್ಕೆ ಇವೆಲ್ಲ ತಾಂತ್ರಿಕ ಹುದ್ದೆಗಳು ಎನಿಸಿದರೂ, ಇವು ಎಲ್ಲ ಹಿನ್ನೆಲೆಯ ಮಂದಿಯನ್ನೂ ಸ್ವಾಗತಿಸುವ ಕ್ಷೇತ್ರಗಳೆಂಬುದು ವಾಸ್ತವ ಸಂಗತಿ.

ಬಿ.ಎ, ಬಿ.ಕಾಂ, ಬಿ.ಎಸ್ಸಿಯಂತಹ ಸಾಂಪ್ರದಾಯಿಕ ಪದವಿಗಳನ್ನು ಪಡೆದವರೂ ಇವುಗಳನ್ನು ಪ್ರವೇಶಿಸಿ ಯಶಸ್ಸು ಸಾಧಿಸಬಹುದು. ದೊಡ್ಡದೊಡ್ಡ ಕಂಪನಿಗಳು ಇಂದು ಎದುರು ನೋಡುತ್ತಿರುವುದು ಕೌಶಲಗಳನ್ನೇ ಹೊರತು ಅಂಕಪಟ್ಟಿಗಳನ್ನಲ್ಲ. ಪದವಿ ವ್ಯಾಸಂಗ ಮಾಡುತ್ತಿರುವವರು ಅದರ ಜೊತೆಜೊತೆಗೆ ಕಲಿಯಬಹುದಾದ ನೂರಾರು ಕೋರ್ಸುಗಳು ಈಗ ಲಭ್ಯವಿವೆ. ಇವುಗಳಲ್ಲಿ ಅನೇಕವು ಉಚಿತ ಹಾಗೂ ಆನ್‌ಲೈನ್ ವಿಧಾನದಲ್ಲಿ ಲಭ್ಯ. ಬಿಡುವಿನ ವೇಳೆಯಲ್ಲಿ ಒಂದೆರಡು ಕೋರ್ಸುಗಳನ್ನು ಮಾಡಿಕೊಂಡರೆ ಇವುಗಳ ನೆರವಿನಿಂದಲೇ ಒಳ್ಳೆಯ ಉದ್ಯೋಗ ಗಳನ್ನೂ ಪಡೆಯಬಹುದು. ಅಂಥ ಕೆಲವು ಕೋರ್ಸ್‌ಗಳ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ;

ಡಿಜಿಟಲ್ ಮಾರ್ಕೆಟಿಂಗ್: ಯಾವುದೇ ಉತ್ಪನ್ನದ ಮಾರಾಟಗಾರರೂ ಇಂದು ಪ್ರಚಾರಕ್ಕಾಗಿ ಅವಲಂಬಿಸಿರುವುದು ಡಿಜಿಟಲ್ ಮಾಧ್ಯಮವನ್ನು. ಸಾಂಪ್ರದಾಯಿಕ ಮಾಧ್ಯಮಗಳ ಜಾಹೀರಾತು ಸಾಕಾಗುವುದಿಲ್ಲ.

ಕಂಟೆಂಟ್ ಡೆವಲಪ್‌ಮೆಂಟ್, ಸೋಶಿಯಲ್ ಮೀಡಿಯಾ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಆಪ್ಟಿಮೈಸೇಶನ್(ಎಸ್‌ಇಒ)- ಹೀಗೆ ಡಿಜಿಟಲ್ ಮಾರ್ಕೆಟಿಂಗ್‌ಗೆ ಸಂಬಂಧಿಸಿದಂತೆ ಹತ್ತಾರು ಆನ್‌ಲೈನ್ ಕೋರ್ಸುಗಳಿವೆ.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್: ಬಹುತೇಕ ಆನ್‌ಲೈನ್ ಚಟುವಟಿಕೆಗಳು ಇಂದು ಕೃತಕ ಬುದ್ಧಿಮತ್ತೆ ಆಧರಿತವಾಗಿವೆ. ಅದನ್ನು ಬಳಸಿಕೊಂಡು ವ್ಯವಹಾರ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಹತ್ತಾರು ಉಚಿತ ಕೋರ್ಸ್‌ಗಳು ಲಭ್ಯವಿವೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಪ್ರಾಜೆಕ್ಟ್ಸ್, ಇಂಟ್ರೊಡಕ್ಷನ್ ಟು ಎಐ, ಸೆಕ್ಯೂರ್ ಆ್ಯಂಡ್ ಪ್ರೈ. ಎಐ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಫಾರ್ ರೊಬೊಟಿಕ್ಸ್, ಡೆವಲಪಿಂಗ್ ಎಐ ಅಪ್ಲಿಕೇಶನ್ಸ್ – ಈ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಕೋರ್ಸ್‌ಗಳು.

ಡೇಟಾ ಅನಲಿಟಿಕ್ಸ್: ತಂತ್ರಜ್ಞಾನ ಬೆಳೆದಂತೆ ವಿವಿಧ ರಂಗಗಳಿಗೆ ಸಂಬಂಧಿಸಿದ ದತ್ತಾಂಶ ಬೆಟ್ಟದಂತೆ ಬೆಳೆಯುತ್ತಿದೆ. ಇದರ ವಿಶ್ಲೇಷಣೆ ಮತ್ತು ಅನ್ವಯ ದುಸ್ತರವಾಗುತ್ತಿದೆ. ಹೀಗಾಗಿ ಡೇಟಾ ಅನಲಿಟಿಕ್ಸ್ ಎಂಬ ಪ್ರಧಾನ ಉದ್ಯೋಗ ಕ್ಷೇತ್ರವೊಂದು ತೆರೆದುಕೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಕಂಪ್ಯೂಟಿಂಗ್ ಫಾರ್ ಡೇಟಾ ಅನಾಲಿಸಿಸ್, ಕ್ರಿಪ್ಟೋಗ್ರಫಿ ಆ್ಯಂಡ್ ನೆಟ್‌ವರ್ಕ್ ಸೆಕ್ಯುರಿಟಿ, ಡೇಟಾ ಅನಲಿಟಿಕ್ಸ್ ವಿತ್ ಪೈಥಾನ್. ಡೇಟಾ ಅನಾಲಿಸಿಸ್ ಫಾರ್ ಡಿಸಿಶನ್ ಮೇಕಿಂಗ್, ವಿಶುವಲೈಸೇಶನ್ ಫಾರ್ ಡೇಟಾ ಜರ್ನಲಿಸಂ- ಇಂತಹ ಹತ್ತಾರು ಕೋರ್ಸ್‌ಗಳಿವೆ.

ಸೈಬರ್ ಸೆಕ್ಯುರಿಟಿ: ಆನ್‌ಲೈನ್ ಜಗತ್ತಿನ ಕಳ್ಳಕಾಕರಿಂದ ಸುರಕ್ಷಿತವಾಗಿರುವುದು ಇಂದಿನ ಆದ್ಯತೆಗಳಲ್ಲೊಂದು. ಹೀಗಾಗಿ ಸೈಬರ್ ಭದ್ರತೆಯ ಜ್ಞಾನ ಹಾಗೂ ಕೌಶಲಗಳನ್ನು ಬೆಳೆಸಿಕೊಂಡವರಿಗೆ ಸಾಕಷ್ಟು ಉದ್ಯೋಗಾವಕಾಶಗಳು ದೊರೆಯುತ್ತವೆ. ಸರ್ಟಿಫಿಕೇಟ್ ಇನ್ ಸೈಬರ್ ಸೆಕ್ಯುರಿಟಿ, ಇನ್ಫಾರ್ಮೇಶನ್ ಸೆಕ್ಯುರಿಟಿ ಆ್ಯಂಡ್ ಸೈಬರ್ ಫೊರೆನ್ಸಿಕ್ಸ್, ಆನ್‌ಲೈನ್ ಪ್ರೈವೆಸಿ, ಸೈಬರ್ ಸೆಕ್ಯುರಿಟಿ ಇನ್ ಹೆಲ್ತ್‌ಕೇರ್ ಪ್ರೋಗ್ರಾಮ್ಸ್- ಈ ಕ್ಷೇತ್ರದಲ್ಲಿ ಲಭ್ಯವಿರುವ ಕೆಲವು ಕೋರ್ಸುಗಳು.

ಡೇಟಾ ಸೈನ್ಸ್: ದತ್ತಾಂಶ ನಿರ್ವಹಣೆ ಕುರಿತ ಆನ್‌ಲೈನ್ ಕೋರ್ಸ್‌ಗಳನ್ನು ಇಂದು ಅಂತರರಾಷ್ಟ್ರೀಯ ಮಟ್ಟದ ಕಂಪೆನಿಗಳು ಹಾಗೂ ವಿಶ್ವವಿದ್ಯಾಲಯಗಳು ನೀಡುತ್ತಿವೆ. ಇವು ಉಚಿತವಾಗಿಯೂ ಲಭ್ಯವಿವೆ. ಪರ್ಡ್ಯೂ ಯೂನಿವರ್ಸಿಟಿಯ ಡೇಟಾ ಸೈನ್ಸ್ ಫಾರ್ ಸ್ಮಾರ್ಟ್ ಸಿಟೀಸ್, ಎಂಐಟಿ ಕೇಂಬ್ರಿಜ್‌ನ ಕೊಲಾಬೊರೇಟಿವ್ ಡೇಟಾ ಸೈನ್ಸ್ ಫಾರ್ ಹೆಲ್ತ್‌ಕೇರ್, ಐಬಿಎಂನ ಡೇಟಾ ಸೈನ್ಸ್ ಟೂಲ್ಸ್, ಯೂನಿವರ್ಸಿಟಿ ಆಫ್ ಲಂಡನ್‌ನ ಫೌಂಡೇಶನ್ಸ್ ಆಫ್ ಡೇಟಾ ಸೈನ್ಸ್ ಇಂತಹ ಉಪಯುಕ್ತ ಕೋರ್ಸ್‌ಗಳಿಗೆ ಉದಾಹರಣೆಗಳು.

ಗ್ರಾಫಿಕ್ ಡಿಸೈನಿಂಗ್: ಯೋಚನೆ-ಯೋಜನೆಗಳ ದೃಶ್ಯಿಕ ವಿವರಣೆ ಹೊಸಕಾಲದ ಅವಶ್ಯಕತೆಗಳಲ್ಲೊಂದು. ಹೀಗಾಗಿ ಎಲ್ಲೆಡೆಯೂ ಗ್ರಾಫಿಕ್ ವಿನ್ಯಾಸಕಾರರು ಇಂದು ಬೇಕೇಬೇಕು. ಜಾಹೀರಾತಿನಿಂದ ತೊಡಗಿ ಸಿನಿಮಾರಂಗದವರೆಗೆ ನೂರಾರು ಕ್ಷೇತ್ರಗಳು ಅವರನ್ನು ಸ್ವಾಗತಿಸುತ್ತವೆ. ಇಂಟ್ರಡಕ್ಷನ್ ಟು ಗ್ರಾಫಿಕ್ ಡಿಸೈನ್ ವಿತ್ ಫೋಟೊಶಾಪ್, ಫಂಡಮೆಂಟಲ್ಸ್ ಆಫ್ ಗ್ರಾಫಿಕ್ ಡಿಸೈನ್, ಗ್ರಾಫಿಕ್ಸ್ ಆ್ಯಂಡ್ ಅನಿಮೇಶನ್ ಡೆವಲಪ್‌ಮೆಂಟ್, ಕಂಪ್ಯೂಟರ್ ಗ್ರಾಫಿಕ್ಸ್- ಹೀಗೆ ಅನೇಕ ಕೋರ್ಸ್‌ಗಳು ಉಚಿತವಾಗಿ ದೊರೆಯುತ್ತವೆ.

ಫೋಟೊಗ್ರಫಿ ಆ್ಯಂಡ್ ವಿಡಿಯೊಗ್ರಫಿ: ಕೌಟುಂಬಿಕ ಕಾರ್ಯಕ್ರಮಗಳಿಂದ ತೊಡಗಿ ಕಾರ್ಪೊರೇಟ್ಸ್ ಸಮಾರಂಭಗಳವರೆಗೆ ಎಲ್ಲರಿಗೂ ಬೇಕಾಗಿರುವುದು ಛಾಯಾಗ್ರಹಣ ಮತ್ತು ವಿಡಿಯೊಗ್ರಫಿ. ಹೀಗಾಗಿ ಕ್ಯಾಮೆರಾ ನಿರ್ವಹಿಸಬಲ್ಲವರಿಗೆ ಈಗ ಎಲ್ಲೆಡೆಯೂ ಬೇಡಿಕೆ. ಫೋಟೊಗ್ರಫಿ, ವಿಡಿಯೊಗ್ರಫಿ ಬಲ್ಲವರು ನಿರುದ್ಯೋಗಿಗಳಾಗುವ ಸಾಧ್ಯತೆ ಕಡಿಮೆ. ಹತ್ತಾರು ಸಂಖ್ಯೆಯಲ್ಲಿ ಲಭ್ಯವಿರುವ ಉಚಿತ ಆನ್‌ಲೈನ್ ಕೋರ್ಸ್‌ಗಳ ಮೂಲಕ ಫೋಟೊಗ್ರಫಿ ಕೌಶಲಗಳನ್ನು ಸುಲಭವಾಗಿ ಬೆಳೆಸಿಕೊಳ್ಳಬಹುದು.

ವೆಬ್ ಡಿಸೈನಿಂಗ್: ತಾಂತ್ರಿಕ ಪದವಿಗಳ ವ್ಯಾಸಂಗ ಮಾಡದೆಯೂ ಜಾಲತಾಣಗಳನ್ನು ಹಾಗೂ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವುದು ಈಗಿನ ಪ್ರವೃತ್ತಿಗಳಲ್ಲೊಂದು. ಅನೇಕ ಯುವಕರು ಇದನ್ನೊಂದು ಹವ್ಯಾಸವನ್ನಾಗಿ ಬೆಳೆಸಿಕೊಂಡು ದೊಡ್ಡ ಯಶಸ್ಸು ಸಾಧಿಸಿರುವುದುಂಟು. ಇಂಟ್ರಡಕ್ಷನ್ ಟು ವೆಬ್ ಡೆವಲಪ್‌ಮೆಂಟ್, ಯುಎಕ್ಸ್ ಡಿಸೈನ್ ಫಾರ್ ಮೊಬೈಲ್ ಡೆವಲಪರ್ಸ್, ಯೂಸರ್ ಇಂಟರ್‌ಫೇಸ್ ಡಿಸೈನ್. ಯೂಸರ್ ಎಕ್ಸ್‌ಪೀರಿಯನ್ಸ್ ಡಿಸೈನ್- ಈ ವರ್ಗಕ್ಕೆ ಸಂಬಂಧಿಸಿದ ಕೆಲವು ಕೋರ್ಸ್‌ಗಳು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿ– 2020' (ಎನ್‌ಇಪಿ), ಪದವಿ ಹಾಗೂ ಉದ್ಯೋಗಗಳ ನಡುವಿನ ಅಂತರವನ್ನು ಮೌಲ್ಯ ಹಾಗೂ ಕೌಶಲಗಳ ಚೌಕಟ್ಟಿನಲ್ಲಿ ನಿವಾರಿಸಿಕೊಳ್ಳುವ ದೊಡ್ಡ ಕನಸು ಇಟ್ಟುಕೊಂಡಿದೆ. ಇದರ ಸಮರ್ಥ ಅನುಷ್ಠಾನ ವಿದ್ಯಾರ್ಥಿಗಳ ಉತ್ಸಾಹ ಹಾಗೂ ಅಧ್ಯಾಪಕರ ಬದ್ಧತೆಯ ಮೇಲೆ ನಿಂತಿದೆ. ಕೌಶಲಾಭಿವೃದ್ಧಿ ಕೋರ್ಸ್‌ಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಇದಕ್ಕಿರುವ ಸರಳ ಮಾರ್ಗ.

ಕೋರ್ಸ್‌ಗಳು ಎಲ್ಲೆಲ್ಲಿ ಲಭ್ಯ?

ಪ್ರಧಾನಮಂತ್ರಿ ಕೌಶಲ ವಿಕಾಸ್ ಯೋಜನಾ(PMKVY), ರಾಷ್ಟ್ರೀಯ ಕೌಶಲಾಭಿವೃದ್ಧಿ ನಿಗಮ (NSDC), 'ಸ್ವಯಂ'(SWAYAM) ಮುಂತಾದ ಸರ್ಕಾರಿ ಸಂಸ್ಥೆಗಳಲ್ಲದೆ ನಾಸ್‌ಕಾಮ್, ಇನ್ಫೊಸಿಸ್‌ನಂಥ ಸರ್ಕಾರೇತರ ಸಂಸ್ಥೆಗಳು ನೂರಾರು ಉಚಿತ ಹಾಗೂ ಪಾವತಿ ಕೋರ್ಸ್‌ಗಳನ್ನು ಒದಗಿಸುತ್ತಿವೆ. ಪ್ರಮಾಣಪತ್ರವನ್ನೂ ನೀಡುತ್ತವೆ. ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ:

https://infyspringboard.onwingspan.com/
http://www.pmkvyofficial.org/
https://futureskillsprime.in/
https://swayam.gov.in/
https://www.careers360.com/



'ನರ್ಸಿಂಗ್' ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ

● ಬಿ.ಎಸ್ಸಿ (ನರ್ಸಿಂಗ್) ಪದವಿ ನಂತರದ ಅವಕಾಶಗಳ ಕುರಿತು ಮಾಹಿತಿ ನೀಡಿ.

ಅಭಿಷೇಕ್ ಚವ್ಹಾಣ, ವಿಜಯಪುರ.

ಕೋವಿಡ್ ಪಿಡುಗಿನ ನಂತರ ನರ್ಸಿಂಗ್ ವೃತ್ತಿಗೆ ಬೇಡಿಕೆ ಹೆಚ್ಚಾಗಿದೆ. ಕೋರ್ಸ್ ಮುಗಿದ ನಂತರ ಈ ಕ್ಷೇತ್ರಗಳಲ್ಲಿ ವೃತ್ತಿಯನ್ನು ರೂಪಿಸಿಕೊಳ್ಳಬಹುದು: ಆಸ್ಪತ್ರೆಗಳು ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳು, ಆ್ಯಂಬುಲೆನ್ಸ್ ಸೇವೆಗಳು, ನರ್ಸಿಂಗ್ ಹೋಮ್‌ಗಳು, ನರ್ಸಿಂಗ್ ಕಾಲೇಜುಗಳು, ಆರೋಗ್ಯ ಸಂಬಂಧಿತ ಶಿಕ್ಷಣ ಸಂಸ್ಥೆಗಳು, ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಉದ್ದಿಮೆಗಳು, ಕೈಗಾರಿಕೆಗಳು, ಸಶಸ್ತ್ರ ಪಡೆಗಳು, ರೆಡ್ ಕ್ರಾಸ್ ಸೊಸೈಟಿ, ಎನ್‌ಜಿಒ ಸಂಸ್ಥೆಗಳು ಇತ್ಯಾದಿ. ಈ ವೃತ್ತಿಯಲ್ಲಿ ಯಶಸ್ವಿಯಾಗಲು ತಾಳ್ಮೆ, ಸೇವಾ ಮನೋಭಾವ, ಉತ್ತಮ ಸಂವಹನ, ಅಂತರ್-ವೈಯಕ್ತಿಕ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ವೃದ್ಧಾಪ್ಯ ವಿಜ್ಞಾನ (ಜೆರಿಯಾಟ್ರಿಕ್ ಸೈನ್ಸ್) ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಕ್ಕೆ ಪೂರೈಕೆಗಿಂತಲೂ ಹೆಚ್ಚಿನ ಬೇಡಿಕೆಯಿದೆ.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/education-career ಜಾಲತಾಣಕ್ಕೆ ಭೇಟಿ ನೀಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

CMR UNIVERSITY
Private University Estd in Karnataka State by Act No.45 of 2013
University Grants Commission Recognized
ADMISSION NOTIFICATION
Ph.D. Programme Full-Time & Part-Time (July 2023 Batch)
Applications are invited from eligible candidates for admission into Ph.D. (Full-Time/Part-Time) Programme of the July 2023 Batch in the following diciplines (No: CMRU/DORI/Notification/2/2022-23)
Education, Management, Economics, Commerce, Computer Applications, Law, Mathematics, Physics, Chemistry, Computer Science & Engineering, (Artificial Intelligence, Machine Learning, Networking and Cloud Computing, Data Analytics, Cybersecurity, Data Science and Internet of Things) Electronics & Communication Engineering, Mechanical Engineering, Civil Engineering, Kannada, Hindi, English, Psychology, Social Work, Sociology, Library & Information Science, Architecture.
» 500+ Full-Time CMRU Research Fellowships Available
» Candidates interested for Full-Time Ph.D. Programme may be eligible for CMRU Research Associateship with Financial Assistance.
LAST DATE FOR SUBMISSION OF APPLICATION FORM 10th JUNE 2023
SCAN HERE TO APPLY
Sd/- REGISTRAR
96117 60838
admissions.phd@cmr.edu.in
#2, 3rd C Cross, 2nd A Cross Rd, HRBR Layout, Bengaluru, Karnataka 560043, INDIA

‘ತೆನೆ’ ಇಳಿಸಿದ ಶಾಸಕ ಶಿವಲಿಂಗೇಗೌಡ

ಶಿರಸಿ: ಅರಸೀಕೆರೆ ಜೆಡಿಎಸ್ ಶಾಸಕ ಶಿವಲಿಂಗೇಗೌಡ ಭಾನುವಾರ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಶಿರಸಿ ಕಚೇರಿಗೆ ತಮ್ಮ ಬೆಂಬಲಿಗರೊಂದಿಗೆ ಬಂದು ರಾಜೀನಾಮೆ ಪತ್ರ ಸಲ್ಲಿಸಿದರು.

2008ರಲ್ಲಿ ಮೊದಲ ಬಾರಿ ಶಾಸನಸಭೆಗೆ ಆಯ್ಕೆಯಾಗಿದ್ದ ಅವರು 2018ರ ಚುನಾವಣೆಯಲ್ಲಿ ಅರಸೀಕೆರೆ ವಿಧಾನಸಭೆ ಕ್ಷೇತ್ರದಲ್ಲಿ 93,986 ಮತಗಳನ್ನು ಪಡೆದು ಜಯಗಳಿಸಿದ್ದರು. ಪಕ್ಷದಲ್ಲಿ ನಿರೀಕ್ಷಿತ ಮನ್ನಣೆ, ಸ್ಥಾನಮಾನ ಸಿಗದ ಕಾರಣ ಅವರು ಜೆಡಿಎಸ್ ತೊರೆಯಲು ನಿರ್ಧರಿಸಿದ್ದಾಗಿ ಹೇಳಲಾಗುತ್ತಿದೆ.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಶಿವಲಿಂಗೇಗೌಡ, ‘ನಾಯಕರ ಜೊತೆ ಭಿನ್ನಮತ ಇತ್ತು. ಸಾಕಷ್ಟು ಮಾತುಕತೆಯ ನಂತರವೂ ಯಾವುದೇ ಪ್ರಯೋಜನವಾಗಲಿಲ್ಲ. ಪಕ್ಷ ಬಿಡುವುದು ಇಲ್ಲವೇ ಪಕ್ಷಾಂತರವೇ ಉಳಿದ ಮಾರ್ಗ. ಕ್ಷೇತ್ರದ ಜನರ ಅಭಿಪ್ರಾಯದಂತೆ ಕಾಂಗ್ರೆಸ್ ಸೇರಲಿದ್ದೇನೆ’ ಎಂದರು.

‘ಕ್ಷೇತ್ರಕ್ಕೆ ತೆರಳಿ ಜನರ ಬಳಿ ಬಹುಮತ ಕೇಳುತ್ತೇನೆ. ಈಗಾಗಲೇ ಕಾಂಗ್ರೆಸ್ ಎರಡನೇ ಪಟ್ಟಿಯಲ್ಲಿ ನನ್ನ ಹೆಸರು ಅಂತಿಮವಾಗಿದ್ದು, ಅರಸೀಕೆರೆಯಿಂದ ಕಾಂಗ್ರೆಸ್ ಟಿಕೆಟ್ ಈಗಾಗಲೇ ಪಕ್ಕಾ ಆಗಿದೆ. ಗೆಲುವು ನಿಶ್ಚಿತ. ಜೆಡಿಎಸ್ ಪಕ್ಷಕ್ಕೆ ಭವಿಷ್ಯವಿಲ್ಲ’ ಎಂದರು.

‘ರಾಜಕೀಯದಲ್ಲಿ ಯಾರಾದರೂ ಪಕ್ಷಾಂತರ ಮಾಡುತ್ತಾರೆ. ಅಣ್ಣ–ತಮ್ಮಂದಿರೇ ಋಣ ತೀರಿದ ಮೇಲೆ ಅವರವರ ದಾರಿಗೆ ಹೋಗುತ್ತಾರೆ. ನಾನು ಕ್ಷೇತ್ರದ ಜನರು ಹೇಳಿದಂತೆ ರಾಜೀನಾಮೆ ನೀಡಿದ್ದೇನೆ. ಪಕ್ಷಾಂತರದ ಬಗ್ಗೆ ಯಾರೂ ತಪ್ಪು ತಿಳಿಯಬಾರದು’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ‘ಯಾರು ಬೇಕಾದರೂ ಸವಾಲು ಹಾಕಲಿ, ಏನಾದರೂ ಮಾಡಲಿ. ನಾನು ಮಾತ್ರ ಸುಮ್ಮನಿದ್ದು ಎಲ್ಲವನ್ನೂ ಕ್ಷೇತ್ರದ ಜನರಿಗೆ ಬಿಡುತ್ತೇನೆ’ ಎಂದರು.

ಬಿಜೆಪಿ ಸರ್ಕಾರದ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ • ಬಿಜೆಪಿಯಿಂದ ಮೀಸಲಾತಿ ನೀತಿ ದುರ್ಬಳಕೆ: ಟೀಕೆ

‘ಸಂವಿಧಾನಕ್ಕೆ ತಿದ್ದುಪಡಿ: ಮೀಸಲಾತಿ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಮೈಸೂರು: ‘ನಾವು ಅಧಿಕಾರಕ್ಕೆ ಬಂದರೆ ಸಂವಿಧಾನಕ್ಕೆ ತಿದ್ದುಪಡಿ ತಂದು ಪರಿಶಿಷ್ಟ ಜಾತಿ–ಪಂಗಡದವರು, ಒಕ್ಕಲಿಗರು, ವೀರಶೈವ ಲಿಂಗಾಯತರು ಸೇರಿದಂತೆ ಎಲ್ಲ ಜಾತಿಗಳಿಗೂ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡುತ್ತೇವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದರು.

‘ಬಿಜೆಪಿಯು ಮೀಸಲಾತಿಯನ್ನು ಚುನಾವಣೆಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ಆರೋಪಿಸಿ ಹಾಗೂ ‘ಸಂವಿಧಾನ ಬಚಾವೋ–ದೇಶ ಬಚಾವೋ’ ಎಂಬ ಘೋಷಣೆಯಡಿ ಕಾಂಗ್ರೆಸ್ ನಗರ ಹಾಗೂ ಗ್ರಾಮಾಂತರ ಜಿಲ್ಲಾ ಘಟಕದಿಂದ ಇಲ್ಲಿನ ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಭಾನುವಾರ ನಡೆದ ಧರಣಿಯಲ್ಲಿ ಮಾತನಾಡಿದರು.

‘ಈ ಸರ್ಕಾರವು ಮೀಸಲಾತಿ ವಿಷಯದಲ್ಲಿ ಗೊಂದಲವನ್ನುಂಟು ಮಾಡಿದೆ. ಜಾತಿ ವ್ಯವಸ್ಥೆಯ ಕಾರಣದಿಂದ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ ಇದ್ದು, ಅದನ್ನು ಹೋಗಲಾಡಿಸಬೇಕು ಎಂಬುದು ಸಂವಿಧಾನದ ಉದ್ದೇಶ. ಆದರೆ, ಬಿಜೆಪಿಗೆ ಇದರ ಮೇಲೆ ನಂಬಿಕೆ ಇಲ್ಲ. ಧರ್ಮದ ಆಧಾರದ ಮೇಲೆ ಮೀಸಲಾತಿ ಕೊಟ್ಟಿರುವುದು ಸಂವಿಧಾನಬಾಹಿರ ಎಂದು ಸುಳ್ಳು ಹೇಳುತ್ತಿದೆ. ದ್ವೇಷದ ರಾಜಕಾರಣದಿಂದ ಮುಸ್ಲಿಮರಿಗೆ ಮೋಸ ಮಾಡಿದೆ’ ಎಂದು ವಾಗ್ದಾಳಿ ನಡೆಸಿದರು.

‘ಸರ್ಕಾರಿ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಹೇಗೆ ಬರುತ್ತಾರೆ?’

ಮೈಸೂರು: ‘ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಪ್ರಧಾನಿ ನರೇಂದ್ರ ಮೋದಿ ಬಂಡೀಪುರಕ್ಕೆ ಸರ್ಕಾರಿ ಕಾರ್ಯಕ್ರಮಕ್ಕೆಂದು ಹೇಗೆ ಬರುತ್ತಾರೆ?’ ಎಂದು ಸಿದ್ದರಾಮಯ್ಯ ಕೇಳಿದರು.

‘ಪ್ರಧಾನಿ ಬರುವುದಕ್ಕೆ ನಾವೇನೂ ಅಡ್ಡಿಪಡಿಸುವುದಿಲ್ಲ. ಅವರಿಗೆ ಚುನಾವಣಾ ಆಯೋಗದವರು ಅನುಮತಿ ನೀಡಿದ್ದಾರೆಯೇ? ಅನುಮತಿ ಇಲ್ಲದೆ ಬಂದರೆ ನೀತಿಸಂಹಿತೆ ಉಲ್ಲಂಘಿಸಿದಂತಾಗುತ್ತದೆ’ ಎಂದು ಹೇಳಿದರು.

‘ಪ್ರಧಾನಿಗೆ, ಮುಖ್ಯಮಂತ್ರಿಗೆ, ಮಂತ್ರಿಗೆ ಅಥವಾ ಶಾಸಕರಿಗೆ ಬೇರೆ ಬೇರೆ ಕಾನೂನಿಲ್ಲ’ ಎಂದರು.

ಮುಖ್ಯಾಂಶಗಳು

- ಮೊಳಗಿದ ‘ಸಂವಿಧಾನ ಬಚಾವೋ–ದೇಶ ಬಚಾವೋ’ ಘೋಷಣೆ
- ಪ್ರಧಾನಿ ಮೋದಿ, ಮುಖ್ಯಮಂತ್ರಿ ವಿರುದ್ಧ ಟೀಕಾಪ್ರಹಾರ

ಸಂವಿಧಾನದ ಮಾನ್ಯತೆ ಇಲ್ಲದ ರೀತಿಯಲ್ಲಿ ಮೀಸಲಾತಿ ಹೆಚ್ಚಿಸಲಾಗಿದೆ. ಇದು ಅವೈಜ್ಞಾನಿಕವಾಗಿದೆ. ಮೀಸಲಾತಿ ಹೆಚ್ಚಳ ಬಿಜೆಪಿಗೆ ತಿರುಗುಬಾಣವಾಗಲಿದೆ

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಊರ್ಜಿತವಾಗದು: ‘ಸಂವಿಧಾನಕ್ಕೆ ತಿದ್ದುಪಡಿ ತಂದು, ಕಾನೂನು ಮಾಡಿ 9ನೇ ಶೆಡ್ಯೂಲ್‌ಗೆ ಸೇರಿಸಲು ಕ್ರಮ ಕೈಗೊಳ್ಳದೇ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಮೂಗಿಗೆ ತುಪ್ಪ ಸವರುವ ಕೆಲಸವನ್ನಷ್ಟೆ ಸರ್ಕಾರ ಮಾಡಿದೆ. ನಾಲ್ಕು ತಿಂಗಳಾದರೂ ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಿಲ್ಲ. ಹೀಗಿರುವಾಗ, ಮೀಸಲಾತಿ ಹೆಚ್ಚಳ ಊರ್ಜಿತವಾಗದು’ ಎಂದು ಹೇಳಿದರು.

‘ಸಂವಿಧಾನಕ್ಕೆ ತಿದ್ದುಪಡಿ ತಂದು ಮೀಸಲಾತಿ ಹೆಚ್ಚಿಸಬೇಕೇ ಹೊರತು, ಒಂದು ಜಾತಿಯನ್ನು ಇನ್ನೊಂದರ ಮೇಲೆ ಎತ್ತಿ ಕಟ್ಟುವುದು ಯಾವ ನ್ಯಾಯ? 28 ವರ್ಷಗಳಿಂದ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಕಿತ್ತು ಬೇರೆಯವರಿಗೆ ಹಂಚಿದ್ದು ಸರಿಯೇ? ಬಾಯಿಮಾತಿನಲ್ಲಿ ಮೀಸಲಾತಿ ಹೆಚ್ಚಿಸಿದರೆ ರಕ್ಷಣೆ ಸಿಗುತ್ತದೆಯೇ?’ ಎಂದು ಕೇಳಿದರು.

‘ಮೀಸಲಾತಿ ಹೆಚ್ಚಿಸಲು ಹಾಗೂ ಒಳಮೀಸಲಾತಿ ನೀಡಲು ನಮ್ಮ ವಿರೋಧವಿಲ್ಲ. ಆದರೆ, ಈ ಕಾರ್ಯ ಸಂವಿಧಾನಾತ್ಮಕವಾಗಿ ಆಗಬೇಕು’ ಎಂದರು.

ಡಬಲ್ ದ್ರೋಹದ ಸರ್ಕಾರ: ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಮಾತನಾಡಿ, ‘ಬಿಜೆಪಿಯ ಡಿಎನ್‌ಎಯು ಸಂವಿಧಾನ, ಮೀಸಲಾತಿ, ಪರಿಶಿಷ್ಟ ಜಾತಿ ಹಾಗೂ ಪಂಗಡದವರ ವಿರುದ್ಧದ್ದಾಗಿದೆ. ಒಕ್ಕಲಿಗ ಸಮಾಜವನ್ನು ಅಪಮಾನಿಸಿದೆ. ಲಿಂಗಾಯತ ಸಮಾಜದ ಬೇಡಿಕೆಯನ್ನೂ ಗಾಳಿಗೆ ತೂರಿದೆ. ಅಲ್ಪಸಂಖ್ಯಾತರಿಗೆ ಇದ್ದ ಸವಲತ್ತುಗಳನ್ನೂ ಕಿತ್ತುಕೊಂಡಿದೆ. ಹಾಗಿದ್ದರೆ, ಈ ಸರ್ಕಾರ ಯಾವ ಸಮಾಜಕ್ಕಾಗಿ ಕೆಲಸ ಮಾಡುತ್ತಿದೆ. ಇದು ಡಬಲ್ ಎಂಜಿನ್ ಸರ್ಕಾರ ಅಲ್ಲ; ಡಬಲ್ ದ್ರೋಹದ ಸರ್ಕಾರ’ ಎಂದು ವಾಗ್ದಾಳಿ ನಡೆಸಿದರು.

‘ಮೀಸಲಾತಿ ವಿಚಾರದಲ್ಲಿ ಯಾರಿಗೂ ಏನೂ ಸಿಗದಂತೆ ಈ ಸರ್ಕಾರ ಮಾಡುತ್ತಿದೆ. ಐದು ರೊಟ್ಟಿ ಬೇಕಾದಾಗ ಅರ್ಧ ರೊಟ್ಟಿ ಕೊಟ್ಟರೆ ಹೊಟ್ಟೆ ತುಂಬುವುದೇ? ಜನರನ್ನು ಕೇವಲ ಮಾತುಗಳಲ್ಲಿ ಖುಷಿಪಡಿಸುವ ಕೆಲಸವನ್ನು ಮಾತ್ರವೇ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

ಮೈಸೂರಿನಲ್ಲಿ ಕಾಂಗ್ರೆಸ್‌ನಿಂದ ಭಾನುವಾರ ಆಯೋಜಿಸಿದ್ದ ‘ಸಂವಿಧಾನ ಬಚಾವೋ– ದೇಶ ಬಚಾವೋ’ ಧರಣಿಯಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ತೋಳಿಗೆ ಕಪ್ಪುಪಟ್ಟಿ ಧರಿಸಿ ಪಾಲ್ಗೊಂಡಿದ್ದರು. ಮುಖಂಡರಾದ ಕಾಗಲವಾಡಿ ಎಂ.ಶಿವಣ್ಣ, ಎಂ.ಕೆ.ಸೋಮಶೇಖರ್, ಶಾಸಕ ಜಮೀರ್ ಅಹಮದ್ ಖಾನ್, ಮುಖಂಡ ಡಾ.ಎಚ್.ಸಿ.ಮಹದೇವಪ್ಪ, ಶಾಸಕ ತನ್ವೀರ್ ಸೇಠ್ ಇದ್ದಾರೆ

– ಪ್ರಜಾವಾಣಿ ಚಿತ್ರ

ನವದೆಹಲಿ: ಇಂದು ಬಿಜೆಪಿ ಸಭೆ

ನವದೆಹಲಿ: ಕರ್ನಾಟಕ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಸಿದ್ಧತೆ ಕುರಿತು ಚರ್ಚಿಸಲು ಪಕ್ಷದ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸೋಮವಾರ ಇಲ್ಲಿ ಸಭೆ ನಡೆಸಲಿದ್ದಾರೆ.

ಟಿಕೆಟ್ ಹಂಚಿಕೆಗೆ ಸಂಬಂಧಿಸಿ ಸೃಷ್ಟಿಯಾಗಿರುವ ಕಗ್ಗಂಟನ್ನು ಬಗೆಹರಿಸಲು ಇದೇ ವಾರ ಪಕ್ಷದ ಸಂಸದೀಯ ಮಂಡಳಿಯ ಸಭೆಯನ್ನೂ ಆಯೋಜಿಸಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಟಿಕೆಟ್ ಹಂಚಿಕೆಗಾಗಿ ಮೂರು ಹಂತಗಳ ವ್ಯವಸ್ಥೆಯನ್ನು ಪಕ್ಷ ರೂಪಿಸಿದೆ. ಈ ಉದ್ದೇಶಕ್ಕಾಗಿ, ಎಲ್ಲ ವಿಧಾನಸಭೆ ಕ್ಷೇತ್ರಗಳು, ಜಿಲ್ಲಾ ಕೋರ್ ಸಮಿತಿಗಳು ನಂತರ ರಾಜ್ಯ ಕೋರ್ ಸಮಿತಿಯಿಂದ ಟಿಕೆಟ್ ಆಕಾಂಕ್ಷಿಗಳ ಕುರಿತು ಮಾಹಿತಿ ಪಡೆಯಲಾಗಿದೆ ಎಂದೂ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಶಿವಸೇನಾ ಅಭ್ಯರ್ಥಿ ಪ್ರಚಾರಕ್ಕೆ ರಾವುತ್

ಕೆ.ಪಿ ಪಾಟೀಲ

ಖಾನಾಪುರ: ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಖಾನಾಪುರ ವಿಧಾನಸಭಾ ಕ್ಷೇತ್ರದಿಂದ ಶಿವಸೇನಾ ಅಭ್ಯರ್ಥಿಯನ್ನಾಗಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಕೆ.ಪಿ ಪಾಟೀಲ ಅವರನ್ನು ಘೋಷಿಸಲಾಗಿದೆ ಎಂದು ಪಕ್ಷದ ಹಿರಿಯ ಮುಖಂಡ, ಮಹಾರಾಷ್ಟ್ರದ ಸಂಸದ ಅನಿಲ್ ದೇಸಾಯಿ ಅವರು ಹೇಳಿದ್ದಾರೆ.

ಭಾನುವಾರ ಕೆ.ಪಿ ಪಾಟೀಲ ಅವರಿಗೆ ಪಕ್ಷದ ಬಿ.ಫಾರ್ಮ್ ಹಸ್ತಾಂತರಿಸಿ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಪಕ್ಷದ ಪರ ಪ್ರಚಾರಕ್ಕಾಗಿ ಶಿವಸೇನೆಯ ಸ್ಟಾರ್ ಪ್ರಚಾರಕರಾದ ಸಂಜಯ್ ರಾವುತ್, ಆದಿತ್ಯ ಠಾಕ್ರೆ, ಸುಷ್ಮಾ ಅಂಧಾರೆ ಮತ್ತಿತರರು ಆಗಮಿಸಲಿದ್ದಾರೆ’ ಎಂದು ವಿವರಿಸಿದರು.

ಶಾಸಕರ ಪುತ್ರನ ವಾಹನ ತಪಾಸಣೆ ಮಾಡದ ಸಿಬ್ಬಂದಿಗೆ ತರಾಟೆ

ಬೆಳಗಾವಿ: ಚೆಕ್‌ಪೋಸ್ಟ್‌ನಲ್ಲಿ ಶಾಸಕ ಶ್ರೀಮಂತ ಪಾಟೀಲ ಅವರ ಪುತ್ರ ಶ್ರೀನಿವಾಸ ಸಂಚರಿಸುತ್ತಿದ್ದ ವಾಹನವನ್ನು ತಪಾಸಣೆ ಮಾಡದೆ ಬಿಟ್ಟ ಅಧಿಕಾರಿಗಳನ್ನು ತಹಶೀಲ್ದಾರ್ ಎಂ.ಎನ್.ಬಳಿಗಾರ ತರಾಟೆಗೆ ತೆಗೆದುಕೊಂಡರು.

ಕಾಗವಾಡ–ಮೀರಜ್ ಚೆಕ್‌ಪೋಸ್ಟ್‌ನಲ್ಲಿ ಶನಿವಾರ ಪ್ರತಿ ವಾಹನ ತಪಾಸಣೆ ಮಾಡಲಾಗುತ್ತಿತ್ತು. ಆದರೆ, ಸಾಂಗ್ಲಿಯಿಂದ ಕಾಗವಾಡಕ್ಕೆ ಬರುತ್ತಿದ್ದ ಶಾಸಕರ ಪುತ್ರನ ವಾಹನವನ್ನು ತಪಾಸಣೆ ಮಾಡಿಲ್ಲ. ಇದಕ್ಕೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗಿದೆ.

ಈ ವಿಷಯ ಗಮನಕ್ಕೆ ಬರುತ್ತಿದ್ದಂತೆ ಬಳಿಗಾರ ಚೆಕ್‌ಪೋಸ್ಟ್‌ಗೆ ಧಾವಿಸಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಪ್ರತಿ ವಾಹನ ಕಡ್ಡಾಯವಾಗಿ ತಪಾಸಣೆ ಮಾಡುವಂತೆ ಸೂಚಿಸಿದರು.

‘ಕೈ’ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ



ರಾಮಸ್ವಾಮಿಗೌಡ

ಕುಣಿಗಲ್: ಕುಣಿಗಲ್ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಮಾಜಿ ಶಾಸಕ ಬಿ.ಬಿ.ರಾಮಸ್ವಾಮಿಗೌಡ ಘೋಷಣೆ ಮಾಡಿದರು.

ಶಾಸಕ ಡಾ.ರಂಗನಾಥ್ ಅವರಿಗೆ ಟಿಕೆಟ್ ಘೋಷಣೆಯಾಗಿರುವ ಹಿನ್ನಲೆಯಲ್ಲಿ ತಮ್ಮ ಬೆಂಬಲಿಗರೊಂದಿಗೆ ಭಾನುವಾರ ಸಭೆ ನಡೆಸಿದ ನಂತರ ನಿರ್ಧಾರ ಪ್ರಕಟಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿರುವುದು ಕನಕಪುರ ಕಾಂಗ್ರೆಸ್ ಹೈಕಮಾಂಡ್. ಆದ್ದರಿಂದ ಅಧ್ಯಕ್ಷರು ತಮ್ಮ ಸಂಬಂಧಿ ಡಾ.ರಂಗನಾಥ್ ಅವರಿಗೆ ಟಿಕೆಟ್ ಘೋಷಿಸಿದ್ದಾರೆ. ಕಾರ್ಯಕರ್ತರ ಹಿತದೃಷ್ಟಿಯಿಂದ ಸ್ಪರ್ಧಿಸುತ್ತಿದ್ದೇನೆ’ ಎಂದರು.

ಹೊಸಪೇಟೆ: 20 ತೊಲ ಬಂಗಾರ ವಶ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಪ್ರತ್ಯೇಕ ಪ್ರಕರಣಗಳಲ್ಲಿ ಜಿಲ್ಲೆಯ ಮೂರು ಚೆಕ್‌ಪೋಸ್ಟ್‌ಗಳಲ್ಲಿ 20 ತೊಲ ಚಿನ್ನಾಭರಣ, ₹6.80 ಲಕ್ಷ ನಗದು ಹಣವನ್ನು ಪೊಲೀಸರು ಭಾನುವಾರ ವಶಪಡಿಸಿಕೊಂಡಿದ್ದಾರೆ.

ನಗರದ ಟಿ.ಬಿ. ಡ್ಯಾಂ ಸಮೀಪದ ಗಣೇಶ ಗುಡಿ ಚೆಕ್‌ಪೋಸ್ಟ್‌ನಲ್ಲಿ ಮಂತ್ರಾಲಯದಿಂದ ಬೆಂಗಳೂರಿನ ಕಡೆಗೆ ಕಾರು ಹೋಗುತ್ತಿತ್ತು. ಅದನ್ನು ತಡೆದು ಪರಿಶೀಲಿಸಿದಾಗ ದಾಖಲೆಗಳಿಲ್ಲದ 20 ತೊಲೆ ಬಂಗಾರ, ₹80 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ. ಚಿನ್ನಾಭರಣಗಳ ಮೌಲ್ಯ ಸರಿಸುಮಾರು ₹11 ಲಕ್ಷ ಅಂದಾಜಿಸಲಾಗಿದೆ.

ತಾಲ್ಲೂಕಿನ ಭುವನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ಬಳ್ಳಾರಿಯಿಂದ ಹುಬ್ಬಳ್ಳಿ ಕಡೆಗೆ ಸಾಗಿಸುತ್ತಿದ್ದ ₹4 ಲಕ್ಷ ಹಾಗೂ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಚೆಕ್‌ಪೋಸ್ಟ್‌ನಲ್ಲಿ ಹಿರೇಕೆರೂರಿನಿಂದ ಮಾಗಳಕ್ಕೆ ಕೊಂಡೊಯ್ಯುತ್ತಿದ್ದ ₹2 ಲಕ್ಷ ನಗದು ಹಣ ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಟಿ.ಬಿ. ಡ್ಯಾಂ, ಗ್ರಾಮೀಣ ಠಾಣೆ ಮತ್ತು ಹಿರೇಹಡಗಲಿ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ.

₹4.82 ಲಕ್ಷ ವಶ– (ರೋಣ (ಗದಗ ಜಿಲ್ಲೆ) ವರದಿ): ಸಾರಿಗೆ ಸಂಸ್ಥೆ ಬಸ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹4.82 ಲಕ್ಷ ನಗದನ್ನು ತಾಲ್ಲೂಕಿನ ಹಿರೇಹಾಳ ಚೆಕ್‌ಪೋಸ್ಟ್‌ನಲ್ಲಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

₹2.76 ಲಕ್ಷ ನಗದು ವಶ– (ಕಾರವಾರ ವರದಿ): ಸಮರ್ಪಕ ದಾಖಲೆ ಇಲ್ಲದೆ ಸಾಗಿಸಲಾಗುತ್ತಿದ್ದ ₹2.76 ಲಕ್ಷ ಹಣವನ್ನು ಯಲ್ಲಾಪುರ ತಾಲ್ಲೂಕು ಕಿರವತ್ತಿ ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಸ್ಥಿರ ಕಣ್ಗಾವಲು ತಂಡದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಮಹಾರಾಷ್ಟ್ರದ ಪುಣೆಯವರಾದ ಯೋಗೇಶ ಪೂಜಾರಿ ಮತ್ತು ಬೇಬಿಕುಮಾರ ಪೂಜಾರಿ ಸಂಚರಿಸುತ್ತಿದ್ದ ಕಾರು ತಪಾಸಣೆ ನಡೆಸಿದ ವೇಳೆ ನಗದು ಹಣ ಪತ್ತೆಯಾಗಿದೆ. ಇದಕ್ಕೆ ಸೂಕ್ತ ದಾಖಲೆ ಇರಲಿಲ್ಲ ಎಂದು ಅಧಿಕಾರಿ ಸಚಿನ್ ಶಿವಪ್ಪಯ್ಯನಮಠ ತಿಳಿಸಿದ್ದಾರೆ.

54 ಡಿನ್ನರ್ ಸೆಟ್ ವಶ: ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿ ನಾಗನಹಳ್ಳಿ ಬಳಿ ಮತದಾರರಿಗೆ ಹಂಚುತ್ತಿದ್ದ ಶಾಸಕ ಡಾ.ರಂಗನಾಥ್ ಮತ್ತು ಸಂಸದ ಡಿ.ಕೆ.ಸುರೇಶ್ ಭಾವಚಿತ್ರವಿದ್ದ 54 ಡಿನ್ನರ್ ಸೆಟ್‌ಗಳನ್ನು ವಶಕ್ಕೆ ಪಡೆದ ಅಧಿಕಾರಿಗಳು, ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

1,337 ಸೀತಾರಾಮ ಕಲ್ಯಾಣೋತ್ಸವ ಫೋಟೊಗಳ ಜಪ್ತಿ

ನಂಗಲಿ (ಮುಳಬಾಗಿಲು): ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಜೆಎಸ್‌ಆರ್ ಟೋಲ್ ಗೇಟ್ ಬಳಿಯ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದ ₹41,701 ಮೌಲ್ಯದ 1,337 ಸೀತಾರಾಮ ಕಲ್ಯಾಣೋತ್ಸವ ಫೋಟೊಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮತದಾರರಿಗೆ ಹಂಚಲು ಆಂಧ್ರಪ್ರದೇಶದ ಚಿತ್ತೂರು ಕಡೆಯಿಂದ ರಾಜ್ಯಕ್ಕೆ ಫೋಟೊಗಳನ್ನು ಕಾರಿನಲ್ಲಿ ರಾಜ್ಯದ ಗಡಿ ಮೂಲಕ ಸಾಗಿಸಲಾಗುತ್ತಿತ್ತು.

ಫೋಟೊಗಳ ಮೇಲೆ ಉದ್ಯಮಿ ಹಾಗೂ ಶಿಡ್ಲಘಟ್ಟ ಬಿಜೆಪಿ ಮುಖಂಡ ಸೀಕಲ್ ರಾಮಚಂದ್ರಗೌಡ ಎಂದು ಬರೆದಿದ್ದು ನಂಗಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹19.5 ಲಕ್ಷ ಮೌಲ್ಯದ ವಸ್ತುಗಳು, ₹90 ಸಾವಿರ ನಗದು ಜಪ್ತಿ

ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಬಳಿಯ ಚೆಕ್‌ಪೋಸ್ಟ್‌ನಲ್ಲಿ ವಶಪಡಿಸಿಕೊಳ್ಳಲಾದ ಬೆಡ್‌ಶೀಟ್‌ಗಳು

ಶಿವಮೊಗ್ಗ: ಜಿಲ್ಲೆಯ ವಿವಿಧೆಡೆ ಸೂಕ್ತ ದಾಖಲೆಗಳಿಲ್ಲದೇ ಸಾಗಿಸುತ್ತಿದ್ದ ಅಕ್ಕಿ ಹಾಗೂ ಬೆಡ್‌ಶೀಟ್, ಜಮಖಾನೆ ಹಾಗೂ ₹ 90,000 ನಗದನ್ನು ಪೊಲೀಸರು ಶನಿವಾರ ರಾತ್ರಿ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ವೇಳೆ ವಶಪಡಿಸಿಕೊಂಡಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಬಳಿ ಲಾರಿಯಲ್ಲಿ ಸಾಗಣೆ ಮಾಡುತ್ತಿದ್ದ ₹ 5 ಲಕ್ಷ ಮೌಲ್ಯದ 115 ಕ್ವಿಂಟಲ್ ಅಕ್ಕಿಯನ್ನು ಚೆಕ್‌ಪೋಸ್ಟ್‌ನಲ್ಲಿ ವಶಪಡಿಸಿಕೊಳ್ಳಲಾಗಿದೆ. ಮೂರು ಸರಕು ಸಾಗಣೆ ವಾಹನಗಳಲ್ಲಿ ಸಾಗಣೆ ಮಾಡುತ್ತಿದ್ದ ₹ 4.5 ಲಕ್ಷ ಮೌಲ್ಯದ ಬೆಡ್ ಶೀಟ್ ಹಾಗೂ ಜಮಖಾನಗಳನ್ನು ವಶಕ್ಕೆ ಪಡೆಯಲಾಗಿದೆ.

ಶಿವಮೊಗ್ಗದ ದೊಡ್ಡಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗೋದಾಮಿನಲ್ಲಿ ಸಂಗ್ರಹಿಸಲಾಗಿದ್ದ ₹ 10 ಲಕ್ಷ ಮೌಲ್ಯದ ಅಕ್ಕಿ, ಬೇಳೆ, ಎಣ್ಣೆ, ಶಾವಿಗೆ, ಸಕ್ಕರೆ ಸೇರಿದಂತೆ ದಿನಸಿ ಪದಾರ್ಥಗಳನ್ನು ಒಳಗೊಂಡ 500 ಪ್ಯಾಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕುಂಸಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಹನದಲ್ಲಿ ಕೊಂಡೊಯ್ಯುತ್ತಿದ್ದ ₹ 90,000 ನಗದನ್ನು ದಾಖಲೆಗಳಿಲ್ಲದ್ದರಿಂದ ವಶಕ್ಕೆ ಪಡೆಯಲಾಗಿದೆ.

‘ಚುನಾವಣೆಗೆ ಸಂಬಂಧಿಸಿದ್ದಲ್ಲ’

ವಿಜಯಪುರ: ‘ಮುದ್ದೇಬಿಹಾಳ ತಾಲ್ಲೂಕಿನ ಬಾಲಾಜಿ ಸಕ್ಕರೆ ಕಾರ್ಖಾನೆ ಮೇಲೆ ಚುನಾವಣಾಧಿಕಾರಿಗಳು ದಾಳಿ ನಡೆಸಿ ವಶಪಡಿಸಿಕೊಂಡಿರುವ ಗೋಡೆ ಗಡಿಯಾರ, ಟೀ ಶರ್ಟ್ ಸೇರಿದಂತೆ ಇನ್ನಿತರ ವಸ್ತುಗಳು ಚುನಾವಣೆಗೆ ಸಂಬಂಧಿಸಿದ್ದಲ್ಲ’ ಎಂದು ಬೀಳಗಿ ಶುಗರ್ಸ್‌ನ ಮಾಲೀಕರೂ ಆದ ಮಾಜಿ ಸಚಿವ ಎಸ್.ಆರ್.ಪಾಟೀಲ ಸ್ಪಷ್ಟನೆ ನೀಡಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಗೆ ದೂರವಾಣಿ ಮೂಲಕ ಸ್ಪಷ್ಟನೆ ನೀಡಿರುವ ಅವರು, ‘ಕಾರ್ಖಾನೆಯ ಆಡಳಿತ ಮಂಡಳಿ ಸಭೆಯಲ್ಲಿ ಠರಾವು ಪಾಸ್ ಮಾಡಿಯೇ ವಸ್ತುಗಳನ್ನು ಖರೀದಿಸಲಾಗಿದೆ. ಜಿಎಸ್‌ಟಿ ಪಾವತಿಸಿರುವ ಬಿಲ್ ಇದೆ’ ಎಂದರು. ‘ಚುನಾವಣಾಧಿಕಾರಿಗಳು ವಶಪಡಿಸಿಕೊಂಡಿರುವ ವಸ್ತುಗಳ ಮೇಲೆ ನಮ್ಮ ಪಕ್ಷದ ಚಿಹ್ನೆ, ರಾಜಕೀಯ ಸಂಬಂಧಿಸಿದ ಗುರುತುಗಳಿಲ್ಲ’ ಎಂದು ಸ್ಪಷ್ಟಪಡಿಸಿದರು.

₹19.70 ಲಕ್ಷದ ಸಾಮಗ್ರಿ ಜಪ್ತಿ

ಮೈಸೂರು: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಂಚ್ಯಾದಲ್ಲಿ ಕಾರ್ಯಾಚರಣೆ ನಡೆಸಿದ ಫ್ಲೈಯಿಂಗ್ ಸ್ಕ್ವಾಡ್ ಸಿಬ್ಬಂದಿ ದಿನಸಿ ಹಾಗೂ ಪಾನೀಯ ಸಾಮಗ್ರಿಗಳನ್ನು ಭಾನುವಾರ ವಶಕ್ಕೆ ಪಡೆದಿದ್ದಾರೆ.

ಹಂಚ್ಯಾ ಗ್ರಾಮದ ಸನ್‌ಪ್ಯೂರ್ ಗಾರ್ಡನ್ ಲೇಔಟ್ ಸೈಟ್‌ನ ಮನೆಯೊಂದರ ನೆಲ ಅಂತಸ್ತಿನ ಗೋದಾಮಿನಲ್ಲಿ ಸಂಗ್ರಹಿಸಿದ್ದ ತಲಾ 26 ಕೆ.ಜಿ. ಅಕ್ಕಿ ತುಂಬಿದ್ದ 732 ಮೂಟೆಗಳು, ಅಡುಗೆ ಎಣ್ಣೆ, ಸೋಪ್, ರವೆ, ಪೇಸ್ಟ್ ಸೇರಿದಂತೆ ವಿವಿಧ ಪದಾರ್ಥಗಳ ಒಟ್ಟು 722 ಕಿಟ್ ಬ್ಯಾಗ್‌ಗಳು, ಸನ್‌ಪ್ಯೂರ್ ಅಡುಗೆ ಎಣ್ಣೆಯ ತಲಾ 10 ಪೌಚ್‌ಗಳಿರುವ 146 ಬಾಕ್ಸ್‌ಗಳು, ಇದೇ ಕಂಪನಿಯ ತಲಾ 10 ಪೌಚ್‌ಗಳಿರುವ 73 ಬಾಕ್ಸ್ ವನಸ್ಪತಿ, ತಲಾ 12 ಬಾಟಲಿಗಳಿರುವ 60 ಜ್ಯೂಸ್ ಬಾಕ್ಸ್ ಸೇರಿದಂತೆ ₹19.69 ಲಕ್ಷ ಮೌಲ್ಯದ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ. ವರುಣಾ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಬೆಳಗ್ಗೆ ದಾಖಲೆ ಇಲ್ಲದೆ ವ್ಯಕ್ತಿಯೊಬ್ಬರು ಸಾಗಿಸುತ್ತಿದ್ದ ₹11.15 ಲಕ್ಷವನ್ನು ವಿಶೇಷ ದಳ ವಶಪಡಿಸಿಕೊಂಡಿದೆ. ₹14 ಸಾವಿರ ಮೌಲ್ಯದ ಮದ್ಯವನ್ನು ಅಬಕಾರಿ ಇಲಾಖೆ ಜಪ್ತಿ ಮಾಡಿದೆ.

ಹಾರಕನಾಳು ದೊಡ್ಡತಾಂಡ: ಮತದಾನ ಬಹಿಷ್ಕಾರಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಹಾರಕನಾಳು ದೊಡ್ಡತಾಂಡ ಪ್ರವೇಶಿಸುವ ರಸ್ತೆಗೆ ಅಡ್ಡಲಾಗಿ ಮತದಾನ ಬಹಿಷ್ಕಾರದ ಮಾಹಿತಿ ಫ್ಲೆಕ್ಸ್ ಅಳವಡಿಸಿರುವುದು.

ಹರಪನಹಳ್ಳಿ (ವಿಜಯನಗರ ಜಿಲ್ಲೆ): ನ್ಯಾ. ಸದಾಶಿವ ಆಯೋಗದ ವರದಿ ಜಾರಿಗೆ ಶಿಫಾರಸ್ಸು ಮಾಡಿರುವುದನ್ನು ವಿರೋಧಿಸಿ ತಾಲ್ಲೂಕಿನ ಹಾರಕನಾಳು ದೊಡ್ಡತಾಂಡದಲ್ಲಿ ಬಂಜಾರ ಸಮುದಾಯದವರು ಭಾನುವಾರ ಸಾರ್ವತ್ರಿಕ ಚುನಾವಣೆ ಬಹಿಷ್ಕರಿಸುವ ಫಲಕವನ್ನು ರಸ್ತೆ ಮಧ್ಯಭಾಗದಲ್ಲಿ ಅಳವಡಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನಮ್ಮ ತಾಂಡ ನಮ್ಮ ಹಕ್ಕು’, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಒಳಮೀಸಲಾತಿ ವರದಿ ಹಿಂಪಡೆಯುವ ತನಕ, ನಮ್ಮ ತಾಂಡಕ್ಕೆ ರಾಜಕೀಯ ಮುಖಂಡರುಗಳಿಗೆ ತಾಂಡ ಪ್ರವೇಶ ಇಲ್ಲ. ಯಾವುದೇ ಕಾರ್ಯಕರ್ತರು ತಾಂಡದಲ್ಲಿ ಮತ ಕೇಳುವ ಅರ್ಹತೆ ಇಲ್ಲ’ ಎನ್ನುವ ಫ್ಲೆಕ್ಸ್ ಪ್ರದರ್ಶಿಸಿದ್ದಾರೆ.

‘ನಮ್ಮ ತಾಂಡದ ಸೇವಾಲಾಲ್ ದೇವಸ್ಥಾನ ಬಳಿ ದೈವಸ್ಥರು ಸಭೆ ಸೇರಿ ನಿರ್ಧರಿಸಲಾಗಿದೆ. ವಿವಿಧ ಪಕ್ಷಗಳಲ್ಲಿ ಗುರುತಿಸಿಕೊಂಡಿರುವ ಕಾರ್ಯಕರ್ತರು ಯಾರ ಬಳಿಯೂ ತೆರಳಿ ಮತ ಕೇಳದಂತೆ ನಿರ್ಬಂಧ ವಿಧಿಸಲಾಗಿದೆ’ ಎಂದು ಯುವ ಮುಖಂಡ ಮಂಜನಾಯ್ಕ ತಿಳಿಸಿದರು.

ತಾಂಡಾದ ಮುಖಂಡರಾದ ಸುಶೀಲಬಾಯಿ, ಸ್ವಾಮಿ ನಾಯ್ಕ, ಶೃತಿ, ಎಲ್ .ಪಂಪನಾಯ್ಕ, ಪುಟ್ಟನಾಯ್ಕ, ಮಂಜ್ಯಾನಾಯ್ಕ, ರವಿನಾಯ್ಕ, ಕೊಟ್ರೇಶ್ ನಾಯ್ಕ, ನಿಂಗನಾಯ್ಕ, ಪೂರ್ಯನಾಯ್ಕ, ಈರನಾಯ್ಕ ಇದ್ದರು.

ಅನುಮತಿ ಪಡೆಯದೆ ಜಾಹೀರಾತು: ಯುವ ಕಾಂಗ್ರೆಸ್‌ಗೆ ನೋಟಿಸ್

ಬೆಂಗಳೂರು: ಪೂರ್ವಾನುಮತಿ ಪಡೆಯದೆ ಸಾಮಾಜಿಕ ಜಾಲತಾಣದಲ್ಲಿ ಜಾಹೀರಾತು ಪ್ರಕಟಿಸಿದ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಿಗೆ ಚುನಾವಣಾ ಆಯೋಗ ಕಾರಣ ಕೇಳಿ ನೋಟಿಸ್ ನೀಡಿದೆ.

ಮಾಧ್ಯಮ ಪ್ರಮಾಣೀಕರಣ ಹಾಗೂ ಮಾಧ್ಯಮ ನಿಗಾ ಸಮಿತಿಯಿಂದ ಪೂರ್ವ ಪ್ರಮಾಣೀಕರಣ ಪತ್ರ ಪಡೆಯದೆ ತನ್ನ ಟ್ವಿಟರ್ ಖಾತೆಯಲ್ಲಿ ಏ. 2ರಂದು ಬೆಳಿಗ್ಗೆ 11.40ಕ್ಕೆ ಯುವ ಕಾಂಗ್ರೆಸ್ ಜಾಹೀರಾತು ಪ್ರಕಟಿಸಿದೆ. ನಿಯಮಗಳ ಪ್ರಕಾರ ಅನುಮತಿ ಪಡೆಯುವುದು ಕಡ್ಡಾಯ. ಅನುಮತಿ ಪಡೆಯದೇ ಇರುವುದರಿಂದ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ನಿಯಮಗಳ ಅಡಿಯಲ್ಲಿ ಏಕೆ ಕ್ರಮ ತೆಗೆದುಕೊಳ್ಳಬಾರದು? ಎಂಬ ಬಗ್ಗೆ ನೋಟಿಸ್ ತಲುಪಿದ ಮೂರು ದಿನಗಳ ಒಳಗೆ ಸೂಕ್ತ ವಿವರಣೆ ನೀಡಬೇಕು ಎಂದೂ ನೋಟಿಸ್‌ನಲ್ಲಿ ತಿಳಿಸಲಾಗಿದೆ.

‘ಸರಳ ಬಹುಮತಕ್ಕಾಗಿ ಮೇ 10 ರಂದು ಕಾಂಗ್ರೆಸ್ ಬೆಂಬಲಿಸಿ. ಜೆಡಿಎಸ್‌ಗೆ ಒತ್ತುವ ಒಂದೊಂದು ಮತ ಕೂಡಾ ಬಿಜೆಪಿಗೆ ಲಾಭ’ ಎಂದು ‘ಐವೈಸಿ ಕರ್ನಾಟಕ’ (ಯುವ ಕಾಂಗ್ರೆಸ್) ಟ್ವಿಟರ್ ಖಾತೆಯಲ್ಲಿ ಜಾಹೀರಾತು ನೀಡಲಾಗಿದೆ.

ಕುತೂಹಲ ಮೂಡಿಸಿದ ಸಂಗಟಿ–ಬಿ.ಎಲ್. ಸಂತೋಷ್ ಭೇಟಿ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಕಾಂಗ್ರೆಸ್ ಮುಖಂಡ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ಭಾನುವಾರ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿಯಾಗಿದ್ದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಕರಿಯಣ್ಣ ಕಾಂಗ್ರೆಸ್‌ನಲ್ಲಿದ್ದರೂ ಬಿಜೆಪಿಯ ಸಂಗಣ್ಣ ಕರಡಿ ಅವರೊಂದಿಗೆ ಮೊದಲಿನಿಂದಲೂ ನಿಕಟ ಬಾಂಧವ್ಯ ಇಟ್ಟುಕೊಂಡಿದ್ದಾರೆ. 2018ರ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದರು.

ಭೇಟಿ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕರಿಯಣ್ಣ ಸಂಗಟಿ ‘ನಮ್ಮ ಹೋಬಳಿ ಇರಕಲ್‌ಗಡಾ ವ್ಯಾಪ್ತಿಯಲ್ಲಿ ಕರಡಿ ಹಾವಳಿ, ಅಲ್ಲಿನ ಜನರಿಗೆ ಹಕ್ಕುಪತ್ರ ವಿತರಣೆ ಸೇರಿದಂತೆ ಅನೇಕ ಸಮಸ್ಯೆಗಳು ಇದ್ದು, ತ್ವರಿತವಾಗಿ ಪರಿಹರಿಸುವಂತೆ ಕೋರಿದ್ದೇನೆ. ರಾಜಕಾರಣದ ಚರ್ಚೆಯಾಗಿಲ್ಲ’ ಎಂದರು.

ಸಂತೋಷ್ ಭಾಷಣ ಮೊಟಕು: ಗಂಗಾವತಿ ತಾಲ್ಲೂಕಿನ ಮರಳಿಯಲ್ಲಿ ನಡೆದ ಬಳ್ಳಾರಿ ವಿಭಾಗೀಯ ಮಟ್ಟದ ಬಿಜೆಪಿ ಡಿಜಿಟಲ್ ಕಾರ್ಯಕರ್ತರ ಸಮ್ಮೇಳನದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ನಿಗದಿತ ಸಮಯ ಮುಗಿದ ಬಳಿಕ ಮಾತನಾಡಲು ಮುಂದಾದಾಗ ಪೊಲೀಸರು ಮಧ್ಯಪ್ರವೇಶಿಸಿ ಭಾಷಣ ಮೊಟಕುಗೊಳಿಸಿದರು.

ಬೆಳಿಗ್ಗೆ ಉದ್ಘಾಟನಾ ಸಮಾರಂಭ ಮುಗಿದ ಬಳಿಕ ಎರಡನೇ ಅವಧಿಯಲ್ಲಿ ಸಂತೋಷ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವ ವೇಳೆ ಈ ಘಟನೆ ನಡೆಯಿತು. ಸಮ್ಮೇಳನಕ್ಕೆ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2ರ ತನಕ ಮಾತ್ರ ಚುನಾವಣಾ ಅಧಿಕಾರಿಗಳ ಅನುಮತಿ ಪಡೆಯಲಾಗಿತ್ತು. ನಿಗದಿತ ಅವಧಿಗಿಂತ ಸಮಯ ಹೆಚ್ಚಾಗಿದ್ದರಿಂದ ಅಧಿಕಾರಿಗಳು ಕಾರ್ಯಕ್ರಮ ಮುಗಿಸುವಂತೆ ಹೇಳಿದರು.

ಚುನಾವಣಾ ಅಧಿಕಾರಿಗಳು ವೇದಿಕೆ ಬಳಿ ಬಂದಾಗಲೂ ಮಾತು ಮುಂದುವರಿಸಿದ ಸಂತೋಷ್ ‘ಅವರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಆಕಸ್ಮಾತ್ ನೋಟಿಸ್ ಕೊಟ್ಟರೂ ನನಗೆ ಕೊಡುತ್ತಾರೆ; ನಿಮಗೆ ಕೊಡುವುದಿಲ್ಲ’ ಎಂದರು.

ಪ್ರಮುಖ ಮೂರೂ ಪಕ್ಷಗಳಿಗೂ ಅಭ್ಯರ್ಥಿಗಳ ಆಯ್ಕೆ ಕಗ್ಗಂಟು

ಒಂದನೇ ಪುಟದಿಂದ...

ರಾಜ್ಯ ಪ್ರಮುಖ ನಾಯಕರ ಸಭೆಯಲ್ಲಿ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಗೆ ಅಂಕಿತ ಬಿದ್ದ ಬಳಿಕ ಪಟ್ಟಿಯನ್ನು ಕೇಂದ್ರಕ್ಕೆ ಕಳುಹಿಸಲಾಗುವುದು. ಕೇಂದ್ರ ಸಂಸದೀಯ ಮಂಡಳಿ ಸಭೆಯಲ್ಲಿ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲಾಗುವುದು. ಏ.7 ಅಥವಾ 8 ಕ್ಕೆ ಅಭ್ಯರ್ಥಿ ಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ ಎಂದೂ ಬಿಜೆಪಿ ಮೂಲಗಳು ತಿಳಿಸಿವೆ.

ಹಣ, ಜಾತಿ ಮತ್ತು ಪ್ರಭಾವಕ್ಕೆ ಒಳಗಾಗಿ ಟಿಕೆಟ್ ನೀಡಬಾರದು. ಭ್ರಷ್ಟಾಚಾರಿಗಳನ್ನು ದೂರ ಇಡಬೇಕು ಎಂಬ ಬೇಡಿಕೆ ಬಹುತೇಕ ಎಲ್ಲ ಜಿಲ್ಲೆಗಳ ಕಾರ್ಯಕರ್ತರು ಮತ್ತು ಪದಾಧಿಕಾರಿಗಳಿಂದ ಕೇಳಿ ಬಂದಿತು. ಕಾಂಗ್ರೆಸ್‌ನ ಘಟಾನುಘಟಿ ನಾಯಕರಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಬೇಕು. ಇವರನ್ನು ಪರಾಭವಗೊಳಿಸಲು ವ್ಯವಸ್ಥಿತವಾಗಿ ಕಾರ್ಯತಂತ್ರ ರೂಪಿಸಬೇಕು. ಪ್ರಮುಖ ಕ್ಷೇತ್ರಗಳಿಗೆ ಪ್ರಧಾನಿ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್, ಅಮಿತ್ ಶಾ ಅವರನ್ನು ಕರೆಸಬೇಕು ಎಂಬುದಾಗಿಯೂ ಒತ್ತಾಯಿಸಿದರು. ಕನಕಪುರದಲ್ಲಿ ಡಿ.ಕೆ. ಶಿವಕುಮಾರ್ ವಿರುದ್ಧ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಅಪ್ಪಾಜಿಗೌಡ ಅವರನ್ನು ಕಣಕ್ಕಿಳಿಸಬೇಕು ಎಂಬ ಸಲಹೆಯೂ ಕೇಳಿ ಬಂದಿದೆ. ಅಪ್ಪಾಜಿಗೌಡ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲು ಒಪ್ಪಿಗೆ ನೀಡಲಾಗಿದೆ.

ಸಿದ್ದರಾಮಯ್ಯ ವಿರುದ್ಧ ವರುಣಾ ಮಾತ್ರವಲ್ಲದೇ, ಕೋಲಾರದಲ್ಲಿ ಸ್ಪರ್ಧಿಸಿದರೂ ಪ್ರಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಬೇಕು. ಕೋಲಾರದಲ್ಲಿ ಮಾಜಿ ಸಚಿವ ವರ್ತೂರು ಪ್ರಕಾಶ್ ಸೇರಿ ಮೂವರ ಹೆಸರು ಪ್ರಸ್ತಾಪವಾಗಿದೆ. ವರುಣಾ ಕ್ಷೇತ್ರಕ್ಕೆ ಐವರ ಹೆಸರು ಪ್ರಸ್ತಾಪವಾಗಿದೆ. ಕೊಡಗು ಜಿಲ್ಲೆಯಲ್ಲಿ ಇಬ್ಬರೂ ಶಾಸಕರನ್ನು ಬದಲಿಸಿ, ಹೊಸಬರಿಗೆ ಅವಕಾಶ ನೀಡಬೇಕು. ಚಾಮರಾಜನಗರ ಜಿಲ್ಲಾ ಕೋರ್ ಕಮಿಟಿ ಸದಸ್ಯರು ವಸತಿ ಸಚಿವ ವಿ.ಸೋಮಣ್ಣ ಸೇರಿ ಐವರು ಆಕಾಂಕ್ಷಿಗಳ ಹೆಸರುಗಳನ್ನು ಪ್ರಸ್ತಾಪಿಸಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ಹೆಚ್ಚಿನ ಸೀಟುಗಳನ್ನು ಗೆಲ್ಲುವುದಕ್ಕಾಗಿ ‘ಮಿಷನ್ ದಕ್ಷಿಣ’ ಕಾರ್ಯತಂತ್ರ ಹೆಣೆಯಲಾಗಿದೆ. ಇದು ಸಾಧ್ಯವಾದರೆ, ಬಹುಮತ ಗಿಟ್ಟಿಸಲು ಸಾಧ್ಯವೆಂಬ ಅಭಿಪ್ರಾಯ ಕೇಳಿ ಬಂದಿತು.

ಬೆಂಗಳೂರಿನ ಬಸವಗುಡಿ ಅಥವಾ ಜಯನಗರ ಕ್ಷೇತ್ರದಿಂದ ಪಕ್ಷದ ಉಪಾಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಅವರಿಗೆ ಟಿಕೆಟ್ ನೀಡಬೇಕು ಎಂಬ ಬೇಡಿಕೆಯೂ ಕೇಳಿ ಬಂದಿದೆ. ಹೊಸಕೋಟೆ ಕ್ಷೇತ್ರಕ್ಕೆ ಸಚಿವ ಎಂಟಿಬಿ ನಾಗರಾಜ್ ಅವರ ಪುತ್ರ ಧೀರಜ್ ಅವರನ್ನು ಕಣಕ್ಕಿಳಿಸಿದರೆ ಶರತ್ ಬಚ್ಚೇಗೌಡ ಅವರನ್ನು ಮಣಿಸಲು ಸಾಧ್ಯ ಎಂಬ ಸಲಹೆ ನೀಡಲಾಯಿತು.

ಚಿತ್ತಾಪುರ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ವಿಠಲ್ ವಾಲ್ಮೀಕಿ ನಾಯ್ಕ, ಮಣಿಕಂಠ ರಾಥೋಡ್ ಪರ ಬೆಂಬಲಿಗರು ರೆಸಾರ್ಟ್ ಮುಂದೆ ಬಲ ಪ್ರದರ್ಶನ ನಡೆಸಿದರು. ಬಾಗಲಕೋಟೆ ಜಿಲ್ಲೆಯ ತೇರದಾಳ ಕ್ಷೇತ್ರದಲ್ಲಿ ನೇಕಾರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಆ ಸಮುದಾಯದವರಿಗೆ ಅವಕಾಶ ನೀಡಬೇಕು. ಹಾಲಿ ಶಾಸಕ ಸಿದ್ದು ಸವದಿ ಅವರನ್ನು ಬದಲಿಸಬೇಕು ಎಂಬ ಒತ್ತಾಯ ಕೇಳಿ ಬಂದಿತು.

ಭಾನುವಾರ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಜಿಲ್ಲೆಗಳು, ರಾಮನಗರ, ಮಂಡ್ಯ, ಮೈಸೂರು, ಬಾಗಲಕೋಟೆ, ಕಲಬುರಗಿ, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ ಸೇರಿ 19 ಸಂಘಟನಾತ್ಮಕ ಜಿಲ್ಲಾ ಕೋರ್ ಕಮಿಟಿಗಳ ಸಭೆಯಲ್ಲಿ ಕ್ಷೇತ್ರವಾರು ಮಾಹಿತಿಯನ್ನು ಹಂಚಿಕೊಂಡಿವೆ. ಸಭೆಯಲ್ಲಿ ಜಿಲ್ಲಾ ಕೋರ್ ಕಮಿಟಿ ಸದಸ್ಯರಿಗೆ ಮುಕ್ತವಾಗಿ ಅಭಿಪ್ರಾಯ ಸಲ್ಲಿಸಲು ಅವಕಾಶ ನೀಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಚಿಕ್ಕಬಳ್ಳಾಪುರ, ಚಾಮರಾಜನಗರ, ಮೈಸೂರು, ಕೋಲಾರ ಜಿಲ್ಲೆಗಳಲ್ಲಿ ಕೆಲವು ಕ್ಷೇತ್ರಗಳನ್ನು ಮುಖ್ಯಮಂತ್ರಿ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸುಪರ್ದಿಗೆ ಒಪ್ಪಿಸಿದರೆ, ಹೆಚ್ಚಿನ ಸ್ಥಾನಗಳನ್ನು ಗೆಲ್ಲುವುದಕ್ಕೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ಆಯಾ ಜಿಲ್ಲೆಗಳ ಪದಾಧಿಕಾರಿಗಳಿಂದ ಕೇಳಿ ಬಂದಿತು.

‘ಕೈ’ ಟಿಕೆಟ್‌ಗೆ ಪಟ್ಟು: ನಾಯಕರ ಮನೆಗೆ ದೌಡು

ಒಂದನೇ ಪುಟದಿಂದ...

‘ಚಿತ್ರದುರ್ಗ, ಕಲಘಟಗಿ, ತೀರ್ಥಹಳ್ಳಿ, ದಾಸರಹಳ್ಳಿ, ಕಡೂರು ಹೀಗೆ ಹಲವು ಕ್ಷೇತ್ರಗಳಲ್ಲಿ ಟಿಕೆಟ್ ಅಂತಿಮಗೊಳಿಸುವುದು ಅಷ್ಟು ಸುಲಭವಲ್ಲ. ಹಲವು ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಬಣ ಸೃಷ್ಟಿಯಾಗಿದ್ದು, ಈ ಬಣದ ಅಭ್ಯರ್ಥಿಗಳು ಟಿಕೆಟ್‌ಗಾಗಿ ಜಿದ್ದಿಗೆ ಬಿದ್ದಿದ್ದಾರೆ. ಆಕಾಂಕ್ಷಿಗಳನ್ನು ಮುಖಾಮುಖಿ ಕುಳ್ಳಿರಿಸಿ, ಸಹಮತದ ಅಭ್ಯರ್ಥಿ ಆಯ್ಕೆಗೆ ನಾಯಕರು ಸಂಧಾನ ಸಭೆ ನಡೆಸಿದ್ದಾರೆ. ಆದರೆ, ಕೆಲವು ಕ್ಷೇತ್ರಗಳಲ್ಲಿ ಈ ಸಂಧಾನ ಮೇಲ್ನೋಟಕ್ಕೆ ಯಶಸ್ವಿ ಆದಂತೆ ಕಂಡರೂ, ಅಸಮಾಧಾನ ಒಳಗೊಳಗೆ ಹೊಗೆಯಾಡುತ್ತಿದೆ’ ಎಂದು ಮತ್ತೊಬ್ಬ ನಾಯಕ ಹೇಳಿದರು.

ಇನ್ನೂ ಟಿಕೆಟ್ ಖಚಿತವಾಗದ ಪುಲಕೇಶಿನಗರದ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ, ಚಿತ್ರದುರ್ಗದ ಟಿಕೆಟ್ ಆಕಾಂಕ್ಷಿ ವಿರೇಂದ್ರ ಪಪ್ಪಿ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಜೆಡಿಎಸ್ ತ್ಯಜಿಸಿ ಬಂದಿರುವ ವೈ.ಎಸ್.ವಿ. ದತ್ತ ಅವರಿಗೆ ಕಡೂರು ಟಿಕೆಟ್ ನೀಡಬೇಕೆಂದು ದತ್ತ ಅವರ ನೂರಾರು ಬೆಂಬಲಿಗರು ಕೂಡ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿದರು.

ಶಿವಮೊಗ್ಗ ನಗರ, ದಾಸರಹಳ್ಳಿ ಕ್ಷೇತ್ರದಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂದು ಕಾಂಗ್ರೆಸ್ ಕಾರ್ಯಕರ್ತರು ಪಟ್ಟು ಹಿಡಿದಿದ್ದಾರೆ. ದಾಸರಹಳ್ಳಿಯಲ್ಲಿ ಧನಂಜಯ ಜಿ. ಮತ್ತು ಎಚ್. ಎಂ. ರೇವಣ್ಣ ಅವರು ಟಿಕೆಟ್ ಬಯಸಿದ್ದಾರೆ. ಆದರೆ, ಧನಂಜಯ ಅವರು ಬಿಜೆಪಿಯಿಂದ ಬಂದವರು, ರೇವಣ್ಣ ಸ್ಥಳೀಯರಲ್ಲ. ಹೀಗಾಗಿ ಅವರಿಬ್ಬರಿಗೂ ಟಿಕೆಟ್ ಬೇಡ ಎನ್ನುವುದು ಪಕ್ಷದ ಸ್ಥಳೀಯ ಕೆಲವು ಕಾರ್ಯಕರ್ತರ ವಾದ.

ಕೆ.ಎಸ್. ಈಶ್ವರಪ್ಪ ಅವರಿಗೆ ಶಿವಮೊಗ್ಗ ನಗರ ಕ್ಷೇತ್ರದಿಂದ ಮತ್ತೆ ಟಿಕೆಟ್ ನೀಡುವುದಕ್ಕೆ ವಿಧಾನಪರಿಷತ್ ಬಿಜೆಪಿ ಸದಸ್ಯ ಆಯನೂರು ಮಂಜುನಾಥ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈಶ್ವರಪ್ಪ ಅವರಿಗೆ ಬಿಜೆಪಿ ಟಿಕೆಟ್ ನೀಡಿದರೆ ಆಯನೂರು ಮಂಜುನಾಥ್ ಕಾಂಗ್ರೆಸ್ ಕಡೆಗೆ ವಾಲುವ ಸಾಧ್ಯತೆ ಇದೆ. ಒಂದುವೇಳೆ ಅವರು ಕಾಂಗ್ರೆಸ್‌ಗೆ ಬಂದರೂ ಟಿಕೆಟ್ ನೀಡಬಾರದು ಎಂದು ಪಕ್ಷದ ಕೆಲವರು ಒತ್ತಾಯಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸೆಲೆಬ್ರಿಟಿ ಮಾತು

ಮತದಾನದ ಅವಕಾಶ ಕಳೆದುಕೊಳ್ಳದಿರಿ

ಎನ್.ಸಿ. ಅಯ್ಯಪ್ಪ, ಕ್ರಿಕೆಟಿಗ

ಮತದಾನ ನಮ್ಮ ಸಂವಿಧಾನಬದ್ಧ ಹಕ್ಕು. ಅದನ್ನು ತಪ್ಪಿಸಿಕೊಳ್ಳ ಬಾರದು. ನಮ್ಮ ನಾಡನ್ನು ಕಟ್ಟುವ ನಾಯಕರನ್ನು ಚುನಾಯಿಸಲು ಇರುವ ಅವಕಾಶವನ್ನು ಬಿಟ್ಟುಕೊಡಲೇಬಾರದು. ಇದೊಂದು ಕರ್ತವ್ಯವೂ ಹೌದು. ಅಲ್ಲದೇ, ನಮ್ಮ ಜೀವನದ ಮೇಲೆಯೂ ಪರಿಣಾಮ ಬೀರುವಂತದ್ದು. ಆದ್ದರಿಂದ ಮತದಾನವನ್ನು ಕಡ್ಡಾಯವಾಗಿ ಮಾಡಬೇಕು.

ಚಾಟಿಯೇಟು

ಜಗತ್ತು ಅಮೆರಿಕ ದೇಶವನ್ನು ಹಾಡಿ ಹೊಗಳುತ್ತಿದ್ದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತ, ಪಾಕಿಸ್ತಾನದ ಮೇಲೆ ಸರ್ಜಿಕಲ್ ದಾಳಿ ಮಾಡಿತು. ಆಗ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಾಯಿತು. ವೈರಿ ದೇಶಕ್ಕೆ ಮೋದಿ ನೀಡುವಷ್ಟು ಪ್ರತ್ಯುತ್ತರ ನೀಡುವುದು ಯಾವ ಪಕ್ಷಗಳಿಗೂ ಸಾಧ್ಯವಿಲ್ಲ. ಕಾಂಗ್ರೆಸ್‌ಗಂತೂ ಈ ವಿಷಯದಲ್ಲಿ ಗುಂಡಿಗೆ ಹಾಗೂ ಗಂಡಸುತನ ಎರಡೂ ಇಲ್ಲ.

ಆನಂದ್ ಸಿಂಗ್ ಪರಿಸರ ಸಚಿವ

ಟಿಕೆಟ್ ನೀಡದಂತೆ ಪ್ರತಿಭಟನೆ

ಕಲಬುರಗಿ ಗ್ರಾಮೀಣ ಮತಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಅವರಿಗೆ ಟಿಕೆಟ್ ನೀಡಬಾರದು ಎಂದು ಒತ್ತಾಯಿಸಿ ಪಕ್ಷದ ಕಾರ್ಯಕರ್ತರು ಕಲಬುರಗಿಯ ಜಗತ್ ವೃತ್ತದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು

–ಪ್ರಜಾವಾಣಿ ಚಿತ್ರ

ಪ್ರಜಾ ಪತ್ರ

‘ಕೈಗೆ ಹೂವೋ, ಹೂವಿಗೆ ತೆನೆಯೋ’

ಹಿಂದಿನ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ಕಂಡ ನಾವು, ಯಾವ ಪಕ್ಷದ ಅಭ್ಯರ್ಥಿಯನ್ನು, ಅವರು ಪ್ರತಿನಿಧಿಸುವ ಪಕ್ಷದ ಪ್ರಣಾಳಿಕೆಯನ್ನು ನಂಬಲು ಸಾಧ್ಯ? ಅಧಿಕಾರ ಬೇಕೆಂದರೆ ರಾತ್ರೋರಾತ್ರಿ ಗೆದ್ದ ಕುದುರೆಗಳು ರೆಸಾರ್ಟ್‌ಗಳಲ್ಲಿ ಆಪರೇಷನ್ ಮಾಡಿ ಕೈಗೆ ಹೂವೋ, ಹೂವಿಗೆ ತೆನೆಯೋ ಜೋಡಿಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಯಿತು ಎಂದು ಬೀಗುವ ನಾಯಕರ ಮೇಲೆ ಯಾವ ಭರವಸೆ ಇರಿಸಲು ಸಾಧ್ಯ? ಏಕೆ ಹೀಗೆ ಮಾಡಿದಿರಿ ಎಂದು ಕೇಳುವ ಮುನ್ನವೇ ಪಕ್ಷ ನೋಡಬೇಡಿ ‘ಚಿಕಿತ್ಸೆ’ ನಂತರ ಹೊರಬಂದ ನನ್ನನ್ನು ನೋಡಿ, ವಿಶ್ವಾಸವಿಡಿ ಎಂಬ ಪುರಾಣ ಬೇರೆ. ಇಂತಹ ನಾಯಕರಿಗೆ ಅಧಿಕಾರದ ಹಿತಾಸಕ್ತಿ ಬಿಟ್ಟು ಯಾವ ಬದ್ಧತೆಯೂ ಇಲ್ಲ.

ನಮಗೆ ಕೇವಲ ಗೆಲ್ಲುವ ಕುದುರೆ ಬೇಕಿಲ್ಲ. ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷರ ವಿರುದ್ಧ ರಾಜಿರಹಿತ ಹೋರಾಟ ಮಾಡಿದ್ದ ಭಗತ್ ಸಿಂಗ್, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಪ್ರತಿಬಿಂಬಿಸಿದ ಉನ್ನತ ರಾಜಕೀಯ ಬೇಕು. ಕೇವಲ ದೊಡ್ಡ ದೊಡ್ಡ ಹೆದ್ದಾರಿ, ಮುಗಿಲೆತ್ತರದ ಪ್ರತಿಮೆಗಳನ್ನು ತೋರಿಸಿ ‘ನೋಡಿ ಇದೆ ಅಭಿವೃದ್ಧಿ’ ಎಂದು ಕಾಗೆ ಹಾರಿಸದೇ, ಜನರು ದಿನನಿತ್ಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಾದ ಬಡತನ, ಬೆಲೆಏರಿಕೆ, ನಿರುದ್ಯೋಗ, ಆರೋಗ್ಯ, ಶಿಕ್ಷಣ, ಮಹಿಳೆಯರ ಭದ್ರತೆ, ಉದ್ಯೋಗ ಭದ್ರತೆಯ ಖಾತ್ರಿಗಾಗಿ ಧ್ವನಿ ಎತ್ತುವ ರಾಜಿರಹಿತ ನಾಯಕರು ಬೇಕಿದೆ. ಜನರ ಬಗ್ಗೆ ಬದ್ಧತೆ ಇರುವ ಅಭ್ಯರ್ಥಿ ಹಾಗೂ ಪಕ್ಷವನ್ನು ನಾವು ಗೆಲ್ಲಿಸಬೇಕು.

ಎಚ್.ಎಲ್. ನಿರ್ಮಲ, ಬೆಂಗಳೂರು

ಸಂವಿಧಾನ ಕೊಟ್ಟ ಅದ್ಭುತ ಅಸ್ತ್ರ ಮತದಾನ

ಸಂವಿಧಾನದ ಪ್ರಕಾರ ಪ್ರಜೆಗಳಿಂದ ಆಯ್ಕೆಯಾದ ಸರ್ಕಾರ ಜನರ ಆಶೋತ್ತರಗಳಂತೆಯೇ ನಡೆಯಬೇಕು. ಆದರೆ, ವಾಸ್ತವವಾಗಿ ನಮ್ಮ ಅಮೂಲ್ಯವಾದ ಮತಗಳನ್ನು ಹೆಂಡಕ್ಕೊ, ಬಿಡಿ ಕಾಸಿಗೂ ಅಥವಾ ಇನ್ನಾವುದೊ ಬೇಡಿಕೆಗೆ ಮತದಾನದ ಹಕ್ಕನ್ನು ಮಾರಿಕೊಳ್ಳುತ್ತಿರುವುದು ವಿಪರ್ಯಾಸ!

ಸಂವಿಧಾನ ನಮಗೆ ಕಲ್ಪಿಸಿಕೊಟ್ಟ ಅದ್ಭುತ ಅಸ್ತ್ರವೇ ಮತದಾನ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಅತ್ಯಂತ ಮಹತ್ವದ್ದು. ದೇಶ ಪ್ರಗತಿಯ ಹಾದಿಯಲ್ಲಿ ಸಾಗುವುದಕ್ಕಾಗಿ, ಸಮಾನತೆಯನ್ನು ಎತ್ತಿ ಹಿಡಿಯುವುದಕ್ಕಾಗಿ, ಆರ್ಥಿಕತೆ- ಶೈಕ್ಷಣಿಕ ವಲಯದಲ್ಲಿ ವಂಚಿತರಾದವರನ್ನು ಮೇಲೆತ್ತಲು ಭಾರತೀಯ ಸಂವಿಧಾನ ನಮಗೆ ನೀಡಿರುವ ಬಲವಾದ ಶಕ್ತಿ ಎಂದರೆ ಅದು ಮತದಾನ.

ಮುಂದೆ ರಚನೆಯಾಗುವ ಸರ್ಕಾರ ಸಮಾಜದಲ್ಲಿ ಜಾತಿ, ವರ್ಗ, ಪಂಗಡ ಭೇದ ಎಲ್ಲವನ್ನೂ ಹೊರತುಪಡಿಸಿ ಶೈಕ್ಷಣಿಕ ಸುಧಾರಣೆ, ಗ್ರಾಮೀಣ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ, ಪರಿಸರ, ಆರೋಗ್ಯದ ಅರಿವು ಮೂಡಿಸುವ ಹಾಗೂ ಬಡತನ ಹೋಗಲಾಡಿಸುವ ಯೋಜನೆಗಳ ಮೇಲೆ ಗಮನವನ್ನು ಕೇಂದ್ರೀಕರಿಸಿದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ.

ವಿರೇಶ ನಾಯಕ, ಗದಗ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ. 9606038256

‘ಮತ’ ಫಸಲಿಗಾಗಿ ಧರ್ಮದ ಅಮಲು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಸರ್ವಜನಾಂಗದ ಶಾಂತಿಯ ತೋಟವಾಗಿದ್ದ ಕರ್ನಾಟಕದಲ್ಲಿ ಕೆಲವು ದಶಕಗಳಿಂದ ಈಚೆಗೆ ಚುನಾವಣೆಗಳು ಸಮೀಪಿಸುತ್ತಿದ್ದಂತೆಯೇ ‘ಧರ್ಮ ರಾಜಕಾರಣ’ ಜೋರಾಗಿ ಸದ್ದು ಮಾಡಲಾರಂಭಿಸುತ್ತದೆ. ಮಂದಿರ- ಮಸೀದಿಗೆ ಸೀಮಿತವಾಗಿದ್ದ ಧರ್ಮ ರಾಜಕಾರಣ ಈಗ ಸೇವಿಸುವ ಆಹಾರ, ಉಡುವ ವಸ್ತ್ರವನ್ನೂ ವ್ಯಾಪಿಸಿಕೊಂಡಿದೆ.

ದೇಗುಲಗಳ ಆವರಣದಲ್ಲಿ ವ್ಯಾಪಾರ ವಹಿವಾಟಿಗೂ ಅಘೋಷಿತ ನಿರ್ಬಂಧ ಜಾರಿಯಾಗಿದೆ. ‘ಕ್ರಿಯೆ- ಪ್ರತಿಕ್ರಿಯೆ’ಯ ಹೆಸರಿನಲ್ಲಿ ಹಲವೆಡೆ ನೆತ್ತರೂ ಹರಿದಿದೆ. ಅವರು- ನಾವು ಎಂಬ ಗೆರೆ ಎಳೆದು ದ್ವೇಷದ ಬೀಜ ಬಿತ್ತಿ ಧರ್ಮದ ನೆರಳಿನಲ್ಲಿ ಮತಕೊಯ್ಲು ಮಾಡುವ ಪ್ರಯತ್ನ ಈ ಚುನಾವಣೆಯಲ್ಲಿ ಜೋರಾಗಿರುವುದು ಢಾಳಾಗಿ ಕಾಣಿಸುತ್ತಿದೆ. ಆಡಳಿತಾರೂಢ ಬಿಜೆಪಿ, ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್, ಕರ್ನಾಟಕದಲ್ಲಿ ಬೇರೂರಲು ಯತ್ನಿಸುತ್ತಿರುವ ಎಸ್‌ಡಿಪಿಐ ಈ ಎಲ್ಲರಿಗೂ ‘ಧರ್ಮ ರಾಜಕಾರಣ’ದ ಫಸಲಿನ ಮೇಲೆ ತರಹೇವಾರಿ ನಿರೀಕ್ಷೆಗಳಿವೆ.

ಮತೀಯ ಧ್ರುವೀಕರಣದ ವಿಚಾರಗಳು ಕರ್ನಾಟಕದ ಚುನಾವಣಾ ರಾಜಕಾರಣದ ಮೇಲೆ ಗಾಢವಾದ ಪ್ರಭಾವ ಬೀರಲಾರಂಭಿಸಿ ಮೂರು- ನಾಲ್ಕು ದಶಕಗಳಾಗಿವೆ. 2013ರ ಚುನಾವಣೆಯವರೆಗೂ ಮತೀಯ ಧ್ರುವೀಕರಣದ ರಾಜಕಾರಣ ಕರಾವಳಿಯ ಬಹುಭಾಗ ಮತ್ತು ಇತರ ಕೆಲವೇ ಕೆಲವು ಪ್ರದೇಶಗಳಿಗೆ ಸೀಮಿತವಾಗಿತ್ತು. 2018ರ ವಿಧಾನಸಭಾ ಚುನಾವಣೆಯಿಂದ ಅದು ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಲೇ ಇದೆ. ಹೀಗಾಗಿ ಮತೀಯ ಧ್ರುವೀಕರಣವನ್ನು ನೆಚ್ಚಿಕೊಂಡು ಚುನಾವಣಾ ಅಖಾಡಕ್ಕೆ ಇಳಿಯುವವರ ಸಂಖ್ಯೆ ಏರುತ್ತಲೇ ಇದೆ. ಕೆಲವರು ಖುಲ್ಲಂಖುಲ್ಲಾ ಮತೀಯವಾದಿ ರಾಜಕಾರಣದ ಮಾದರಿಯನ್ನು ಅಪ್ಪಿಕೊಂಡರೆ, ಉಳಿದವರದ್ದು ತೆರೆಮರೆಯ ಆಟ. ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಅಂತಿಮವಾಗಿ ಧರ್ಮ, ಕೋಮುಗಳನ್ನು ನೆಚ್ಚಿಕೊಂಡೇ ಗೆಲುವಿನ ದಡ ಸೇರುವ ಹವಣಿಕೆ ರಾಜಕೀಯ ಪಕ್ಷಗಳದ್ದು. ಹೀಗಾಗಿ ಒಂದೊಂದು ಪಕ್ಷಗಳು ಒಬ್ಬೊಬ್ಬರ ಹಿಂದೆಬಿದ್ದಿವೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಟಿಪ್ಪು ಸುಲ್ತಾನ್ ಜಯಂತಿ ಆಚರಣೆಗೆ ಆದೇಶ ಹೊರಡಿಸಿದ್ದು, ಶಾದಿಭಾಗ್ಯ ಜಾರಿ ಮತ್ತು ಲಿಂಗಾಯತ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಲು ಪ್ರಯತ್ನ ನಡೆಸಿದ್ದು 2018ರ ವಿಧಾನಸಭಾ ಚುನಾವಣೆಯಲ್ಲಿ ಚರ್ಚೆಯ ಮುನ್ನೆಲೆಯಲ್ಲಿತ್ತು. ಈ ಎರಡನ್ನೂ ವಿರೋಧಿಸಿದ್ದ ಬಿಜೆಪಿ, ಹಿಂದೂ ಮತಗಳ ಧ್ರುವೀಕರಣಕ್ಕೆ ಬಲವಾದ ಪ್ರಯತ್ನ ನಡೆಸಿತ್ತು. ಅದರಲ್ಲಿ ತುಸು ಯಶಸ್ಸನ್ನೂ ಕಂಡಿತ್ತು. ಕಳೆದ ಚುನಾವಣೆಯಲ್ಲಿ ತಮ್ಮ ಪಕ್ಷದ ಸೋಲಿಗೆ ಟಿಪ್ಪುಜಯಂತಿ ಮತ್ತು ಧರ್ಮವಿಭಜನೆಯ ಯತ್ನವೇ ಬಹುಮುಖ್ಯ ಕಾರಣ ಎಂದು ಕಾಂಗ್ರೆಸ್ ನಾಯಕರು ಈಗ ಬಹಿರಂಗವಾಗಿಯೇ ಹೇಳಿಕೊಳ್ಳುತ್ತಿದ್ದಾರೆ.

ಈ ಬಾರಿ ಆಡಳಿತಾರೂಢ ಬಿಜೆಪಿಗೆ ಶೇಕಡ 40ರಷ್ಟು ಲಂಚದ ಆರೋಪ, ಸಾಲು ಸಾಲು ಹಗರಣಗಳ ಕಳಂಕ ಮೆತ್ತಿಕೊಂಡಿದೆ. ಧರ್ಮ ರಾಜಕಾರಣವನ್ನು ಬಳಸಿಕೊಂಡು ಆಡಳಿತ ವಿರೋಧಿ ಅಲೆಯಿಂದ ಪಾರಾಗಲು ಕಮಲ ಪಾಳೆಯ ವರ್ಷದ ಹಿಂದೆಯೇ ಅಂಕಣ ಸಜ್ಜುಗೊಳಿಸುವ ಕೆಲಸಕ್ಕೆ ಕೈಹಾಕಿತ್ತು. ಬಿ.ಎಸ್. ಯಡಿಯೂರಪ್ಪ ಅವರ ಪದತ್ಯಾಗದ ಬಳಿಕ 2021ರ ಜುಲೈನಲ್ಲಿ ಮುಖ್ಯಮಂತ್ರಿ ಗಾದಿಗೇರಿದ ಬಸವರಾಜ ಬೊಮ್ಮಾಯಿ, ‘ಮತೀಯ ಗೂಂಡಾಗಿರಿ ಪ್ರಕರಣಗಳು ಕ್ರಿಯೆಗೆ ಪ್ರತಿಕ್ರಿಯೆಯ ರೀತಿಯಲ್ಲಿ ನಡೆಯುತ್ತವೆ’ ಎಂದು ಅದೇ ವರ್ಷದ ಅಕ್ಟೋಬರ್‌ನಲ್ಲಿ ಉಡುಪಿಯಲ್ಲಿ ಹೇಳಿಕೆ ನೀಡಿದ್ದರು. ಮುಖ್ಯಮಂತ್ರಿಯವರ ಈ ಹೇಳಿಕೆಯ ದೂರಗಾಮಿ ಪರಿಣಾಮಗಳು ತೀವ್ರವಾಗಿದ್ದವು ಎಂಬುದನ್ನು ರಾಜ್ಯದಲ್ಲಿ ನಡೆದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಅಂಕಿಅಂಶಗಳು ಹೇಳುತ್ತವೆ.

ಹಿಜಾಬ್‌ನಿಂದ ವ್ಯಾಪಾರದವರೆಗೆ: ಉಡುಪಿಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆರು ವಿದ್ಯಾರ್ಥಿನಿಯರ ಗುಂಪೊಂದು ಶಿರವಸ್ತ್ರ (ಹಿಜಾಬ್) ಧರಿಸಿ ಕಾಲೇಜಿಗೆ ಬರಲು ಅನುಮತಿ ಕೋರಿದ್ದರು. ವಿಷಯ ಕಾಲೇಜು ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆಗಿರುವ ಶಾಸಕ ಕೆ. ರಘುಪತಿ ಭಟ್ ಮತ್ತು ಉಪಾಧ್ಯಕ್ಷರಾದ ಬಿಜೆಪಿ ಮುಖಂಡ ಯಶಪಾಲ್ ಸುವರ್ಣ ಮುಂದೆ ತಲುಪುತ್ತಿದ್ದಂತೆಯೇ ರಾಜಕೀಯ ಸ್ವರೂಪ ಪಡೆದುಕೊಂಡಿತು. ಕಾಲೇಜು ಆಡಳಿತ ಮಂಡಳಿ ಹಿಜಾಬ್ ಧರಿಸಿ ತರಗತಿ ಪ್ರವೇಶಿಸುವುದನ್ನು ನಿಷೇಧಿಸಿದರೆ, ಬಿಜೆಪಿ ಮತ್ತು ಸಂಘ ಪರಿವಾರ ಈ ತೀರ್ಮಾನದ ಬೆಂಬಲಕ್ಕೆ ನಿಂತವು. ಅತ್ತ ಆರು ವಿದ್ಯಾರ್ಥಿನಿಯರು ಅನುಮತಿ ಕೇಳಲು ಎಸ್‌ಡಿಪಿಐ ಮತ್ತು ಪಿಎಫ್‌ಐ ಮುಖಂಡರೇ ಪ್ರಚೋದಿಸಿದ್ದಾರೆ ಎಂಬ ಆರೋಪವೂ ಕೇಳಿಬಂತು. ಎಸ್‌ಡಿಪಿಐ, ಪಿಎಫ್‌ಐ ಮತ್ತು ಅವರ ವಿದ್ಯಾರ್ಥಿ ಸಂಘಟನೆಗಳೂ ಈ ವಿದ್ಯಾರ್ಥಿನಿಯರ ಬೆಂಬಲಕ್ಕೆ ನಿಂತವು. ಬಿಜೆಪಿ ಮತ್ತು ಸಂಘ ಪರಿವಾರ ಒಂದೆಡೆಯಾದರೆ, ಎಸ್‌ಡಿಪಿಐ, ಪಿಎಫ್‌ಐ ಇನ್ನೊಂದೆಡೆ ನಿಂತು ಸಂಘರ್ಷದ ವಾತಾವರಣ ಸೃಷ್ಟಿಯಾಯಿತು.

ಉಡುಪಿಯ ಸರ್ಕಾರಿ ಕಾಲೇಜಿನಲ್ಲಿ ಹುಟ್ಟಿಕೊಂಡ ಹಿಜಾಬ್ ವಿವಾದ ದಿನ ಬೆಳಗಾಗುವುದರೊಳಗೆ ಕರಾವಳಿಯನ್ನೇ ಆವರಿಸಿಕೊಂಡಿತು. ವಾರ ಮುಗಿಯುವುದರೊಳಗೆ ರಾಜ್ಯದ ಉದ್ದಗಲಕ್ಕೂ ವ್ಯಾಪಿಸಿತು. ಹಿಜಾಬ್ ಧರಿಸಲು ಅವಕಾಶ ನೀಡುವುದಾದರೆ ಕೇಸರಿ ಶಾಲು ಧರಿಸಿ ಬರುವುದಕ್ಕೂ ಅವಕಾಶ ಬೇಕು ಎಂದು ಸಂಘ ಪರಿವಾರದ ಸಂಘಟನೆಗಳು ಪಟ್ಟು ಹಿಡಿದವು. ವಿವಾದ ಹೈಕೋರ್ಟ್ ತಲುಪಿತು. ಅಲ್ಲಿ ಕಾಲೇಜು ಆಡಳಿತ ಮಂಡಳಿಯ ತೀರ್ಮಾನಕ್ಕೆ ಮನ್ನಣೆ ದೊರಕಿತು. ಸುಪ್ರೀಂ ಕೋರ್ಟ್‌ಗೂ ಮೇಲ್ಮನವಿ ಸಲ್ಲಿಕೆಯಾಯಿತು. ತ್ರಿಸದಸ್ಯ ಪೀಠದಲ್ಲಿ ಭಿನ್ನಮತದ ತೀರ್ಪು ಬಂದಿದ್ದು, ವಿಸ್ತೃತ ಪೀಠದ ವಿಚಾರಣೆ ಬಾಕಿ ಇದೆ.

ಶಾಲೆ- ಕಾಲೇಜುಗಳ ಸಮವಸ್ತ್ರಕ್ಕೆ ಸೀಮಿತವಾದ ಈ ವಿಚಾರದಲ್ಲಿ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರವೂ ಬೆರೆತು ದಿನಗಟ್ಟಲೆ ಶಿಕ್ಷಣ ಸಂಸ್ಥೆಗಳನ್ನು ಬಂದ್ ಮಾಡಬೇಕಾದ ಕರಾಳ ಸನ್ನಿವೇಶ ನಿರ್ಮಾಣವಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿದ ಈ ಪ್ರಕರಣದಲ್ಲಿ ಬಿಜೆಪಿ ಮತ್ತು ಎಸ್‌ಡಿಪಿಐ ರಾಜಕೀಯ ಲಾಭದ ಲೆಕ್ಕಾಚಾರ ಯೋಚಿಸಿಯೇ ಹೆಜ್ಜೆ ಇಟ್ಟವು. ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್ ಸೇರಿದಂತೆ ಕೆಲವರ ಹೊರತಾಗಿ ಉಳಿದ ಬಹುತೇಕ ನಾಯಕರು ಅಂತರ ಕಾಯ್ದುಕೊಂಡರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಗಟ್ಟಿ ನಿಲುವಿನಲ್ಲೇ ವಿರೋಧಿಸಿದರು. ಈ ಪ್ರಕರಣ ವಿಧಾನಸಭೆ ಚುನಾವಣೆಯನ್ನು ಗಾಢವಾಗಿಯೇ ಪ್ರಭಾವಿಸಬಹುದು ಎಂಬ ನಿರೀಕ್ಷೆ ಎಲ್ಲ ಪಕ್ಷಗಳಲ್ಲೂ ಇದೆ.

ಹಿಜಾಬ್ ವಿವಾದದ ಬೆನ್ನಲ್ಲೇ ಹಿಂದೂ ದೇವಸ್ಥಾನಗಳ ಆವರಣದಲ್ಲಿ ಮುಸ್ಲಿಮರು ವ್ಯಾಪಾರ ನಡೆಸಿದಂತೆ ನಿಷೇಧ ಹೇರುವ ‘ಧರ್ಮ ರಾಜಕಾರಣ’ದ ಮತ್ತೊಂದು ಅಸ್ತ್ರವನ್ನೂ ಉಡುಪಿ ಜಿಲ್ಲೆಯಲ್ಲೇ ಮೊದಲು ಪ್ರಯೋಗಿಸಲಾಯಿತು. ಕಾಪು ಮಾರಿಗುಡಿ ಆವರಣದಲ್ಲಿ ರಾತ್ರೋರಾತ್ರಿ ಅಂತಹದ್ದೊಂದು ಬ್ಯಾನರ್ ಕಾಣಿಸಿಕೊಂಡಿತ್ತು. ಮುಜರಾಯಿ ಇಲಾಖೆಯ ಅಧೀನದ ಆಡಳಿತ ಮಂಡಳಿ ಬ್ಯಾನರ್ ತೆರವುಗೊಳಿಸಿದರೂ, ಭಯ ಬಿತ್ತಿ ಮುಸ್ಲಿಮರನ್ನು ವ್ಯಾಪಾರದಿಂದ ದೂರ ಇರಿಸುವ ಯತ್ನಕ್ಕೆ ಯಶಸ್ಸು ದೊರಕಿತು. ನಂತರದಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಸೇರಿದಂತೆ ಕರಾವಳಿಯ ತುಂಬೆಲ್ಲ ಇಂತಹದ್ದೇ ಬ್ಯಾನರ್‌ಗಳ ಅಬ್ಬರ. ಕೆಲವೇ ದಿನಗಳೊಳಗೆ ರಾಜ್ಯದ ಉದ್ದಗಲಕ್ಕೂ ದೇಗುಲಗಳ ಆವರಣದಲ್ಲಿ ಮುಸ್ಲಿಮರ ವ್ಯಾಪಾರ- ವಹಿವಾಟಿಗೆ ನಿಷೇಧ ಹೇರುವ ಕೂಗು ಮೊಳಗಿತು. ಧಾರವಾಡದ ನುಗ್ಗಿಕೇರಿಯ ಹನುಮಂತ ದೇವರ ಗುಡಿಯ ಮುಂದೆ ನಬೀಸಾಬ್ ಎಂಬುವವರ ಅಂಗಡಿಗೆ ನುಗ್ಗಿದ ಪುಂಡರ ಗುಂಪೊಂದು ಕಲ್ಲಂಗಡಿ ಹಣ್ಣುಗಳನ್ನು ಪುಡಿಗಟ್ಟಿದ್ದು ಕರ್ನಾಟಕಕ್ಕೆ ಇರುವ ‘ಸರ್ವ ಜನಾಂಗದ ಶಾಂತಿಯ ತೋಟ’ವೆಂಬ ಹೆಸರನ್ನೇ ಅಣಕಿಸುವಂತೆ ಮಾಡಿತು.

ಮಸೀದಿಗಳಲ್ಲಿನ ಆಜಾನ್‌ಗೆ ನಿಷೇಧ ಹೇರಬೇಕೆಂಬ ಕೂಗೂ ಎದ್ದುಬಂತು. ತಕ್ಷಣ ಸ್ಪಂದಿಸಿದ ರಾಜ್ಯ ಸರ್ಕಾರ, ರಾತ್ರಿ ಅವಧಿಯಲ್ಲಿ ಧ್ವನಿವರ್ಧಕಗಳ ಬಳಕೆಗೆ ನಿಷೇಧ ಹೇರುವ ಆದೇಶ ಹೊರಡಿಸಿತು. ಗೋಹತ್ಯೆ ನಿಷೇಧ ಕಾನೂನು, ಮತಾಂತರ ನಿಷೇಧ ಕಾನೂನುಗಳಿಗೂ ತಿದ್ದುಪಡಿ ತರುವ ಮೂಲಕ ‘ಹಿಂದುತ್ವ ಪರ’ ಸಂಘಟನೆಗಳ ಬೇಡಿಕೆಗಳನ್ನು ಈಡೇರಿಸಿರುವ ಬಿಜೆಪಿ ಸರ್ಕಾರ, ಮತೀಯ ಧ್ರುವೀಕರಣದ ಹೊಸ ಘಟ್ಟವನ್ನು ಎದುರು ನೋಡುತ್ತಿದೆ. ಶಾಲಾ ಸಮವಸ್ತ್ರ, ದೇಗುಲಗಳ ಆವರಣದಲ್ಲಿ ಅನ್ಯ ಧರ್ಮೀಯರಿಗೆ ವ್ಯಾಪಾರ- ವಹಿವಾಟು ನಡೆಸದಂತೆ ನಿರ್ಬಂಧ, ಗೋಹತ್ಯೆ ನಿಷೇಧ ಕಾಯ್ದೆ ತಿದ್ದುಪಡಿ, ಮತಾಂತರ ನಿಷೇಧ ಕಾಯ್ದೆ ತಿದ್ದುಪಡಿ ಎಲ್ಲದರಲ್ಲೂ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿನ ಪ್ರಸ್ತಾವಗಳನ್ನೇ ಉಲ್ಲೇಖಿಸುವ ಮೂಲಕ ಎದುರಾಳಿಯನ್ನು ಕಟ್ಟಿಹಾಕುವ ಪ್ರಯತ್ನವನ್ನು ಬಿಜೆಪಿ ಸರ್ಕಾರ ಮಾಡಿತು.

ಉರಿಗೌಡ- ನಂಜೇಗೌಡರ ಸೃಷ್ಟಿ: ಬ್ರಿಟಿಷರ ಪಾಲಿಗೆ ದುಃಸ್ವಪ್ನವಾಗಿ ಕಾಡಿ, ಶತ್ರುವಿನಿಂದಲೇ ’ಮೈಸೂರು ಹುಲಿ‘ ಎಂದು ಕರೆಸಿಕೊಂಡಿದ್ದ ಟಿಪ್ಪು ಸುಲ್ತಾನ್‌ಅವರನ್ನು ಕೊಂದವರು ಯಾರು ಎಂಬ ಚರ್ಚೆಯನ್ನು ಚುನಾವಣೆಯ ಹೊಸ್ತಿಲಲ್ಲಿ ತೇಲಿಬಿಡುವ ಮೂಲಕ ಒಕ್ಕಲಿಗರ ಮತಗಳನ್ನು ಹಿಂದೂ ಮತ ಬ್ಯಾಂಕ್‌ನಲ್ಲಿ ಧ್ರುವೀಕರಿಸುವ ಹೊಸ ದಾಳವೊಂದನ್ನು ಬಿಜೆಪಿ ಉರುಳಿಸಿದೆ. ಉರಿಗೌಡ- ನಂಜೇಗೌಡ ಎಂಬ ಒಕ್ಕಲಿಗರೇ ಟಿಪ್ಪುವನ್ನು ಕೊಂದವರು ಎಂದು ಸಚಿವರಾದ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಆರ್. ಅಶೋಕ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಏರುಧ್ವನಿಯಲ್ಲಿ ಪ್ರಚಾರಕ್ಕೆ ಇಳಿದರು. ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿಯವರ ಮಧ್ಯ ಪ್ರವೇಶದಿಂದ ಚರ್ಚೆಗೆ ತುಸು ಕಡಿವಾಣ ಬಿದ್ದಿದೆ. ಈ ವಿಚಾರದಲ್ಲೂ ಕಾಂಗ್ರೆಸ್‌ನ ಕೆಲವೇ ನಾಯಕರು ಬಿಜೆಪಿಯ ವಾದವನ್ನು ವಿರೋಧಿಸಿದರೆ, ಉಳಿದವರು ಮುಗುಮ್ಮಾಗಿ ಇದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಕಠಿಣ ನಿಲುವು ತಾಳುವ ಮೂಲಕ ಆದಿಚುಂಚನಗಿರಿ ಸ್ವಾಮೀಜಿಯವರ ಮಧ್ಯಪ್ರವೇಶಕ್ಕೆ ಕಾರಣರಾದರು.

ಅಧಿಕಾರದ ಗದ್ದುಗೆ ಹಿಡಿದವರು ಒಂದು ಧರ್ಮದವರನ್ನು ಓಲೈಸುವ, ಅನ್ಯರನ್ನು ವಿರೋಧಿಸುವುದು ಹೊಸತೇನೂ ಅಲ್ಲ. ಈ ಪ್ರಯತ್ನಗಳು ಚುನಾವಣಾ ಕಾಲದಲ್ಲಿ ಕೆಲವೊಮ್ಮೆ ಯಶಸ್ಸು ತಂದುಕೊಟ್ಟರೆ, ಹಲವೊಮ್ಮೆ ನಿರೀಕ್ಷೆಯನ್ನು ಹುಸಿಯಾಗಿಸಿದ ಉದಾಹರಣೆಗಳಿವೆ. ಆದರೆ, ಈ ಬಾರಿ ನಾವು- ಅವರು ಎಂಬ ಕಂದಕ ತುಸು ಹಿರಿದಾಗಿದೆ. ಈ ಸನ್ನಿವೇಶದ ಲಾಭ ಪಡೆಯಲು ಪೈಪೋಟಿಯೂ ಜೋರಾಗಿದೆ.

ಮೀಸಲಾತಿ ಕಡಿತದ ಹಿಂದೆಯೂ ಲೆಕ್ಕಾಚಾರ

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ತನ್ನ ಕೊನೆಯ ಸಂಪುಟ ಸಭೆಯಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 2-ಬಿ ಅಡಿಯಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇಕಡ 4ರಷ್ಟು ಮೀಸಲಾತಿಯನ್ನು ಕಿತ್ತು ಒಕ್ಕಲಿಗರು, ಲಿಂಗಾಯತರು ಇರುವ ಪ್ರವರ್ಗಗಳಿಗೆ ತಲಾ ಶೇ 2ರಂತೆ ಹಂಚಿಕೆ ಮಾಡುವ ನಿರ್ಧಾರ ಕೈಗೊಂಡಿದೆ. ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗಗಳ ಪಟ್ಟಿಗೆ ಸೇರಿಸಿದೆ. ಈ ನಿರ್ಧಾರದ ಹಿಂದೆಯೂ ಹಿಂದೂ ಮತಬ್ಯಾಂಕ್ ಭದ್ರಪಡಿಸುವ ಯೋಚನೆಯೇ ಕೆಲಸ ಮಾಡಿದೆ.

ಸಾವು- ಪರಿಹಾರದಲ್ಲೂ ರಾಜಕಾರಣ!

ಮತೀಯ ದ್ವೇಷದ ಕೊಲೆಗಳಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಕ್ಕೆ ಪರಿಹಾರ ನೀಡುವುದು ಮತ್ತು ಸಾಂತ್ವನ ಹೇಳುವುದರಲ್ಲೂ ಬಿಜೆಪಿ ಸರ್ಕಾರ ರಾಜಕಾರಣ ಮಾಡಿದೆ. ಹಿಂದುತ್ವ ಪರ ಸಂಘಟನೆಗಳ ಕಾರ್ಯಕರ್ತರು, ಮುಖಂಡರ ಸಾವಿಗೆ ತ್ವರಿತ ಸಾಂತ್ವನ, ಪರಿಹಾರ ನೀಡಿದರೆ, ಮುಸ್ಲಿಮರು ಕೊಲೆಯಾದರೆ ಕಾನೂನು ಪ್ರಕಾರ ಕ್ರಮ ಜರುಗಿಸುವ ಭರವಸೆಗೆ ಸೀಮಿತ.

ಶಿವಮೊಗ್ಗದ ಹರ್ಷ ಕೊಲೆ ಪ್ರಕರಣ, ದಕ್ಷಿಣ ಕನ್ನಡ ಜಿಲ್ಲೆಯ ಪ್ರವೀಣ್ ನೆಟ್ಟಾರ್ ಕೊಲೆ ಪ್ರಕರಣಗಳಲ್ಲಿ ಮೃತರ ಕುಟುಂಬಗಳಿಗೆ ಸರ್ಕಾರದ ಬೊಕ್ಕಸದಿಂದ ದೊಡ್ಡ ಮೊತ್ತದ ಪರಿಹಾರ ನೀಡಲಾಗಿದೆ. ಆದರೆ, ಮತೀಯ ಗೂಂಡಾಗಳಿಂದಲೇ ಹತರಾದ ಸುರತ್ಕಲ್‌ನ ಫಾಝಿಲ್, ಸುಲೇಮಾನ್, ಸುಳ್ಯದ ಮಸೂದ್ ಮತ್ತು ಗದಗ ಜಿಲ್ಲೆಯ ಸಮೀರ್ ನರಗುಂದ ಕುಟುಂಬಗಳಿಗೆ ಪರಿಹಾರ ಮರೀಚಿಕೆಯಾಗಿಯೇ ಉಳಿದಿದೆ. ಹರ್ಷ ಮತ್ತು ಪ್ರವೀಣ್ ಕುಟುಂಬಗಳಿಗೆ ಮಾತ್ರ ಸರ್ಕಾರದಿಂದ ನೇರ ಸಾಂತ್ವನವೂ ಸಿಕ್ಕಿದೆ. ಇದು ಕೂಡ ಚುನಾವಣೆಗಾಗಿ ನಡೆದ ಯೋಜಿತ ‘ಧರ್ಮ ರಾಜಕಾರಣ’ ಎಂದು ವಿಶ್ಲೇಷಿಸಲಾಗುತ್ತಿದೆ.

ಮತದಾರರು ಪ್ರಜ್ಞಾವಂತರಾಗಬೇಕು



ಪ್ರಸ್ತುತ ದಿನಮಾನಗಳಲ್ಲಿ ರಾಜಕೀಯ ತುಂಬಾ ಗಬ್ಬೆದ್ದು ಹೋಗಿದೆ. ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯುವ ರೀತಿಯಲ್ಲಿ ಚುನಾವಣೆಗಳು ನಡೆಯುತ್ತಿವೆ. ಅದರಲ್ಲೂ ಧರ್ಮ, ಜಾತಿ, ಇನ್ನೇನೋ ನುಸುಳಿ ಸಮಾಜವನ್ನು ವಿಘಟಿಸುವ ಮತ್ತು ಆ ಮೂಲಕ ಮತ ಲಪಟಾಯಿಸುವ ಕುತಂತ್ರಗಳು ನಡೆಯುತ್ತಿದೆ. ಮತದಾರರು ಪ್ರಜ್ಞಾವಂತರಾಗಿ ಅರ್ಹತೆ ಇರುವ ವ್ಯಕ್ತಿಯನ್ನು ಆಯ್ಕೆ ಮಾಡುವ ಎದೆಗಾರಿಕೆ ತೋರಿಸಬೇಕು. ಅಲ್ಲಿ ಜಾತಿ, ಪಕ್ಷ, ಹಣ, ಆಮಿಷ, ಧರ್ಮ ಪ್ರಧಾನ ಆಗಬಾರದು.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ ತರಳಬಾಳು ಶಾಖಾ ಮಠ

ಸೌಹಾರ್ದ ಕರ್ನಾಟಕ ಬೇಕು

ಚುನಾವಣೆ ಸಮಯದಲ್ಲಿ ಕೋಮು ಘರ್ಷಣೆಗಳು ನಡೆಯುತ್ತಿದ್ದವು. ಕರಾವಳಿಯಲ್ಲಿ ಇದು ಹೆಚ್ಚಾಗಿತ್ತು. ಬಡವರ ಮನೆಯ ಮಕ್ಕಳ ಹತ್ಯೆಯಾಗುತ್ತಿತ್ತು. ಈಗ ಹಿಂದು ಮತ್ತು ಮುಸ್ಲಿಂ ಸಮುದಾಯಗಳ ಜನ ಬುದ್ಧಿವಂತರಾಗಿದ್ದಾರೆ. ಆಲೋಚನೆ ಮಾಡುವ ಶಕ್ತಿ ಬೆಳೆಸಿಕೊಂಡಿದ್ದಾರೆ. ಇವೆಲ್ಲವೂ ಚುನಾವಣೆ ಗಿಮಿಕ್ ಎಂಬುದು ಗೊತ್ತಾಗಿದೆ.

ಟಿಪ್ಪು ಹೆಸರು ಈಗ ವಿವಾದದ ಕೇಂದ್ರವಾಗಿದೆ. ಬ್ರಿಟಿಷರ ವಿರುದ್ಧ ನಾಲ್ಕು ಯುದ್ಧಗಳನ್ನು ಮಾಡಿದವರು, ನಾಡಿಗಾಗಿ ಮಕ್ಕಳನ್ನು ಒತ್ತೆ ಇಟ್ಟವರು, ರೇಷ್ಮೆಯನ್ನು ಈ ನಾಡಿಗೆ ಪರಿಚಯಿಸಿದ ಟಿಪ್ಪು ಆಧುನಿಕ ಕರ್ನಾಟಕದ ಹರಿಕಾರ. ಕಾಂಗ್ರೆಸ್ ಇರಲಿ, ಬಿಜೆಪಿ ಇರಲಿ ಟಿಪ್ಪು ಹೆಸರನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ತಪ್ಪು. ಹಲಾಲ್, ಹಿಜಾಬ್ ವಿಷಯಗಳು ಜನರಿಗೆ ಬೇಕಿಲ್ಲ. ಉದ್ಯೋಗ ಮತ್ತು ನಿತ್ಯ ಬಳಕೆ ವಸ್ತುಗಳ ಬೆಲೆ ಕಡಿಮೆ ಆಗುವುದು ಸಾಮಾನ್ಯ ಜನರಿಗೆ ಬೇಕಿದೆ. ಶೇ 4ರಷ್ಟು ಮೀಸಲಾತಿಯನ್ನು ಏಕಾಏಕಿ ಹಿಂಪಡೆಯಲಾಯಿತು. ಈ ವಿಷಯದ ಬಗ್ಗೆ ಕಾಂಗ್ರೆಸ್ ಕೂಡ ಮಾತನಾಡುತ್ತಿಲ್ಲ. ಮುಸ್ಲಿಮರು ಈ ಬಾರಿ ಬುದ್ಧಿವಂತಿಕೆಯಿಂದ ಚುನಾವಣೆಯಲ್ಲಿ ಮತ ಚಲಾಯಿಸುತ್ತಾರೆ. ನಮಗೆ ಸೌಹಾರ್ದಯುತ ಕರ್ನಾಟಕ ಬೇಕು. ಸಹಿಷ್ಣುತೆ ಮತ್ತು ಅಭಿವೃದ್ಧಿ ಒಟ್ಟೊಟ್ಟಿಗೆ ಹೋಗಬೇಕು. ಅದನ್ನು ಮಾಡಿದವರ ಪರ ಜನ ನಿಲ್ಲುತ್ತಾರೆ.

ಮೌಲಾನಾ ಎನ್.ಕೆ. ಷಾಫಿ ಸಾ– ಆದಿ, ವಕ್ಫ್ ಮಂಡಳಿ ಅಧ್ಯಕ್ಷ

ಕೋಮುವಾದದ ಕಾರ್ಯಸೂಚಿ ಒಪ್ಪುವುದಿಲ್ಲ

ಸಂವಿಧಾನದ ಮೌಲ್ಯಗಳನ್ನು ಪಾಲಿಸುವ, ಜಾತ್ಯತೀತ, ಸೌಹಾರ್ದವನ್ನು ಮೂಡಿಸುವ ಹಾಗೂ ಜಾತಿ, ಧರ್ಮ, ಸಮುದಾಯವೆನ್ನದೆ ಎಲ್ಲರನ್ನೂ ಸಮಾನ ದೃಷ್ಟಿಯಲ್ಲಿ ನೋಡುವ ಅಭ್ಯರ್ಥಿಗಳನ್ನು ನಾಡಿನ ಮತದಾರರು ಆಯ್ಕೆ ಮಾಡಬೇಕು.

ಹಿಜಾಬ್, ಅಜಾನ್, ಮತಾಂತರ ನಿಷೇಧ, ಹಲಾಲ್ ಮುಂತಾದ ಕೋಮುವಾದದ ಕಾರ್ಯಸೂಚಿಯನ್ನು ಈ ನಾಡಿನ ಜನತೆ ಒಪ್ಪುವುದಿಲ್ಲ ಎಂಬ ಸಂದೇಶವನ್ನು ಈ ಚುನಾವಣೆಯಲ್ಲಿ ನಾವು ತೋರಿಸಬೇಕು. ಯಾವುದೇ ಧರ್ಮ ಇರಲಿ, ಅದನ್ನು ಆಚರಿಸುವುದಕ್ಕೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಪ್ರೋತ್ಸಾಹ ನೀಡುವ ಹಾಗೂ ಮಾನವ ಹಕ್ಕುಗಳನ್ನು ತೀವ್ರವಾಗಿ ಪ್ರತಿಪಾದಿಸುವವರನ್ನು ಬೆಂಬಲಿಸಬೇಕು. ಬಸವಣ್ಣನವರ ಕಲ್ಯಾಣ ಕರ್ನಾಟಕ, ಕುವೆಂಪು ಅವರ ಸರ್ವೋದಯ ಕರ್ನಾಟಕವನ್ನು ನಿರ್ಮಿಸುವ, ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಇಚ್ಛಾಶಕ್ತಿ ಇರುವ ಅಭ್ಯರ್ಥಿಗಳಿಗೆ ನಾವು ಮತ ಹಾಕಬೇಕು. ಇಂದು ನಾವು ಕೈಗೊಳ್ಳುವ ನಿರ್ಧಾರ ನಮ್ಮ ಮಕ್ಕಳ ಮುಂದಿನ ಭವಿಷ್ಯವನ್ನು ರೂಪಿಸುತ್ತದೆ ಎಂಬುದನ್ನು ನಾವು ಮರೆಯಬಾರದು. ಹಣ, ಉಡುಗೊರೆ ಮುಂತಾದ ಆಮಿಷಗಳಿಗೆ ಒಳಗಾಗದೆ ಸಂವಿಧಾನ ನೀಡಿರುವ ಹಕ್ಕನ್ನು ಪ್ರಜ್ಞಾಪೂರ್ವಕವಾಗಿ ಹಾಗೂ ಕಡ್ಡಾಯವಾಗಿ ಈ ಚುನಾವಣೆಯಲ್ಲಿ ಚಲಾಯಿಸಬೇಕು.

ರೆವರೆಂಡ್ ಡಾ. ಪೀಟರ್ ಮಚಾದೊ, ಬೆಂಗಳೂರಿನ ಆರ್ಚ್ ಬಿಷಪ್

ಸರ್ವ ಜನಾಂಗದ ಶಾಂತಿಯ ತೋಟವಾಗಿ ಉಳಿಯಬೇಕು

ಮತದಾರರು ಜಾಗೃತರಾಗಿದ್ದಾಗಲೇ ಉತ್ತಮ ಸರ್ಕಾರ ರಚನೆಯಾಗುತ್ತದೆ. ಮುಗ್ಧತನ ಇರಲಿ; ಆದರೆ ದಡ್ಡತನ ನಮ್ಮಲ್ಲಿ ಇರಬಾರದು. ಮನೆ ಖರೀದಿಸುವಾಗ, ಜಮೀನು ತೆಗೆದುಕೊಳ್ಳುವಾಗ, ಮಗನಿಗೆ–ಮಗಳಿಗೆ, ವಧು–ವರ ನೋಡುವಾಗ ನಾವು ಎಚ್ಚರದಿಂದ ಇರುತ್ತೇವೆ ಅಲ್ಲವೇ? ಈಗ ಮತ ಹಾಕುವಾಗ ಕೂಡ ನಾವು ಪೂರ್ತಿ ಎಚ್ಚರದಿಂದ ಇರಬೇಕು. ಜಾತಿ, ಧರ್ಮ, ಹಣ, ಭಾಷೆಯ ಅಮಲು ಹಬ್ಬಿಸುವ ಜನ ಇದ್ದಾರೆ. ಮನೆ, ಉದ್ಯೋಗ, ಆರೋಗ್ಯ ಮುಂತಾದ ವಿಷಯಗಳನ್ನು ಮಾತನಾಡುವ ಬದಲು ದೇವರು, ಗುಡಿ, ಸಂಪ್ರದಾಯ, ವಸ್ತ್ರ, ಶಿರವಸ್ತ್ರ (ಹಿಜಾಬ್), ಆಹಾರ ಮೊದಲಾದ ವೈಯಕ್ತಿಕ ವಿಷಯಗಳನ್ನೇ ರಂಗು–ರಂಗಾಗಿ ಜನರ ಮುಂದೆ ಇಡುವ ನಿರ್ಲಜ್ಜ ನಡವಳಿಕೆ ಕಾಣುತ್ತಿದೆ. ಭ್ರಷ್ಟಾಚಾರ, ಧರ್ಮ, ಜಾತಿ ಹೆಸರಿನಲ್ಲಿ ದ್ವೇಷ, ಸೇಡಿನ ಮನೋಧೋರಣೆ ಎದ್ದು ಕಾಣುತ್ತಿದೆ. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟವಾಗೇ ಉಳಿಯಬೇಕಾಗಿದೆ. ಸಂವಿಧಾನದ ಆಶಯ ಸಾಕಾರಗೊಳ್ಳಬೇಕಾಗಿದೆ. ಗಾಂಧಿ–ಅಂಬೇಡ್ಕರ್ ಕನಸಿನಂತೆ ಕರುನಾಡು ನಿರ್ಮಾಣವಾಗಬೇಕು. ಇದಕ್ಕಾಗಿ ಈಗಿನ ಚುನಾವಣೆಯಲ್ಲಿ ಭ್ರಷ್ಟ–ಜಾತಿವಾದಿ–ಕೋಮುವಾದಿ ಸರ್ಕಾರ ಮತ್ತೆ ರಚನೆಯಾಗುವುದು ಬೇಡ.

ಮಂಗ್ಳೂರು ವಿಜಯ, ಲೇಖಕ

ಚುನಾವಣಾ ಪ್ರಚಾರ ವಾಹನಕ್ಕೆ ಸ್ಮಶಾನದಲ್ಲಿ ಪೂಜೆ!



ಬೆಳಗಾವಿ: ‘ಈ ಬಾರಿ ಚುನಾವಣೆ ಪ್ರಚಾರಕ್ಕೆ ಹೊಸ ವಾಹನ ತಂದಿದ್ದೇವೆ. ಎರಡು– ಮೂರು ದಿನಗಳಲ್ಲಿ ಸ್ಮಶಾನದಲ್ಲಿ ಪೂಜೆ ಸಲ್ಲಿಸಿ ಅದಕ್ಕೆ ಚಾಲನೆ ಕೊಡುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಭಾನುವಾರ ಹೇಳಿದರು.

‘ಈ ಬಾರಿಯ ಚುನಾವಣೆಯಲ್ಲೂ ರಾಹುಕಾಲದಲ್ಲಿ ನಾಮಪತ್ರ ಸಲ್ಲಿಸುತ್ತೀರಾ’ ಎಂಬ ಪ್ರಶ್ನೆಗೆ, ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಪ್ರತಿದಿನ ರಾಹುಕಾಲವಿರುತ್ತದೆ. ಏ. 13ರಿಂದ 20ರವರೆಗಿನ ಅವಧಿಯಲ್ಲೂ ರಾಹುಕಾಲವಿದ್ದರೆ, ಆ ವೇಳೆಯಲ್ಲೇ ನಾಮಪತ್ರ ಸಲ್ಲಿಸುತ್ತೇವೆ. ರಾಹುಕಾಲ ಮತ್ತು ಒಳ್ಳೆಯ ಕಾಲ ಎಂಬುದು ನಮ್ಮ ಭ್ರಮೆಯಷ್ಟೇ’ ಎಂದರು.

‘ಕೆಲವರು ನಿಮ್ಮನ್ನು ಹಿಂದೂ ವಿರೋಧಿ ಮತ್ತು ಸಂಪ್ರದಾಯ ವಿರೋಧಿ’ ಎಂದು ಆರೋಪಿಸುತ್ತಾರೆ ಎಂಬ ಪ್ರಶ್ನೆಗೆ, ‘ಈ ಆಚರಣೆ ಕೆಟ್ಟದ್ದು ಎಂದವರು ಯಾರು? 30 ವರ್ಷಗಳಿಂದ ಈ ಕೆಲಸ ಮಾಡುತ್ತಿದ್ದೇವೆ. ಈ ದಾರಿ ತೋರಿಸಿದ್ದೇ ಬಸವಣ್ಣ, ಬುದ್ಧ ಮತ್ತು ಅಂಬೇಡ್ಕರ್. ಈ ಆಯ್ಕೆ ನಮಗೆ ಬಿಟ್ಟಿದ್ದು’ ಎಂದು ಉತ್ತರಿಸಿದರು.

ಗಾಳಿ ಮಾತು

ಮುನಿಯಪ್ಪ ಮಹಿಮೆ

ಚಿಕ್ಕಬಳ್ಳಾಪುರ: ಜಿಲ್ಲೆಯ ‘ಕೈ’ ಪಕ್ಷದ ಹಿರಿಯ ಶಾಸಕ ವಿ. ಮುನಿಯಪ್ಪ ಆರು ಬಾರಿ ಶಿಡ್ಲಘಟ್ಟ ಕ್ಷೇತ್ರದಿಂದ ಗೆಲುವು ಕಂಡಿದ್ದಾರೆ. ಎರಡು ಬಾರಿ ಸಚಿವರೂ ಆಗಿದ್ದರು. ಶಿಡ್ಲಘಟ್ಟ ಕ್ಷೇತ್ರದ ಕಾಂಗ್ರೆಸ್ ಹೈಕಮಾಂಡ್ ಎನ್ನುವಂತಿರುವವರು. ಆದರೆ, ಅವರು ಈ ಬಾರಿಯ ಚುನಾವಣೆಗೆ ಸ್ಪರ್ಧಿಸುತ್ತಿಲ್ಲ. ಕಾಂಗ್ರೆಸ್ ಬಿಡುಗಡೆ ಮಾಡಿದ ಮೊದಲ ಪಟ್ಟಿಯಲ್ಲಿ ಅವರ ಹೆಸರೂ ಇಲ್ಲ.

‘ನಾನು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬ್ಯಾಲಹಳ್ಳಿ ಗೋವಿಂದ ಗೌಡ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆ’ ಎಂದು ಮುನಿಯಪ್ಪ ಬಹಿರಂಗವಾಗಿ ಘೋಷಿಸಿದ್ದರು. ಇದಕ್ಕೂ ಮುನ್ನ ‘ಕಾಂಗ್ರೆಸ್ ಟಿಕೆಟ್ ಬಿಟ್ಟುಕೊಡಲು ಎಬಿಡಿ ಟ್ರಸ್ಟ್ ಅಧ್ಯಕ್ಷ ರಾಜೀವ್ ಗೌಡ ಬೆಂಬಲಿಗರು ನನಗೆ ₹ 30 ಕೋಟಿ ಆಮಿಷವೊಡ್ಡಿದ್ದರು’ ಎಂದೂ ಆರೋಪಿಸಿದ್ದರು. ಈ ಬಗ್ಗೆ ಮುನಿಯಪ್ಪ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಕೂಡಾ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಟಿಕೆಟ್ ಕೋರಿ ವೀಕ್ಷಕರಿಗೆ ಅರ್ಜಿ ಸಲ್ಲಿಸುವ ವೇಳೆ ರಾಜೀವ್ ಗೌಡ ಮತ್ತು ಮುನಿಯಪ್ಪ ಬೆಂಬಲಿಗರು ಪರಸ್ಪರ ವಾಗ್ವಾದಕ್ಕಿಳಿದು ಕೈ–ಕೈ ಮಿಲಾಯಿಸುವ ಹಂತಕ್ಕೆ ಬಂದಿದ್ದರು. ಅಂದು ರಾಜೀವ್‌ಗೌಡ ವಿರುದ್ಧ ಮುನಿಸಿಕೊಂಡಿದ್ದ ಮುನಿಯಪ್ಪ ಅವರ ವರ್ತನೆಯಲ್ಲಿ ಬದಲಾವಣೆಯಾಗಿದ್ದು, ಇಬ್ಬರೂ ಈಗ ಕೈಕೈ ಹಿಡಿದು ಕುಚಿಕು–ಕುಚಿಕು ಎನ್ನುತ್ತಿದ್ದಾರೆ. ಕುರುಡು ಕಾಂಚಾಣ ಮಹಿಮೆ ತೋರಿದೆಯೇ ಎಂಬ ಗಾಳಿಸುದ್ದಿ ಕ್ಷೇತ್ರದ ಹಳ್ಳಿಗಳಲ್ಲಿ ಹಬ್ಬಿದೆ.

ಕಾಂಗ್ರೆಸ್‌ನ ಮತ್ತೊಬ್ಬ ಟಿಕೆಟ್ ಆಕಾಂಕ್ಷಿ ಎಸ್.ಎನ್. ಕ್ರಿಯಾ ಟ್ರಸ್ಟ್ ಅಧ್ಯಕ್ಷ ಪುಟ್ಟು ಆಂಜಿನಪ್ಪ ಅವರನ್ನೂ ಮುನಿಯಪ್ಪ ಭೇಟಿ ಮಾಡಿದ್ದರು. ಹೀಗೆ ಒಂದೊಂದು ದಿನ ಒಬ್ಬೊಬ್ಬರ ಪರವಾಗಿ ನಿಲ್ಲುವ ಶಾಸಕರ ನಡೆ ಕಾಂಗ್ರೆಸ್‌ನಲ್ಲಿ ಗೊಂದಲಕ್ಕೂ ಕಾರಣವಾಗಿದೆ. ಹೊರಗಷ್ಟೇ ಅಲ್ಲ ಪಕ್ಷದ ಪಡಸಾಲೆಯಲ್ಲೂ ಈ ಬಗ್ಗೆ ಚರ್ಚೆ ನಡೆಯುತ್ತಿದೆ.

ಜಿಗಿ ನೆಗೆದಾಟ

ಕೆ.ಎಂ. ಶಿವಲಿಂಗೇಗೌಡ

ಜೆಡಿಎಸ್ → ಕಾಂಗ್ರೆಸ್

ಮತ ಆಮಿಷ, ಸಿಕ್ಕಿದ್ದೇನು?

₹19.60 ಲಕ್ಷ ಮೌಲ್ಯದ ದಿನಸಿ, ಪಾನೀಯ ಸಾಮಗ್ರಿ ಚಾಮುಂಡೇಶ್ವರಿ ಕ್ಷೇತ್ರ ಹಂಚ್ಯಾದಲ್ಲಿ ಜಪ್ತಿ

₹19.5 ಲಕ್ಷ ಮೌಲ್ಯದ ವಸ್ತುಗಳು, ₹95 ಸಾವಿರ ನಗದು ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಜಪ್ತಿ

₹11 ಲಕ್ಷ ನಗದು ಹಾಗೂ ₹ 14 ಸಾವಿರ ಮೌಲ್ಯದ ಮದ್ಯ ಮೈಸೂರು ಜಿಲ್ಲೆಯ ವರುಣಾ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಜಪ್ತಿ

20 ತೊಲ ಬಂಗಾರ, ₹6.80 ಲಕ್ಷ ನಗದು ವಿಜಯನಗರ ಜಿಲ್ಲೆಯ ವಿವಿಧೆಡೆ ಜಪ್ತಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ತಾಯಿ ಸಂತೋಷದಿಂದ ಇದ್ದರೆ ಇಡೀ ಕುಟುಂಬ ಸಂತೋಷದಿಂದ ಇರುತ್ತದೆ. ಕುಟುಂಬ ಸಂತೋಷದಿಂದ ಇದ್ದರೆ ರಾಷ್ಟ್ರದಲ್ಲಿ ಸಂತಸ ನೆಲೆಸುತ್ತದೆ.

-ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

ಹೊಸಕೆರೆಹಳ್ಳಿ ಕೆರೆಯನ್ನು ಭೂಮಾಫಿಯಾದಿಂದ ರಕ್ಷಿಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಹೊಸಕೆರೆಹಳ್ಳಿ ಕೆರೆಗೆ ಮಣ್ಣು ಸುರಿದು 25 ಅಡಿ ಅಗಲದ ರಸ್ತೆ ನಿರ್ಮಿಸುತ್ತಿದೆ. ಅಪಾರ್ಟ್‌ಮೆಂಟ್ ಸಮುಚ್ಚಯವೊಂದಕ್ಕೆ ರಸ್ತೆ ಸಂಪರ್ಕ ಕಲ್ಪಿಸಲು ಕೆರೆಗೆ ಮಣ್ಣು ಸುರಿಯಲಾಗಿದೆ ಎಂದು ಆರೋಪಿಸಿ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ ಬಳಿಕ ಬಿಬಿಎಂಪಿಯು ಕೆರೆಯನ್ನು ದುರಸ್ತಿಗೊಳಿಸಿ ಮೊದಲಿನ ಸ್ಥಿತಿಗೆ ತರುವುದಾಗಿ ಭರವಸೆ ನೀಡಿತ್ತು. ಆದರೆ, ಈ ಮಾತನ್ನು ಉಳಿಸಿಕೊಂಡಿಲ್ಲ. ಅಚ್ಚರಿ ಎಂದರೆ, ಕೆರೆಯಲ್ಲಿ ರಸ್ತೆ ನಿರ್ಮಿಸುತ್ತಿರುವ ವಿಷಯ ಗೊತ್ತೇ ಇಲ್ಲ ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಪ್ರತಿಕ್ರಿಯಿಸಿದ್ದಾರೆ. ಇದೇ ವೇಳೆ, ತೋಟಗಾರಿಕೆ ಸಚಿವರೂ ಆಗಿರುವ ಸ್ಥಳೀಯ ಶಾಸಕ ಮುನಿರತ್ನ ಅವರು, ಮುಖ್ಯಮಂತ್ರಿಯವರ ವಿಶೇಷ ಅನುದಾನದಡಿ ಕೈಗೆತ್ತಿಕೊಂಡ ಕೆರೆ ಅಭಿವೃದ್ಧಿ ಕಾಮಗಾರಿಯ ಭಾಗವಾಗಿಯೇ ಈ ದುರಸ್ತಿ ಕಾರ್ಯವನ್ನು ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ. 60 ಎಕರೆಗಳಷ್ಟು ವಿಶಾಲವಾದ ಈ ಕೆರೆಯಲ್ಲಿ ನೂರಾರು ವರ್ಷಗಳಿಂದ ಹೂಳು ತುಂಬಿಕೊಂಡಿದೆ. ಹೂಳನ್ನು ತೆಗೆದು ಕೆರೆಯನ್ನು ಪುನರುಜ್ಜೀವನಗೊಳಿಸುವ ಮೂಲಕ ಮತ್ತಷ್ಟು ಸುಂದರಗೊಳಿಸಲಾಗುತ್ತಿದೆ ಎಂದೂ ಮುನಿರತ್ನ ಹೇಳಿದ್ದಾರೆ. ಈ ಕೆರೆ ಅಭಿವೃದ್ಧಿ ಕಾಮಗಾರಿಗೂ ಮುನ್ನ ಕಡ್ಡಾಯವಾಗಿ ಪಡೆಯಬೇಕಾದ ಮಂಜೂರಾತಿಯನ್ನು ಪಡೆದುಕೊಂಡೇ ಇಲ್ಲ ಎಂದು ಕರ್ನಾಟಕ ಸರೋವರಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ. ಕೆರೆಯ ಹೂಳೆತ್ತಲಾಗಿದೆ ಎಂದು ಸಚಿವರು ಹೇಳಿದ್ದಾರೆ. ಆದರೆ, ಕೆರೆಗೆ ಮಣ್ಣು ತಂದು ಸುರಿಯಲಾಗುತ್ತಿದೆ. ಹೀಗಾಗಿ ಸಚಿವರ ಹೇಳಿಕೆಯೇ ವಿರೋಧಾಭಾಸದಿಂದ ಕೂಡಿದೆ ಎನ್ನುತ್ತಾರೆ ಪರಿಸರ ಕಾರ್ಯಕರ್ತರು. ಕೆರೆಯಲ್ಲಿ ಈಗ ನಿರ್ಮಿಸಿರುವ ರಸ್ತೆಯು ಈ ಜಲಕಾಯದ ಒಂದು ಬದಿಗೆ ನೀರು ಸೇರುವುದನ್ನು ತಡೆಯಲಿದೆ. ಆ ಭಾಗವು ಒಣಗಿ ಹೋಗಲಿದ್ದು, ರಿಯಲ್ ಎಸ್ಟೇಟ್ ಕುಳಗಳು ಆಪೋಶನ ಪಡೆಯಲು ಅನುಕೂಲ ಕಲ್ಪಿಸಲಿದೆ ಎಂಬುದು ಸ್ಥಳೀಯ ನಿವಾಸಿಗಳ ಆರೋಪ ಮತ್ತು ಆತಂಕ.

ಕೆರೆಯ ಒಡಲಿನಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಸರ್ಕಾರ ತಕ್ಷಣ ಸ್ಥಗಿತಗೊಳಿಸಬೇಕು

ಈ ಕೆರೆ ಕಬಳಿಕೆಗೆ ಹಿಂದೆಯೂ ಅನೇಕ ಬಗೆಯ ಪ್ರಯತ್ನಗಳು ನಡೆದಿದ್ದವು. ಕೆರೆಯ ಒಡಲಿಗೆ ಒಳಚರಂಡಿ ನೀರನ್ನು ಶುದ್ಧೀಕರಿಸದೆಯೇ ಬಿಡಲಾಗುತ್ತಿತ್ತು. ಕಸ ಹಾಗೂ ಕಟ್ಟಡಗಳ ತ್ಯಾಜ್ಯವನ್ನು ಕೆರೆಯಂಗಳದಲ್ಲಿ ಸುರಿಯಲಾಗುತ್ತಿತ್ತು. ಒಳಚರಂಡಿಯ ಕೊಳಚೆ ನೀರನ್ನು ಈ ಕೆರೆಗೆ ಸೇರಿಸುವ ಉದ್ದೇಶದಿಂದಲೇ, ಇಲ್ಲಿನ ಒಳಚರಂಡಿ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡಲಾಗಿದೆ ಎಂದು ಮಹಾಲೇಖಪಾಲರ 2021ನೇ ಸಾಲಿನ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಕೆರೆಯಂಗಳದ 7 ಎಕರೆಗಳಷ್ಟು ಜಾಗ ಈಗಾಗಲೇ ಒತ್ತುವರಿಯಾಗಿದೆ. ಕೆರೆಗೆ ಮಣ್ಣು ಸುರಿದ ಬಗ್ಗೆ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದ ಬಳಿಕ ಬಿಬಿಎಂಪಿಯು ಇಲ್ಲಿ ಫಲಕ ಅಳವಡಿಸಿ, 'ಕೆರೆಗೆ ಮಣ್ಣು ಸುರಿದಿರುವುದು ತಾತ್ಕಾಲಿಕ ರಸ್ತೆ ನಿರ್ಮಿಸುವ ಸಲುವಾಗಿ ಮಾತ್ರ. ಹೂಳೆತ್ತುವ ಕಾಮಗಾರಿ ಪೂರ್ಣಗೊಂಡ ಬಳಿಕ ಮಣ್ಣನ್ನು ತೆರವುಗೊಳಿಸಲಾಗುತ್ತದೆ' ಎಂದು ತಿಳಿಸಿದೆ. ಆದರೆ ಸ್ಥಳೀಯರು, 'ಇದು ಸುಳ್ಳಿನ ಕಂತೆ. ಬಿಬಿಎಂಪಿ ಅಧಿಕಾರಿಗಳು ಒಂದರ ಮೇಲೊಂದರಂತೆ ವಿರೋಧಾಭಾಸದ ಹೇಳಿಕೆಗಳನ್ನೇ ನೀಡುತ್ತಿದ್ದಾರೆ' ಎಂದು ಆರೋಪಿಸುತ್ತಾರೆ. ನಗರದ ಅನೇಕ ಕೆರೆಗಳನ್ನು ರಿಯಲ್ ಎಸ್ಟೇಟ್ ಮಾಫಿಯಾ ಈಗಾಗಲೇ ಕಬಳಿಸಿದೆ. ನಗರದ ಅತ್ಯಂತ ಹಳೆಯ ಜಲಮೂಲಗಳಲ್ಲಿ ಒಂದಾದ ಹೊಸಕೆರೆಹಳ್ಳಿ ಕೆರೆ ಭೂಮಾಫಿಯಾದ ಪಾಲಾಗದಂತೆ ನೋಡಿಕೊಳ್ಳಬೇಕು ಮತ್ತು ಅದನ್ನು ಸಂರಕ್ಷಿಸಬೇಕು. ಈ ಕೆರೆ, 2010ರವರೆಗೆ ಅರಣ್ಯ ಇಲಾಖೆಯ ಅಧೀನದಲ್ಲಿತ್ತು. ಅಭಿವೃದ್ಧಿಯ ಹೆಸರಿನಲ್ಲಿ 2011ರಲ್ಲಿ ಸರ್ಕಾರ ಇದನ್ನು ಬಿಬಿಎಂಪಿಗೆ, ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಒಪ್ಪಿಸಿತು. 2019ರಲ್ಲಿ ಮತ್ತೆ ಬಿಬಿಎಂಪಿ ಸುಪರ್ದಿಗೆ ನೀಡಲಾಯಿತು. ಕೆರೆಗಳನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಬಿಬಿಎಂಪಿಯ ವಿಶ್ವಾಸಾರ್ಹತೆಯ ಬಗ್ಗೆಯೇ ಪ್ರಶ್ನೆ ಮೂಡಿದೆ. ಕೆರೆ ಅಂಗಳದಲ್ಲಿ ಯಾವುದೇ ಬಗೆಯ ಅಕ್ರಮ ಚಟುವಟಿಕೆ ನಡೆಯದಂತೆ ನೋಡಿಕೊಳ್ಳಬೇಕಾದ ಅಧಿಕಾರಿಗಳಿಗೇ ಹೊಸಕೆರೆಹಳ್ಳಿ ಕೆರೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಕುರಿತು ಮಾಹಿತಿ ಇಲ್ಲ. ಕರ್ತವ್ಯಲೋಪ ಎಸಗಿದ ಅಧಿಕಾರಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕೆರೆಯ ಒಡಲಿನಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಸರ್ಕಾರ ತಕ್ಷಣವೇ ಸ್ಥಗಿತಗೊಳಿಸಬೇಕು.

ದಿನದ ಟ್ವೀಟ್

ಬೇಡುವ ಸ್ಥಿತಿ...

ಕನ್ನಡ ಮಾತಾಡುವ ಜನರಿಗೆ ಬ್ಯಾಂಕ್ ಸೇವೆಗಳು ಕನ್ನಡದಲ್ಲಿ ಸಿಗಲಿ ಎಂದು ಎಲ್ಲೆಡೆ ಬೇಡುವ ಸ್ಥಿತಿ ಕರ್ನಾಟಕದಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಪರಿಹಾರ ಇಲ್ಲವೇ? ಬ್ಯಾಂಕುಗಳಿರುವುದು ಜನರಿಗೆ ಸೇವೆ ನೀಡಲೋ ಇಲ್ಲ ತೊಂದರೆ ನೀಡಲೋ?

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ, ಪೋಕರಿ ಗುಂಪುಗಳು ಕಾನೂನಿನ ಕೈಗಳಿಂದ ತಪ್ಪಿಸಿಕೊಳ್ಳುತ್ತವೆ, ತಮ್ಮ ವಿರುದ್ಧ ದಾಖಲಾದ ಪ್ರಕರಣಗಳನ್ನು ಹಿಂಪಡೆಯುವಂತೆಯೂ ನೋಡಿಕೊಳ್ಳುತ್ತವೆ. ಆದರೆ ನಾಗರಿಕರು ಬೆಂಗಳೂರಿನ ಸ್ಯಾಂಕಿ ರಸ್ತೆಯಲ್ಲಿನ ಮರಗಳನ್ನು ಕಡಿಯುವುದರ ವಿರುದ್ಧ ಶಾಂತಿಯುತವಾಗಿ ನಡಿಗೆ ಕೈಗೊಂಡರೆ ಅವರ ವಿರುದ್ಧ ಎಫ್‌ಐಆರ್ ದಾಖಲಾಗುತ್ತದೆ!



ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 3-4-1998

• ತಮಿಳುನಾಡು ಡಿಎಂಕೆ ಸರ್ಕಾರ ವಜಾ ಇಲ್ಲ: ವಾಜಪೇಯಿ

ನವದೆಹಲಿ, ಏ.2– ತಮಿಳುನಾಡಿನ ಡಿಎಂಕೆ ಸರ್ಕಾರವನ್ನು ವಜಾ ಮಾಡುವ ಯಾವುದೇ ಉದ್ದೇಶವೂ ಕೇಂದ್ರ ಸರ್ಕಾರಕ್ಕೆ ಇಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ರಾಜ್ಯಸಭೆಯಲ್ಲಿ ಘೋಷಿಸಿದರು.

ರಾಷ್ಟ್ರಪತಿ ಅವರ ಭಾಷಣದ ವಂದನಾ ನಿರ್ಣಯದ ಮೇಲಿನ ಮೂರು ದಿನಗಳ ಚರ್ಚೆಗೆ ಉತ್ತರಿಸುತ್ತಿದ್ದ ಅವರು ಸಂವಿಧಾನದ 356ನೇ ವಿಧಿಯನ್ನು ಸರ್ಕಾರ ದುರುಪಯೋಗ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನ ಪ್ರಣವ ಕುಮಾರ್ ಮುಖರ್ಜಿ ಮತ್ತು ಜನತಾದಳದ ಎಸ್.ಆರ್. ಬೊಮ್ಮಾಯಿ ಅವರು ಪತ್ರಿಕೆಗಳಲ್ಲಿ ತಮಿಳುನಾಡು ಸರ್ಕಾರದ ವಜಾ ಬಗೆಗೆ ಕೇಂದ್ರ ಸಚಿವರೊಬ್ಬರು ನೀಡಿರುವ ಇಂಗಿತದ ಬಗೆಗೆ ಈ ಮೊದಲು ಕೇಳಿದ ಸ್ಪಷ್ಟನೆಗೆ ಪ್ರತಿಕ್ರಿಯೆಯಾಗಿ ವಾಜಪೇಯಿ ಅವರು ಈ ಸ್ಪಷ್ಟೀಕರಣ ನೀಡಿದರು.

• ಹರಿಹರ: ಟ್ರ್ಯಾಕ್ಟರ್ ಉರುಳಿ 15 ಸಾವು

ದಾವಣಗೆರೆ, ಏ.2– ಇಲ್ಲಿಗೆ ಸಮೀಪ ದೊಡ್ಡಬಾತಿ ಕೆರೆಗೆ ರಾತ್ರಿ 8 ಗಂಟೆ ಸಮಯದಲ್ಲಿ ಮದುವೆಯ ದಿಬ್ಬಣದ ಟ್ರ್ಯಾಕ್ಟರ್‌ನ ಆಕ್ಸೆಲ್ ಮುರಿದು ಡ್ರೈವರ್‌ನ ಹತೋಟಿ ತಪ್ಪಿ ಬಿದ್ದು 11 ಜನ ಮಹಿಳೆಯರು ಹಾಗೂ ನಾಲ್ಕು ಮಕ್ಕಳು ಸತ್ತರು.

ಡ್ರೈವರ್ ಸುಭಾಷ್, ಟ್ರ್ಯಾಕ್ಟರ್ ಹತೋಟಿ ತಪ್ಪಿ ಕೆರೆಯೊಳಗೆ ಮುಳುಗುತ್ತಿರುವುದನ್ನು ಅರಿತು ತಕ್ಷಣವೇ ಹೊರ ಜಿಗಿದ. ಸಣ್ಣಪುಟ್ಟ ಗಾಯಗೊಂಡ ಆತನನ್ನು ಇಲ್ಲಿನ ಸಿ.ಜಿ.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಹರಪನಹಳ್ಳಿ ತಾಲ್ಲೂಕು ಬೇವಿನಹಳ್ಳಿ ಗ್ರಾಮದಿಂದ ಮದುವೆ ಮುಗಿಸಿಕೊಂಡು ತಮ್ಮ ಹಳ್ಳಿಯಾದ ರಾಣೆಬೆನ್ನೂರು ತಾಲ್ಲೂಕಿನ ಕರೂರಿನ ವಾಪಸ್ ಆಗುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಗ್ರಾಮಾಂತರ ಪೊಲೀಸರು ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 3-4-1973

• ನಲವತ್ತು ಲಕ್ಷ ಕೇಂದ್ರ ನೌಕರರಿಗೆ ಮಾ.1ರಿಂದ ವೇತನಗಳ ಏರಿಕೆ

ನವದೆಹಲಿ, ಏ.2– ಈ ವರ್ಷ ಮಾರ್ಚ್ 1ರಿಂದ ಎಲ್ಲ ಮಟ್ಟಗಳ ನೌಕರರಿಗೂ ಸಂಬಳ ಏರಿಕೆಗಳನ್ನು ಸೂಚಿಸಿರುವ ಮೂರನೇ ವೇತನ ಮಂಡಳಿಯ ಶಿಫಾರಸುಗಳಿಂದ ಹತ್ತು ಲಕ್ಷ ಮಂದಿ ರಕ್ಷಣಾ ಸಿಬ್ಬಂದಿಯವರೂ ಸೇರಿ ನಲವತ್ತು ಲಕ್ಷ ಮಂದಿ ಕೇಂದ್ರ ಸರ್ಕಾರದ ನೌಕರರು ವೇತನ ಏರಿಕೆ ಅನುಕೂಲ ಪಡೆಯುತ್ತಾರೆ. ಆಯೋಗವು 185 ರೂ. ಕನಿಷ್ಠ ವೇತನವನ್ನು ಶಿಫಾರಸು ಮಾಡಿದೆ. ಪರಮಾವಧಿ ವೇತನ 3500 ರೂ. ಎಂದು ಅದು ಸಲಹೆ ಮಾಡಿದೆ.

ಆಯೋಗದ ವರದಿಯನ್ನು ಹಣಕಾಸು ಸಚಿವ ಚವಾಣ್ ಅವರು ಇಂದು ಲೋಕಸಭೆಯಲ್ಲಿ ಮಂಡಿಸಿದರು.

• ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪಾದನೆ ವಿಕ್ರಮ

ಬೆಂಗಳೂರು, ಏ.2– ಮೂವತ್ತೊಂಬತ್ತು ವರ್ಷಗಳ ಕೆಳಗೆ ಆರಂಭವಾದ ಮೈಸೂರು ಸಕ್ಕರೆ ಕಂಪನಿ 1972–73ನೇ ಸಾಲಿನಲ್ಲಿ ತನ್ನ ಉತ್ಪಾದನೆಯಲ್ಲಿ ವಿಕ್ರಮ ಸ್ಥಾಪಿಸಿದೆ.

ತನ್ನ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ ಅಂದರೆ 47,375 ಟನ್ ಸಕ್ಕರೆಯನ್ನು ಈ ಸಾಲಿನಲ್ಲಿ ಉತ್ಪತ್ತಿ ಮಾಡಿದೆ.

ಪ್ರತಿದಿನ 5,000 ಟನ್ ಕಬ್ಬನ್ನು ಅರೆಯುವಂತೆ ಆಗುವ ವಿಸ್ತರಣೆ ಯೋಜನೆ 1974ರ ಜೂನ್ ಹೊತ್ತಿಗೆ ಕಾರ್ಯರೂಪಕ್ಕೆ ಬರಲಿದೆ. ಮಂಡ್ಯ ಕಾರ್ಖಾನೆಯ ಈ ಪ್ರಗತಿಯ ಪರಿಚಯವನ್ನು ಕಂಪನಿ ಅಧ್ಯಕ್ಷ ಶ್ರೀ ಎಂ.ಲಿಂಗಯ್ಯ ಅವರು ಸಂಜೆ ವರದಿಗಾರರಿಗೆ ನೀಡಿದರು.

ಕರ್ನಾಟಕದಲ್ಲಿ ಮುಸ್ಲಿಂ ಮೀಸಲಾತಿಗೆ ನೂರಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವಿದೆ

ಮುಸ್ಲಿಂ ಮೀಸಲಾತಿ: ಆಧಾರವಿಲ್ಲದ ನಡೆ

ವಿಶ್ಲೇಷಣೆ

ಡಾ.ಎಸ್. ಜಾಫೆಟ್
ಅಲೋಕ್ ಪ್ರಸನ್ನ ಕುಮಾರ್

ರಾಜ್ಯದಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಯನ್ನು ರದ್ದುಪಡಿಸಲು ಸಚಿವ ಸಂಪುಟ ಕೈಗೊಂಡ ತೀರ್ಮಾನಕ್ಕೆ ಕಾರಣ ಏನೆಂಬುದು ಅರ್ಥವಾಗುತ್ತಿಲ್ಲ. ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮತ್ತು ಇತರೆಡೆಗಳಲ್ಲಿ ಮೀಸಲಾತಿ) ಕಾಯ್ದೆ– 1990ರ ಅನ್ವಯ, ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ಹುದ್ದೆಗಳಲ್ಲಿ ಶೇಕಡ 4ರಷ್ಟನ್ನು, ಹಿಂದುಳಿದ ವರ್ಗಗಳ ಪ್ರವರ್ಗ 2ಬಿ ಅಡಿಯಲ್ಲಿ ಬರುವ ಮುಸ್ಲಿಮರಿಗೆ ಮೀಸಲಾಗಿರಿಸಲಾಗಿತ್ತು. ರಾಜ್ಯದ ಮುಸ್ಲಿಮರಲ್ಲಿ ಅತ್ಯಂತ ಹಿಂದುಳಿದ ಕೆಲವು ಸಮುದಾಯಗಳಿಗೆ ಪ್ರವರ್ಗ 1ರ ಅಡಿಯಲ್ಲಿ ನೀಡಿರುವ ಮೀಸಲಾತಿಯು ಇದರಲ್ಲಿ ಬರುವುದಿಲ್ಲ. ಮುಸ್ಲಿಮರಿಗೆ ಪ್ರವರ್ಗ 2ಬಿ ಅಡಿಯಲ್ಲಿ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಈಗ ಹೊಸದಾಗಿ ಸೃಷ್ಟಿಸಿರುವ ಪ್ರವರ್ಗ 2ಸಿ ಅಡಿ ಬರುವ ಒಕ್ಕಲಿಗರು ಮತ್ತು ಇತರ ಸಮುದಾಯಗಳಿಗೆ ಹಾಗೂ ಪ್ರವರ್ಗ 2ಡಿ ಅಡಿ ಬರುವ ವೀರಶೈವ ಲಿಂಗಾಯತ ಮತ್ತು ಇತರ ಸಮುದಾಯಗಳಿಗೆ ಹಂಚಿಕೆ ಮಾಡಲಾಗಿದೆ.

ಸರ್ಕಾರವು ತನ್ನ ತೀರ್ಮಾನಕ್ಕೆ ಎರಡು ಕಾರಣಗಳನ್ನು ನೀಡಿದೆ. ಮೊದಲನೆಯದು, ಧರ್ಮದ ಆಧಾರದಲ್ಲಿ ನೀಡಿರುವ ಮೀಸಲಾತಿಯನ್ನು ಕಾನೂನಿನ ಅಡಿ ಪ್ರಶ್ನಿಸಬಹುದು. ಎರಡನೆಯದು, ಈಗ ಮುಸ್ಲಿಮರು ಇಡಬ್ಲ್ಯುಎಸ್ ಕೋಟಾ ಅಡಿಯಲ್ಲಿ ಶೇ 10ರಷ್ಟು ಮೀಸಲಾತಿಗೆ ಅರ್ಹರಾಗುತ್ತಾರಾದ ಕಾರಣ, ಸರ್ಕಾರದ ತೀರ್ಮಾನದಿಂದ ಮುಸ್ಲಿಮರಿಗೇ ಪ್ರಯೋಜನವಾಗುತ್ತದೆ.

ಇಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕು– ಅಂದರೆ, ಮುಸ್ಲಿಮರಲ್ಲಿ ಎಲ್ಲರೂ 2ಬಿ ಅಡಿ ಬರುವುದಿಲ್ಲ. ಕೆಲವರು ಪ್ರವರ್ಗ 1ರ ಅಡಿಯಲ್ಲಿದ್ದಾರೆ. ಧಾರ್ಮಿಕ ಅಲ್ಪಸಂಖ್ಯಾತರ ಪೈಕಿ ಮೀಸಲಾತಿಯ ಪ್ರಯೋಜನ ಪಡೆದವರು ಮುಸ್ಲಿಮರು ಮಾತ್ರವೇ ಅಲ್ಲ. ದಲಿತ ಕ್ರೈಸ್ತರು, ಕ್ರೈಸ್ತರು ಮತ್ತು ಜೈನರು ಕೂಡ ಮೀಸಲಾತಿ ಪಡೆಯುತ್ತಿದ್ದಾರೆ. ಈ ಸಮುದಾಯಗಳನ್ನು ವರ್ಗೀಕರಿಸಿರುವುದು ಅವರ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಆಧರಿಸಿ.

ಕಾನೂನಿನ ದೃಷ್ಟಿಯಿಂದ, ಸರ್ಕಾರದ ವಾದಕ್ಕೆ ಅರ್ಥ ಇಲ್ಲ. ಮೊದಲನೆಯ ಕಾರಣ ನೀಡುವಾಗ ರಾಜ್ಯ ಸರ್ಕಾರವು ಆಂಧ್ರಪ್ರದೇಶದಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಯನ್ನು ರದ್ದುಪಡಿಸಿದ ಅಲ್ಲಿನ ಹೈಕೋರ್ಟ್‌ನ ಆದೇಶವನ್ನು ಉಲ್ಲೇಖಿಸುತ್ತಿದೆ. ಅವಿಭಜಿತ ಆಂಧ್ರಪ್ರದೇಶ ಸರ್ಕಾರವು ಮುಸ್ಲಿಮರಿಗೆ 3 ಬಾರಿ ಮೀಸಲಾತಿ ಕಲ್ಪಿಸಿತ್ತು. ಪ್ರತಿ ಬಾರಿಯೂ ಅದನ್ನು ಅಸಿಂಧುಗೊಳಿಸಲಾಯಿತು. ಆ ರಾಜ್ಯದಲ್ಲಿ ಮುಸ್ಲಿಮರನ್ನು ಒಬಿಸಿ ಕೋಟಾ ಅಡಿಯಲ್ಲಿ ತರುವ ಕೇಂದ್ರದ ಯತ್ನವೂ ಅಸಿಂಧುವಾಯಿತು. ಮುಸ್ಲಿಮರು ಒಂದು ಸಮುದಾಯವಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಎಂದು ಹೇಳಲು ನಿರ್ಬಂಧವೇನೂ ಇಲ್ಲ. ಆದರೆ ಅವರು ಹಿಂದುಳಿದಿದ್ದಾರೆ ಎಂಬುದು ಸಾಬೀತಾಗಬೇಕು ಎಂದು ಆಂಧ್ರ ಹೈಕೋರ್ಟ್ ಸ್ಪಷ್ಟಪಡಿಸಿತ್ತು.

ಆದರೆ ಆಂಧ್ರಪ್ರದೇಶದ ಮುಸ್ಲಿಮರು ಸಾಮಾಜಿಕವಾಗಿ ಹಿಂದುಳಿದಿಲ್ಲವಾದ ಕಾರಣ ಅವರಿಗೆ ನೀಡಿರುವ ಮೀಸಲಾತಿಗೆ ಸಮರ್ಥನೆಯಿಲ್ಲ ಎಂದು ಆದೇಶವು ಹೇಳಿತ್ತು. ಈ ತತ್ವವನ್ನು ನಂತರದ ಒಂದು ಪ್ರಕರಣದಲ್ಲಿಯೂ ಅನ್ವಯಿಸಲಾಗಿದೆ. ಮುಸ್ಲಿಮರು ಹಿಂದುಳಿದಿದ್ದಾರೆ ಎಂದು ತೋರಿಸಿರುವ ರೀತಿಯು ಸರಿಯಾಗಿಲ್ಲ ಎಂದು ಹೇಳಲಾಗಿದೆ. ಮುಸ್ಲಿಮರಿಗೆ ಮೀಸಲಾತಿಯನ್ನೇ ಕೊಡಬಾರದು ಎಂದು ಕೋರ್ಟ್ ಎಲ್ಲಿಯೂ ಹೇಳಿಲ್ಲ. ಆದರೆ, ಧರ್ಮದ ಕಾರಣಕ್ಕಾಗಿಯೇ ಆಂಧ್ರಪ್ರದೇಶದ ಮುಸ್ಲಿಮರು ಮೀಸಲಾತಿಯ ಪ್ರಯೋಜನ ಪಡೆಯಬಹುದೇ ಎಂಬ ಪ್ರಶ್ನೆಯು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ.

ಕರ್ನಾಟಕದಲ್ಲಿ ಮುಸ್ಲಿಮರಿಗೆ ಮೀಸಲಾತಿಯನ್ನು ನೀಡಿದ್ದು ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂದು ಹೇಳುವ ಅಂಕಿ–ಅಂಶ ಆಧರಿಸಿ. ಅವರಿಗೆ ಮೀಸಲಾತಿಯನ್ನು ಇಲ್ಲವಾಗಿಸುವುದಕ್ಕೆ ಸರ್ಕಾರ ನೀಡಿರುವ ಸಮರ್ಥನೆಯು ಕಾನೂನು ಅಪೂರ್ಣವಾಗಿ ಓದಿಕೊಂಡಿದ್ದರ ಪರಿಣಾಮ ಎನ್ನಬೇಕಾಗುತ್ತದೆ.

ಕರ್ನಾಟಕದಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಗೆ ನೂರಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವಿದೆ. ಮೈಸೂರು ಸಂಸ್ಥಾನವು 1918ರಲ್ಲಿ ಮಿಲ್ಲರ್ ವರದಿಯನ್ನು ಅನುಷ್ಠಾನಕ್ಕೆ ತಂದ ನಂತರದಲ್ಲಿ, ಕರ್ನಾಟಕದ ಮುಸ್ಲಿಮರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಎಂದು ಪರಿಗಣಿಸಲಾಗಿದೆ. ನಾಗನಗೌಡ ಸಮಿತಿ, ಹಾವನೂರು ಆಯೋಗದ ವರದಿ, ವೆಂಕಟಸ್ವಾಮಿ ಆಯೋಗದ ವರದಿ ಮತ್ತು ಒ. ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಕೂಡ ಮುಸ್ಲಿಮರ ಹಿಂದುಳಿದಿರುವಿಕೆಯನ್ನು ಗುರುತಿಸಿವೆ. ಕರ್ನಾಟಕದ ಮುಸ್ಲಿಮರು ಬೇರೆ ರಾಜ್ಯಗಳ ಮುಸ್ಲಿಮರಿಗಿಂತ ಹೆಚ್ಚು ಉತ್ತಮ ಸ್ಥಿತಿಯಲ್ಲಿದ್ದಾರೆ ಎಂದು ಸಾಚಾರ್ ಸಮಿತಿಯು ಹೇಳಿದ್ದರೂ, ಕರ್ನಾಟಕದ ಮುಸ್ಲಿಮರು ಹಿಂದೂ ಒಬಿಸಿ ಸಮುದಾಯಗಳಿಗಿಂತ ಹೆಚ್ಚಿನ ಬಡತನವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಕೂಡ ಹೇಳಿದೆ.

ಈ ವಿಚಾರಗಳು ಚೆನ್ನಾಗಿ ತಿಳಿದಿರುವಾಗ, ಮುಸ್ಲಿಮರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರು ಎಂದು ಪರಿಗಣಿಸಲು ಇನ್ನು ಸಾಧ್ಯವಿಲ್ಲ ಎನ್ನುವ ನಿಖರ ಅಂಕಿ–ಅಂಶಗಳು ಇಲ್ಲದೆ ಅವರಿಗೆ ಮೀಸಲಾತಿಯನ್ನು ನಿರಾಕರಿಸುವುದು ಅಸಾಂವಿಧಾನಿಕವಾಗುತ್ತದೆ. ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳಿಗೆ ಮೀಸಲಾತಿಯನ್ನು ಕೊಡುವುದಾದರೆ ಸ್ವೀಕೃತ ಮಾನದಂಡಗಳನ್ನು ಬಳಸಿ ಆ ವರ್ಗದ ಹಿಂದುಳಿದಿರುವಿಕೆಯನ್ನು ತೋರಿಸುವ ದತ್ತಾಂಶ ಇರಬೇಕು ಎಂದು ಹೇಳಿದೆ. ಹಾಗೆಯೇ, ಸಮುದಾಯವೊಂದಕ್ಕೆ ನೀಡಿದ್ದ ಮೀಸಲಾತಿಯನ್ನು ಕಡಿಮೆ ಮಾಡುವುದಕ್ಕೂ ಸರಿಯಾದ ಮಾನದಂಡಗಳು ಇರಬೇಕು. ಅದರಲ್ಲೂ, ಇಲ್ಲಿ ಮೀಸಲಾತಿಯನ್ನು ರದ್ದುಗೊಳಿಸಿ ಅದನ್ನು ಸಾಮಾನ್ಯ ವರ್ಗಕ್ಕೆ ನೀಡುತ್ತಿಲ್ಲ. ಬದಲಿಗೆ, ಮರುಹಂಚಿಕೆ ಮಾಡಲಾಗುತ್ತಿರುವ ಕಾರಣಕ್ಕೆ, ಸರಿಯಾದ ಆಧಾರಗಳು ಇರಬೇಕಾಗುತ್ತದೆ. ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಯನ್ನು ರದ್ದು ಮಾಡಿ, ಅದನ್ನು ಒಕ್ಕಲಿಗರು, ಬಲಿಜ ಮತ್ತು ಇತರ ಸಮುದಾಯಗಳಿಗೆ ಹಾಗೂ ಲಿಂಗಾಯತ, ಕುರುಬ ಮತ್ತಿತರ ಸಮುದಾಯಗಳಿಗೆ ಮರುಹಂಚಿಕೆ ಮಾಡಲು ಸರ್ಕಾರಕ್ಕೆ ಕಾನೂನಿನ ಆಧಾರ ಇಲ್ಲ. ಈ ನಡೆಯನ್ನು ನ್ಯಾಯಾಲಯಗಳು ಅಸಾಂವಿಧಾನಿಕ ಎಂದು ರದ್ದುಗೊಳಿಸಬಹುದು.

ಸರ್ಕಾರವು ರಾಜ್ಯದಲ್ಲಿ ಮೀಸಲಾತಿಗೆ ಅರ್ಹವಾಗಿರುವ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸುವಾಗ ಹಿಂದುಳಿದ ವರ್ಗಗಳ ಆಯೋಗದ ಸಲಹೆ ಪಡೆಯಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ ಹೇಳುತ್ತದೆ. ಆದರೆ, ಮುಸ್ಲಿಮರಿಗೆ ಮೀಸಲಾತಿ ಕೊಡಬೇಕಾಗಿಲ್ಲ ಎಂದು ಆಯೋಗವು ಹೇಳಿರುವ ಯಾವುದೇ ವರದಿಯನ್ನು ಸರ್ಕಾರವು ಉಲ್ಲೇಖಿಸಿಲ್ಲ. ಇಲ್ಲಿ, ಆಯೋಗ ಹೇಳುವುದೇ ಒಂದು, ಸರ್ಕಾರ ಮಾಡುವುದು ಇನ್ನೊಂದು ಎಂಬ ಸ್ಥಿತಿ ಸೃಷ್ಟಿಯಾಗುವಂತಿಲ್ಲ. ಕಾಯ್ದೆಯ ಸೆಕ್ಷನ್ 10ರ ಪ್ರಕಾರ, ಆಯೋಗದ ಸಲಹೆಯನ್ನು ಸರ್ಕಾರವು ಪಾಲಿಸಬೇಕಾಗುತ್ತದೆ. ಹೀಗಾಗಿ, ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಆಯೋಗದ ಸಲಹೆ ಇಲ್ಲದೆ, ಮೀಸಲಾತಿಗೆ ಅರ್ಹವಾಗಿರುವ ಹಿಂದುಳಿದ ವರ್ಗಗಳ ಪಟ್ಟಿಯಿಂದ ಮುಸ್ಲಿಮರನ್ನು ಹೊರಗಿಡಲು ಅವಕಾಶವಿರಲಿಲ್ಲ.

ಒಬಿಸಿ ವರ್ಗದ ಅಡಿಯಲ್ಲಿ ಮುಸ್ಲಿಮರಿಗೆ ಮೀಸಲಾತಿಯನ್ನು ನಿರಾಕರಿಸಿದ ನಂತರದಲ್ಲಿ ಅವರಿಗೆ ಇಡಬ್ಲ್ಯುಎಸ್ ಕೋಟಾ ಅಡಿಯಲ್ಲಿ ಮೀಸಲಾತಿ ಸಿಗುತ್ತದೆ ಎಂಬ ವಾದವು ವಿಚಿತ್ರವಾಗಿದೆ. ಸಂವಿಧಾನದ 103ನೆಯ ತಿದ್ದುಪಡಿಯನ್ನು ಕೇಂದ್ರವು ಅಧಿಸೂಚನೆಯಲ್ಲಿ ಪ್ರಕಟಿಸಿದ ಮೂರು ವರ್ಷಗಳ ನಂತರವೂ ಕರ್ನಾಟಕವು ಇಡಬ್ಲ್ಯುಎಸ್ ಮೀಸಲಾತಿಗೆ ಅವಕಾಶ ಕಲ್ಪಿಸುವ ಕಾನೂನಿಗೆ ಅನುಮೋದನೆ ನೀಡಿಲ್ಲ. ಇಡಬ್ಲ್ಯುಎಸ್ ಮೀಸಲಾತಿ ಜಾರಿಗೆ ಬಂದಿಲ್ಲ. ಅದರಿಂದ ಯಾರಿಗೆ ಲಾಭವಾಗಿದೆ ಎಂಬ ಮಾಹಿತಿ ಇಲ್ಲ. ಹೀಗಿರುವಾಗ, ಮುಸ್ಲಿಮರಿಗೆ ಇದರಿಂದ ಪ್ರಯೋಜನ ಆಗುತ್ತದೆ ಎಂದು ಹೇಳುವುದಕ್ಕೆ ಊಹೆ ಮಾತ್ರವೇ ಆಧಾರ.

ಮುಸ್ಲಿಮರ ಸಾಮಾಜಿಕ, ಆರ್ಥಿಕ ಹಿಂದುಳಿದಿರುವಿಕೆಯನ್ನು ಪರಿಗಣಿಸಿದರೆ, ಇಡಬ್ಲ್ಯುಎಸ್ ವರ್ಗದ ಅಡಿಯಲ್ಲಿ ಬರುವ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರಿದಿರುವ ಸಮುದಾಯಗಳ ಜೊತೆ ಮುಸ್ಲಿಮರು ಸ್ಪರ್ಧಿಸಬೇಕಿರುವುದು ನ್ಯಾಯಸಮ್ಮತ ಅನ್ನಿಸುವುದಿಲ್ಲ. ಹೀಗಾಗಿ, ಇಡಬ್ಲ್ಯುಎಸ್ ಕೋಟಾ ಅಡಿಯಲ್ಲಿ ಮುಸ್ಲಿಮರಿಗೆ ಮೀಸಲಾತಿ ಸಿಗುತ್ತದೆ ಎಂದು ರಾಜ್ಯ ಸರ್ಕಾರ ನೀಡಿರುವ ಭರವಸೆಯು ಮಹಾತ್ಮ ಗಾಂಧೀಜಿ ಹೇಳಿದಂತೆ, 'ದಿವಾಳಿ ಆಗುತ್ತಿರುವ ಬ್ಯಾಂಕ್‌ನ ಚೆಕ್‌ಅನ್ನು ವಾಯಿದೆ ಮುಗಿದ ನಂತರ ಕೊಡುತ್ತಿರುವಂತೆ' ಕಾಣುತ್ತಿದೆ.



ಡಾ. ಜಾಫೆಟ್: ವಿಶ್ರಾಂತ ಕುಲಪತಿ, ಬೆಂಗಳೂರು ನಗರ ವಿ.ವಿ., ಕುಮಾರ್: ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿಯ ಸಹಸಂಸ್ಥಾಪಕ

ಚುರುಮುರಿ



ಕೂದ್ಲಲ್ಲಿ ಸಿಂಬಲ್ಲು!

• ತುರುವೇಕೆರೆ ಪ್ರಸಾದ್

ಹರಟೆಕಟ್ಟೇಲಿ ಮಾಲಿಂಗನ ಹೇರ್‌ಸ್ಟೈಲ್ ಚೇಂಜಾಗಿರೋದನ್ನ ನೋಡಿ ಎಲ್ಲಾ ದಂಗಾದ್ರು. 'ಈ ವಯಸ್ಸಲ್ಲಿ ನಿಂದೇನೋ ಕಾಲೇಜು ಹೈಕ್ಳ ತರ ಶೋಕಿ? ಕೂದ್ಲೆಲ್ಲಾ ಯಾವ್ದೋ ಬಡಕಲ ದನ ಮೇದಂಗಿದೆ' ಕೇಳಿದ ಗುದ್ಲಿಂಗ.

'ಇದು ಶೋಕಿ ಅಲ್ಲಲೇ ಎಲೆಕ್ಷನ್ ಕ್ಯಾನವಾಸು... ಸರಿಯಾಗ್ ಕಣ್ ಬಿಟ್ಟು ನೋಡ್ರುಲಾ? ನನ್ ಕೂದ್ಲೊಳಗೆ ಕಮಲ ಎದ್ ಕಾಣ್ತಿಲ್ಲವಾ?'

'ಹ್ಞೂಂ ಕಣ್ಲಾ, ಮೊದ್ಲೇ ನಿನ್ ತಲೇಲಿ ಕೆಸರು ತುಂಬ್ಕಂಡಿತ್ತು, ಈಗ ಕಮಲ ಅರಳಿದೆ. ಹೌದು, ಇದೆಂತ ವಿಚಿತ್ರ ತಿಕ್ಕಲು ನಿಂಗೆ?'

'ಲೇಯ್, ತಿಕ್ಕಲಲ್ಲ ಕಣ್ರಲೇ. ಎಲ್ಲಂದ್ರಲ್ಲಿ ಬರೆದು ಚುನಾವಣಾ ಪ್ರಚಾರ ಮಾಡಂಗಿಲ್ಲ. ನಮ್ ಏರಿಯಾದ ಜನನೂ ಕಟ್‌ನಿಟ್ಟಾಗ್ ಯೋಳ್ಬುಟ್ಟವ್ರೆ. ಅದಕ್ಕೇ ಇಂಗ್ ಪಕ್ಷದ ಚಿಹ್ನೆನ ಕೂದ್ಲಲ್ಲಿ ಕೆತ್ತುಸ್ಕೊಂಡು ಪ್ರಚಾರ ಮಾಡಕ್ ಒಂಟಿದೀವಿ. ಇವತ್ತು ಕಮಲ, ಮುಂದಿನವಾರ ಕೈ, ಆಚೆವಾರ ಪೊರಕೆ. ಹಿಂಗೇ ಕಾಸಿಗ್ ತಕ್ಕ ಸಿಂಬಲ್ಲು!'

'ಸರಿ ಬಿಡು ಮತ್ತೆ, ಸದ್ಯಕ್ಕೆ ನಿನ್ ಹೆಂಡ್ತಿ ನಿನ್ ಜುಟ್ಟಿಗೆ ಕೈ ಹಾಕೋ ಹಾಗಿಲ್ಲ. ಹೀಗೆ ಓಪನ್ನಾಗಿ ಕ್ಯಾನ್‌ವಾಸ್ ಮಾಡುದ್ರೆ ಬೇರೆಯವರು ಗುರ್ ಅನ್ನಲ್ವಾ?'

'ಅಯ್ಯೋ ಅಂತಾರೆ ಮಾರಾಯ. ನೀನು ತಲೆ ಮೇಲೆ ಯಾವ ಚಿಹ್ನೆನಾದ್ರೂ ಕೆತ್ತುಸ್ಕೋ ಆದ್ರೆ ಜನಕ್ಕೆ ಕಾಣ್ದಂಗೆ ಟೋಪಿ ಹಾಕ್ಕಂಡು ತಿರುಗು ಅಂತ ಹೆದುರುಸ್ತಾ ಅವ್ರೆ'.

'ನೀನು ಹಾಕಲಿಲ್ಲ ಅಂದ್ರೆ ಅವರೇ ಬಲವಂತವಾಗಿ ಹಾಕಿ ಹೋಗ್ತಾರೆ ಬಿಡು. ಯಾಕಂದ್ರೆ ಟೋಪಿ ಹಾಕೋದು, ಹಾಕ್ಸೋದು ರಾಜಕೀಯದವರಿಗೆ ಸಲೀಸು'.

'ಅದಕ್ಕಿಂತ ಹೆಚ್ಚಾಗಿ ರಾಜಕೀಯದವರಿಗೆ ನುಣ್ಣಗೆ ಕೆತ್ತೋದು ಜನ'ಶೇವ' ಮಾಡೋದು ಚೆನ್ನಾಗೇ ಅಭ್ಯಾಸ ಆಗಿರುತ್ತೆ. ನಿನ್ನ ಹಿಡ್ಕೊಂಡು ಕೂದ್ಲು ತೆಗೆಸಿ ಗುಂಡು ಹೊಡ್ಸುದ್ರೆ ಏನ್ ಮಾಡ್ತೀಯ?' ಕೇಳಿದ ಪರ್ಮೇಶಿ.

'ಅವರು ಶಾಮಿಯಾನದ ಕೆಳಗೆ ತೂರುದ್ರೆ ನಾವು ಜಮಖಾನದ ಕೆಳಗೆ ತೂರ್ತೀವಿ. ಅಂಗೇನಾದ್ರು ಗುಂಡು ಹೊಡ್ಸುದ್ರೆ ತಲೆ ಜೊತೆಗೆ ಮೈ ತುಂಬಾ ಪೈಂಟ್ ಹೊಡುಸ್ಕಂಡು ಪ್ರಚಾರ ಮಾಡುದ್ರಾಯ್ತು' ಎಂದು ತಲೆ ಸವರಿಕೊಂಡ ಮಾಲಿಂಗ.

ಸಂಗತ

ಈ ಲಿಂಕ್ ಕೆಲಸಕ್ಕೆ ಕೊನೆಯೆಂದು?

ತೆರಿಗೆ ವಂಚನೆ ತಡೆಗಾಗಿ ಆಧಾರ್–ಪ್ಯಾನ್ ಕಾರ್ಡ್ ಲಿಂಕ್ ಮಾಡಿಸಲು ಹೊರಟವರು, ಅಮಾಯಕ ಜನರಿಗೆ ದಂಡದ ಬೆದರಿಕೆ ಒಡ್ಡುವುದು ಔಚಿತ್ಯಪೂರ್ಣವಲ್ಲ

• ಪ.ರಾಮಕೃಷ್ಣಶಾಸ್ತ್ರಿ

ಮನುಷ್ಯ ಆಧಾರ್ ಕಾರ್ಡ್ ಇಲ್ಲದೆ ಯಾವ ವ್ಯವಹಾರವನ್ನೂ ಮಾಡುವಂತಿಲ್ಲ ಎಂಬ ಸ್ಥಿತಿ ಭಾರತದಲ್ಲಿ ನಿರ್ಮಾಣವಾಗಿದೆ. ವಿರೋಧ ಪಕ್ಷವಾಗಿ ಕುಳಿತಿದ್ದಾಗ, ಆಗಿನ ಸರ್ಕಾರ ಜಾರಿಗೆ ತರಲು ಹೊರಟ ಯೋಜನೆಯನ್ನು ಕಟುವಾಗಿ ಟೀಕಿಸಿದವರು, ಅಧಿಕಾರ ಹಿಡಿದ ಮೇಲೆ ಖುದ್ದು ನಿಂತು ಅದು ಬೇಕೇ ಬೇಕು ಅನ್ನುತ್ತಿದ್ದಾರೆ. ತಪ್ಪೇನಿಲ್ಲ, ನಕಲು ಮಾಡಲಾಗದಂತಹ ಸ್ಥಿರವಾದ ಈ ಗುರುತಿನ ಚೀಟಿಯು ಸೌಲಭ್ಯಗಳ ಗಳಿಕೆಯಲ್ಲೂ ಮೋಸವಾಗದಂತೆ ಕಾವಲುಬೇಲಿ ಮಾದರಿಯಲ್ಲಿ ಕೆಲಸ ಮಾಡುತ್ತದೆ.

ಇದಾದ ಬಳಿಕ ಭಾರತೀಯರ ಬದುಕು ಕಾರ್ಡುಗಳನ್ನೇ ಅವಲಂಬಿಸಿ ನಿಲ್ಲುವಂತಾಗಿದೆ. ಪಡಿತರ ಕಾರ್ಡ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಆರೋಗ್ಯ ಕಾರ್ಡ್, ಅಡುಗೆ ಅನಿಲದ ಕಾರ್ಡ್, ಹಿರಿಯ ನಾಗರಿಕರ ಕಾರ್ಡ್... ಹೀಗೆ ಬದುಕೆಂಬುದು ಕಾರ್ಡುಗಳ ರಾಶಿಯಲ್ಲಿ ಮುಳುಗಿಹೋಗಿದೆ. ಈ ಸಾಲಿಗೆ ಸೇರಿದ್ದು ಪ್ಯಾನ್ ಕಾರ್ಡ್. ಆದಾಯ ತೆರಿಗೆ ವಂಚಿಸದೆ ಜನಸಾಮಾನ್ಯರಾದರೂ ಪ್ರಾಮಾಣಿಕರಾಗಿರಲಿ ಎಂಬ ಉದ್ದೇಶದಿಂದ ಪ್ರತಿಯೊಬ್ಬನಿಗೂ ಅದನ್ನು ಪಡೆಯುವುದನ್ನು ನೇರವಾಗಿ ಅಲ್ಲದಿದ್ದರೂ ಕಡ್ಡಾಯಗೊಳಿಸಲಾಯಿತು. ವಾರ್ಷಿಕ ವರಮಾನವೇ ಇಲ್ಲದೆ ಸರ್ಕಾರದ ಮಾಸಾಶನಕ್ಕೆ ಕೈಯೊಡ್ಡುವ ಹಿರಿಯ ಜೀವಗಳನ್ನೂ ಅದು ಬಿಟ್ಟಿಲ್ಲ. ಪ್ಯಾನ್ ಕಾರ್ಡ್ ಮಾಡಿಸಿ ಬ್ಯಾಂಕ್ ಖಾತೆಗೆ ಜೋಡಿಸದವರಿಗೆ ಮಾಸಿಕ ಅನ್ನದ ಸೌಲಭ್ಯಕ್ಕೇ ಗುನ್ನಾ ನೀಡುವಂತಹ ನಡೆಗಳನ್ನು ಆಳುವವರು ಇರಿಸಿದರು.

ಈಗ ಶ್ರೀಸಾಮಾನ್ಯನ ಉಸಿರನ್ನು ಬಿಗಿಹಿಡಿಯುವಂತೆ ಮಾಡಿದ್ದು ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಜೋಡಣೆ. ಅದಕ್ಕಾಗಿ ಮಾರ್ಚ್ ಕಡೆಯ ದಿನಾಂಕವನ್ನು ನಿಗದಿಪಡಿಸಿದ್ದರೂ ಸರ್ಕಾರ ಈಗ ಮತ್ತೆ ಮೂರು ತಿಂಗಳವರೆಗೆ ಆಯುಷ್ಯ ವರ್ಧಿಸಿದೆ. ಈ ಜೋಡಣೆ ಮಾಡಬೇಕಿದ್ದರೆ ಒಂದು ಸಾವಿರ ರೂಪಾಯಿ ದಂಡಶುಲ್ಕ ನಿಗದಿಪಡಿಸಲಾಗಿದೆ. ಇದನ್ನು ಮಾಡಲು ಸೈಬರ್ ಕೇಂದ್ರಗಳಿಗೆ ಹೋದರೆ, ಆ ಕೆಲಸದ ಶುಲ್ಕವಾಗಿ ಇನ್ನೂರು ರೂಪಾಯಿ ಪ್ರತ್ಯೇಕ ತೆರಬೇಕಾಗುತ್ತದೆ.

ಅದೆಷ್ಟೋ ಮಂದಿಗೆ ಈ ಜೋಡಣೆ ಮಾಡಬೇಕೆಂಬುದೇ ಗೊತ್ತಿಲ್ಲ. ಮಾಡದೇ ಹೋದರೆ ಹತ್ತು ಸಾವಿರದ ತನಕ ಜುಲ್ಮಾನೆ ವಿಧಿಸುವುದಾಗಿ ಕೆಲವು ವರದಿಗಳು ಬೆದರಿಸುತ್ತಿವೆ. ಆದರೆ ಸುಲಭವಾಗಿ ಈ ಜೋಡಣೆ ಮಾಡಲು ಆಯಾ ಗ್ರಾಮದಲ್ಲಿ ಒಂದು ಕೇಂದ್ರದ ವ್ಯವಸ್ಥೆ ಮಾಡದೆ ಜನರ ಮೇಲೆ ಕಾನೂನು ಕಟ್ಟಲೆ ಹೇರಲು ಮುಂದಾಗುವುದು ಸರಿಯೆನಿಸುತ್ತದೆಯೇ?

ಆಫ್ರಿಕಾದ ರಾಷ್ಟ್ರವೊಂದರಲ್ಲಿ ಕರೆನ್ಸಿ ಚಲಾವಣೆ ಬಹಳಷ್ಟು ಕಡಿಮೆಯಾಗಿದೆ. ಪ್ರತಿಯೊಬ್ಬರೂ ಮೊಬೈಲಿನ ಮೂಲಕವೇ ಹಣ ಕೊಡುತ್ತಾರೆ, ಖರೀದಿಸುತ್ತಾರೆ. ತಾವೂ ಹಾಗೆಯೇ ಪಡೆಯುತ್ತಾರೆ. ಈ ಸಾಧನೆ ಮಾಡುವ ಮೊದಲು ಸರ್ಕಾರ ಪ್ರತಿಯೊಂದು ಬೆಟ್ಟದ ಮೇಲೂ ಅಲ್ಲಿನ ಜನರಿಗೆ ಮೊಬೈಲ್ ಸಿಗ್ನಲ್ ಸುಲಭವಾಗಿ ಸಿಗುವ ಶಕ್ತಿಯುತವಾದ ಗೋಪುರಗಳನ್ನು ಸ್ಥಾಪಿಸಿತು. ಎಲ್ಲ ಪ್ರಜೆಗಳಿಗೂ ಮೊಬೈಲ್ ಅನ್ನು ಉಚಿತವಾಗಿ ನೀಡಿತು.

ಭಾರತದ ಮೊಬೈಲ್ ಸಿಗ್ನಲ್ ನಗರಗಳನ್ನೇ ಗುರಿಯಿಟ್ಟುಕೊಂಡಂತಿದೆ. ಗ್ರಾಮೀಣವಾಸಿಗಳ ಪಾಲಿಗೆ ಅದು ಎಷ್ಟು ದುರ್ಬಲ ಎಂದರೆ, ಕೆಲವೊಮ್ಮೆ ಅದರ ಟವರ್ ಕೆಳಗೆ ನಿಂತರೂ ಸಿಗ್ನಲ್ ಸಿಗುವುದಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಡಿಜಿಟಲ್ ವ್ಯವಹಾರ ಅಳವಡಿಸಿರುವ ಹೆಗ್ಗಳಿಕೆಯಿದೆ ಎಂದು ಹೇಳಬಹುದು. ಆದರೆ ಬಹುತೇಕ ದಿನಗಳಲ್ಲಿ ಸರ್ವರ್ ಸರಿಯಿಲ್ಲ ಎಂಬ ಕಾರಣಕ್ಕೆ ಯಾವ ವ್ಯವಹಾರವೂ ನಡೆಯದೆ, ದೂರದ ಹಳ್ಳಿಯ ಜನ ಕಷ್ಟ, ನಷ್ಟ ಅನುಭವಿಸಿ ಮನೆಗೆ ಮರಳಬೇಕಾಗಿದೆ.

ಆಧಾರ್ ಕಾರ್ಡಿಗೆ ಪ್ಯಾನ್ ಕಾರ್ಡ್ ಜೋಡಣೆ ಮಾಡುವ ಆಜ್ಞೆ ಅನೇಕರ ಪಾಲಿಗೆ ಶೋಷಣೆಯ ಇನ್ನೊಂದು ಮುಖವಾಗುತ್ತದೆ. ಈ ಕೆಲಸ ಮಾಡದಿದ್ದರೆ ಮುಂದೆ ಬ್ಯಾಂಕ್ ಖಾತೆಯ ಹಣವೂ ಸಿಗುವುದಿಲ್ಲ ಎಂದು ಕೆಲವರು ಭೀತಿ ಹುಟ್ಟಿಸುತ್ತಿದ್ದಾರೆ. ಅದನ್ನು ಹೇಗೆ ಮಾಡುವುದೆಂಬುದೇ ಗೊತ್ತಿಲ್ಲದಂಥವರ ಮನೆಗಳಿಗೆ ಮಾಡಬಲ್ಲಂಥವರನ್ನು ಕಳುಹಿಸಿಕೊಟ್ಟು ಸರ್ಕಾರ ಕೆಲಸವನ್ನು ಸರಳಗೊಳಿಸಬೇಡವೆ? ಸೈಬರ್ ಕೇಂದ್ರಗಳಲ್ಲಿ 'ಸಿಕ್ಕಿದಾಗ ಬಾಚಿಕೋ' ಎಂಬ ತತ್ವದಲ್ಲಿ ಅಮಾಯಕರಿಂದ ಮನಬಂದಂತೆ ಹಣ ಸುಲಿಯಲಾಗುತ್ತಿದೆ.

ತೆರಿಗೆ ವಂಚನೆಯನ್ನು ತಡೆಯುವಲ್ಲಿ ಇಂತಹ ವಿಕ್ರಮವನ್ನು ಸಾಧಿಸಲು ಹೊರಟವರು ಅಮಾಯಕ ಜನರಿಗೆ ಅದನ್ನು ಮಾಡಿಸಲು ದಂಡದ ಬೆದರಿಕೆ ಒಡ್ಡುವುದು ಔಚಿತ್ಯಪೂರ್ಣವಾದುದಲ್ಲ. ತಿಂಗಳಿಗೆ ಒಂದು ಸಾವಿರ ಮಾಸಾಶನ ಪಡೆಯುವ ವೃದ್ಧರಿಗೆ ಅದೆಲ್ಲವನ್ನೂ ಈ ಜೋಡಣೆಯ ದಕ್ಷಿಣೆಯಾಗಿ ಕೊಡಬೇಕಿದ್ದರೆ ಅವರ ತಿಂಗಳ ಅನ್ನಕ್ಕೇನು ದಾರಿಯಿದೆ?

ತಡವಾಗಿಯಾದರೂ ಸರ್ಕಾರ ಈ ವಿಚಾರವಾಗಿ ಎಚ್ಚೆತ್ತುಕೊಳ್ಳುವ ಅಗತ್ಯವಿದೆ. ಇನ್ನೂ ಈ ಜೋಡಣೆ ಮಾಡಿಸದೆ ಉಳಿದುಕೊಂಡವರು ಬಹುಮಂದಿ ರೈತರು, ನಿರಕ್ಷರಿಗಳು, ಗ್ರಾಮೀಣ ಭಾಗದ ನಿವಾಸಿಗಳು. ಸರ್ಕಾರದ ಗಡುವು ದಾಟಿದರೂ ಈ ಕರ್ತವ್ಯದ ಅರಿವು ಅವರಿಗೆ ಇನ್ನೂ ಮೂಡುವುದಿಲ್ಲ ಎಂಬುದು ಖಂಡಿತ. ವಿದ್ಯಾವಂತರಾದ ಯುವಕರ ನೆರವು ಪಡೆದು, ಮನೆ ಭೇಟಿಗೆ ಕಳುಹಿಸಿ ಸುಲಭವಾಗಿ ಈ ಕೆಲಸ ಮಾಡಿಸಿದರೆ ಜನರಿಗೂ ನಿರುಮ್ಮಳ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರಬಹುದು.

ವಾಚಕರ ವಾಣಿ

ಅಕ್ರಮಕ್ಕೆ ಎಚ್ಚರಿಕೆಯೋ, ಅಥವಾ...?

2018ರಲ್ಲಿ ನಡೆದ ಚುನಾವಣೆಯಲ್ಲಿ ಅಕ್ರಮ ಎಸಗಿರುವುದಾಗಿ ಚುನಾಯಿತ ಅಭ್ಯರ್ಥಿಯೊಬ್ಬರ ವಿರುದ್ಧ ಸೋತ ಅಭ್ಯರ್ಥಿ ನ್ಯಾಯಾಲಯದ ಮೆಟ್ಟಿಲು ಏರಿದ್ದರಿಂದ, ಅದರ ವಿಚಾರಣೆ ನಡೆದು ಈಗ ಅಕ್ರಮ ಸಾಬೀತಾಗಿದೆ. ನ್ಯಾಯಾಲಯವು ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಿ ಆದೇಶ ನೀಡಿದೆ. ಆದರೆ ಅಕ್ರಮ ಎಸಗಿ ಈಗ ಅನರ್ಹಗೊಂಡರೇನಂತೆ? ಶಾಸಕ ಸ್ಥಾನದ ಫಲಾನುಭವಿಯಾಗಿ ಅವಧಿ ಪೂರೈಸಿದ್ದಾಗಿದೆ!

ಇದು, ಅಕ್ರಮ ಎಸಗುವವರಿಗೆ ಒಂದು ಎಚ್ಚರಿಕೆ ಆಗುತ್ತದೋ ಅಥವಾ ಅಕ್ರಮ ಎಸಗಿದರೂ ಚುನಾಯಿತರಾದರೆ ಅವಧಿಪೂರ್ಣ ಶಾಸಕರಾಗಿರಬಹುದು ಎಂದು ಅಕ್ರಮಕ್ಕೆ ಮುಂದಾಗುವ ಭಂಡ ಧೈರ್ಯ ತುಂಬುವುದೋ ಕಾದು ನೋಡಬೇಕು!

ಸತ್ಯಬೋಧ, ಬೆಂಗಳೂರು

ರಣಹದ್ದುಗಳ ಆವಾಸಸ್ಥಾನಕ್ಕೆ ಧಕ್ಕೆಯಾಗದಿರಲಿ

ರಾಮನಗರದ ರಾಮದೇವರ ಬೆಟ್ಟದಲ್ಲಿ, ಅಯೋಧ್ಯೆ ಮಾದರಿಯಲ್ಲಿ ರಾಮ ಮಂದಿರ ನಿರ್ಮಿಸುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಈ ಬೆಟ್ಟವು ಅಳಿವಿನಂಚಿನಲ್ಲಿರುವ ಉದ್ದ ಕೊಕ್ಕಿನ ರಣಹದ್ದುಗಳ ಆವಾಸಸ್ಥಾನವಾಗಿದೆ. ಕೇಂದ್ರ ಸರ್ಕಾರವು ಈ ಬೆಟ್ಟವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿದೆ. ಅಲ್ಲದೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಿರುವುದರಿಂದ ವನ್ಯಜೀವಿಗಳಿಗೆ ಆಶ್ರಯತಾಣವಾಗಿದೆ.

ಇಲ್ಲಿ ಮಂದಿರ ನಿರ್ಮಾಣ ಮಾಡಿದರೆ, ಇರುವ ಬೆರಳೆಣಿಕೆಯಷ್ಟು ಹದ್ದುಗಳು ಕೂಡ ವಲಸೆ ಹೋಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ವನ್ಯಜೀವಿಗಳ ಸಂರಕ್ಷಣೆಯ ಕಡೆ ಹೆಚ್ಚು ಆದ್ಯತೆ ನೀಡುವುದು ಸರ್ಕಾರದ ಕರ್ತವ್ಯ. ಇದು ಅಗತ್ಯ ಕೂಡ ಹೌದು.

ಮಲ್ಲಿಕಾರ್ಜುನ, ಕಲಬುರಗಿ

ರೋಗಿಗೆ ಸ್ವಾತಂತ್ರ್ಯ ನೀಡಿದರೆ...

ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರವು ಔಷಧಗಳ ಬೆಲೆಯನ್ನು ಏರಿಸಿರುವುದಕ್ಕೆ ತಾ.ಸಿ.ತಿಮ್ಮಯ್ಯ ಅವರ ಆಕ್ಷೇಪ, ಆಕ್ರೋಶ, ಹತಾಶೆ (ವಾ.ವಾ., ಏ. 1) ಅರ್ಥವಾಗುವಂತಹುದೆ. ಜನಸಾಮಾನ್ಯರ ಇಂತಹ ಅಸಹಾಯಕ ಪರಿಸ್ಥಿತಿಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸದಾ ಕುರುಡು ಮತ್ತು ಕಿವುಡು. ಬೆಲೆ ಏರಿಕೆಯ ಬಿಸಿ ನಮ್ಮಂತೆ ಅವರಿಗೂ ತಾಕುವಂತಿದ್ದರೆ, ಇಂತಹ ಕೆಟ್ಟ ಪರಿಸ್ಥಿತಿ ಖಂಡಿತ ಉದ್ಭವಿಸುತ್ತಿರಲಿಲ್ಲ. ಆದರೆ ತಿಮ್ಮಯ್ಯನವರು, ವೈದ್ಯರ ಮುಂದೆ ಕುಳಿತುಕೊಳ್ಳುವ ರೋಗಿಗಳಿಗೆ ಯಾವ ಸ್ವಾತಂತ್ರ್ಯ ಇದೆ ಎಂದು ಪ್ರಶ್ನಿಸಿದ್ದಾರೆ. ಇವರು ರೋಗಿಗಳಿಗೆ ಯಾವ ರೀತಿಯ ಸ್ವಾತಂತ್ರ್ಯ ಬಯಸುತ್ತಿದ್ದಾರೆ? ತಪಾಸಣೆ ಮತ್ತು ರೋಗಸ್ವರೂಪವನ್ನು ಅರಿಯಲು ಮಾಡಬೇಕಾದ ಪರೀಕ್ಷೆಗಳ ವಿಚಾರದಲ್ಲಿ ಅವರಿಗೆ ಸ್ವಾತಂತ್ರ್ಯ ಬೇಕು ಎಂದು ಬಯಸುತ್ತಿದ್ದಾರೋ ಅಥವಾ ಏನೂ ಮಾಡದೆ ಸುಮ್ಮನೆ ಔಷಧ ನೀಡಬೇಕಂತಲೋ ಸ್ಪಷ್ಟಪಡಿಸಿದ್ದರೆ ಚೆನ್ನಿತ್ತು. ಹಾಗಿದ್ದರೆ ವಕೀಲರ ಮುಂದೆ ಕೂರುವ ಕಕ್ಷಿದಾರನಿಗೆ, ನ್ಯಾಯಾಧೀಶರ ಮುಂದೆ, ಪೊಲೀಸರ ಮುಂದೆ ನಿಂತ ಆರೋಪಿಗೆ ಯಾವ ಸ್ವಾತಂತ್ರ್ಯ ಇದೆ? ಇದ್ದರೂ ಎಷ್ಟರಮಟ್ಟಿಗೆ ಅದನ್ನು ಚಲಾಯಿಸಬಹುದಾಗಿದೆ?

ರೋಗಿಗೆ ತಾನೇ ಔಷಧ ತೆಗೆದುಕೊಳ್ಳುವ, ಪರೀಕ್ಷೆ ಮಾಡಿಸಿಕೊಳ್ಳುವ, ಎಲ್ಲ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ ನೀಡಿದಲ್ಲಿ ಆಗುವ ಅನಾಹುತದ ಅರಿವು ತಿಮ್ಮಯ್ಯ ಅವರಿಗೆ ಇದೆಯೇ? ಅದಕ್ಕೆ ಯಾರು ಹೊಣೆ? ಈಗಾಗಲೇ ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ ಎಂಬಂತೆ, ರೋಗಿಗಳ ಎಲ್ಲ ಸಂಕಷ್ಟಗಳಿಗೆ ವೈದ್ಯರನ್ನೇ ಹೊಣೆ ಮಾಡಲಾಗುತ್ತಿದೆ. ಅದರ ಫಲವಾಗಿ ಬಡಪಾಯಿ ವೈದ್ಯರು ಹಲ್ಲೆ, ದಾಳಿ, ಪ್ರಾಣಹಾನಿ, ಆಸ್ತಿಪಾಸ್ತಿ ಹಾನಿ, ಕೋರ್ಟು, ದಂಡದಂತಹವುಗಳನ್ನು ಅನುಭವಿಸಬೇಕಾಗಿ ಬಂದಿದೆ. ಇನ್ನಾದರೂ ವೈದ್ಯರು ಹಾಗೂ ವೈದ್ಯವೃತ್ತಿಯನ್ನು ಅನವಶ್ಯಕವಾಗಿ ಹಳಿಯುವುದು, ಕೀಳಾಗಿ ಕಾಣುವುದು, ಪೂರ್ವಗ್ರಹಪೀಡಿತರಾಗಿ ನೋಡುವುದನ್ನು ಬಿಡಬೇಕು.

ಡಾ. ಎಸ್.ಕೆ.ನಿತ್ಯಾನಂದ, ಬೆಂಗಳೂರು

ಅನಾಹುತಕಾರಿ...

ಸತೀಶ್ ಜಿ.ಕೆ. ತೀರ್ಥಹಳ್ಳಿ ಅವರ 'ಮೌಲ್ಯ ಪ್ರಜ್ಞೆ...' (ಪ್ರ.ವಾ., ಮಾರ್ಚ್ 18) ಲೇಖನ ಸಮಯೋಚಿತವಾಗಿದೆ. ಬಹುಪಾಲು ಜನ ಈಗಲೂ ನ್ಯಾಯಯುತ ದುಡಿಮೆಯಿಂದ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಕಳ್ಳತನ, ಮೋಸ, ವಂಚನೆ ಮಾಡುವವರನ್ನು, ಪರಿಸರ ಹಾಳು ಮಾಡುವವರನ್ನು ಸ್ಥಳೀಯವಾಗಿಯೇ ಶಿಕ್ಷಿಸಿ ಅವರನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಹಿಂದಿನವರು ಮಾಡುತ್ತಿದ್ದರು. ಈಗ ಅದಕ್ಕೆ ತದ್ವಿರುದ್ಧ ನಡೆ ಕಾಣಸಿಗುತ್ತದೆ. ಭ್ರಷ್ಟರನ್ನು, ಜೈಲಿಗೆ ಹೋಗಿ ಬಂದವರನ್ನು, ಜಾಮೀನಿನ ಮೇಲೆ ಬಿಡುಗಡೆಯಾದವರನ್ನು, ಶಾಂತಿ ಕದಡುವವರನ್ನು ಸನ್ಮಾನ ಮಾಡುವಂತಹ ಸ್ಥಿತಿ ತಲೆದೋರಿದೆ. ಇದು ಅನಾಹುತಕಾರಿ.

ಡಾ. ಎಸ್.ಡಿ. ರಂಗಸ್ವಾಮಿ, ಹಾಸನ

ಅಗತ್ಯ ಔಷಧಗಳ ದರ ಏರಿಕೆ ಕಳವಳಕಾರಿ

ಅಗತ್ಯ ಔಷಧಗಳ ಬೆಲೆ ಹೆಚ್ಚಳ ನಿಜಕ್ಕೂ ಆಘಾತಕಾರಿ. ಈ ಬಾರಿ ಔಷಧಗಳ ಬೆಲೆ ದಾಖಲೆ ಪ್ರಮಾಣದಲ್ಲಿ (ಶೇ 12ಕ್ಕಿಂತ ಅಧಿಕ) ಹೆಚ್ಚಳವನ್ನು ಕಂಡಿರುವುದು ರೋಗಿಗಳು ಹಾಗೂ ಅವರ ಕುಟುಂಬಗಳಿಗೆ ಆರ್ಥಿಕವಾಗಿ ಬಹುದೊಡ್ಡ ಹೊರೆಯಾಗಿ ಪರಿಣಮಿಸಿದೆ. ರಷ್ಯಾ- ಉಕ್ರೇನ್ ಯುದ್ಧದ ಪರಿಣಾಮವಾಗಿ ಈ ಹಿಂದೆ ಅಗತ್ಯ ಔಷಧಗಳ ದರದ ಗರಿಷ್ಠ ಏರಿಕೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಲಾಗಿತ್ತು. ಆದರೀಗ, ಹಣದುಬ್ಬರ ತಕ್ಕಮಟ್ಟಿಗೆ ಹತೋಟಿಯಲ್ಲಿದ್ದರೂ ಔಷಧದ ಬೆಲೆಗಳನ್ನು ಇಷ್ಟೊಂದು ಪ್ರಮಾಣದಲ್ಲಿ ಏರಿಕೆ ಮಾಡಲು ಏಕೆ ಅವಕಾಶ ನೀಡಲಾಗಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಅಗತ್ಯ ಔಷಧಗಳ ಪಟ್ಟಿಯಲ್ಲಿರುವ ಪ್ರಮುಖ ಔಷಧಗಳ ಪೈಕಿ ಕೆಲವನ್ನು ಕೋವಿಡ್ ಚಿಕಿತ್ಸೆಗೆ ಬಳಸಲಾಗುತ್ತಿದೆ. ಕೋವಿಡ್ ಪ್ರಕರಣಗಳು ಮತ್ತೆ ಕಾಣಿಸಿಕೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲೇ ಇವುಗಳ ಬೆಲೆ ಏರಿಕೆ ಯಾಗುತ್ತಿರುವುದು ಕಳವಳ ಹೆಚ್ಚಿಸಿದೆ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹತ್ತು ತಿಂಗಳಿಂದಲೂ ಬದಲಾಗದ ಪೆಟ್ರೋಲ್, ಡೀಸೆಲ್ ಬೆಲೆ

ಕಚ್ಚಾ ತೈಲ ಶೇ 33ರಷ್ಟು ಅಗ್ಗ
ಗ್ರಾಹಕನಿಗೆ ಸಿಗದ ಲಾಭ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ, ಕಳೆದ ಹತ್ತು ತಿಂಗಳಲ್ಲಿ ಕಚ್ಚಾತೈಲದ ಬೆಲೆ ಶೇ 33ರಷ್ಟು ಇಳಿಕೆಯಾಗಿದೆ. ಆದರೆ, ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟ ಬೆಲೆಯಲ್ಲಿ ಸ್ವಲ್ಪವೂ ಇಳಿಕೆಯಾಗಿಲ್ಲ. ತೈಲ ಕಂಪನಿಗಳ ನಷ್ಟವನ್ನು ತುಂಬಿಕೊಳ್ಳಲು ಬೆಲೆಯಲ್ಲಿ ಇಳಿಕೆ ಮಾಡುತ್ತಿಲ್ಲ ಎಂದು ಕೇಂದ್ರ ಸರ್ಕಾರವು ಹೇಳುತ್ತಿದೆ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆ ಬೆಲೆಯ ಆಧಾರದಲ್ಲಿ ಬೆಲೆ ಏರಿಳಿತವಾಗಿದ್ದರೆ, ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ ₹70–₹72 ಮಾತ್ರ ತೆರಬೇಕಿತ್ತು. ಪ್ರತಿ ಲೀಟರ್ ಡೀಸೆಲ್‌ಗೆ ₹60ರಿಂದ ₹62.06 ಇರಬೇಕಿತ್ತು. ಬದಲಿಗೆ ನಾವೀಗ, ಪೆಟ್ರೋಲ್‌ಗೆ ₹101.94 ಮತ್ತು ಡೀಸೆಲ್‌ಗೆ ₹87.89 ಪಾವತಿಸುತ್ತಿದ್ದೇವೆ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ 2010ರವರೆಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕೇಂದ್ರ ಸರ್ಕಾರವೇ ನಿಗದಿ ಮಾಡುತ್ತಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಳಿತವಾದರೂ, ಚಿಲ್ಲರೆ ಮಾರಾಟ ಬೆಲೆಯಲ್ಲಿ ಯಾವುದೇ ಏರಿಳಿತವಾಗುತ್ತಿರಲಿಲ್ಲ. 2010ರಲ್ಲಿ ಈ ನೀತಿಯನ್ನು ಕೇಂದ್ರದ ಯುಪಿಎ ಸರ್ಕಾರವು ತೆಗೆದುಹಾಕಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆಗುವ ಏರಿಳಿತದ ಆಧಾರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಬೆಲೆಯನ್ನು ಪ್ರತಿ 15 ದಿನಗಳಿಗೆ ಒಮ್ಮೆ ಬದಲಿಸುವ ಅಧಿಕಾರವನ್ನು ತೈಲ ಸಂಸ್ಕರಣ ಕಂಪನಿಗಳಿಗೆ ನೀಡಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ಈ ನೀತಿಯನ್ನು 2017ರಲ್ಲಿ ಬದಲಿಸಿತು. ಜಾಗತಿಕ ಮಾರುಕಟ್ಟೆಯಲ್ಲಿ ಆಗುವ ಬೆಲೆಯ ಏರಿಳಿತದ ಆಧಾರದಲ್ಲಿ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿದಿನವೂ ಬದಲಿಸುವ ಅಧಿಕಾರವನ್ನು ತೈಲ ಕಂಪನಿಗಳಿಗೆ ನೀಡಿತು. ಆದರೆ, ಇದು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದೇ ಇಲ್ಲ. ರಾಜ್ಯಗಳ ವಿಧಾನಸಭಾ ಚುನಾವಣೆ ನಡೆಯುವಾಗ ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟ ಬೆಲೆಯನ್ನು ನಿಯಂತ್ರಿಸಲಾಗುತ್ತಿದೆ. 2022ರ ಮೇ 22ರ ನಂತರ ಈವರೆಗೆ ಚಿಲ್ಲರೆ ಮಾರಾಟ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಕೋವಿಡ್ ಲಾಕ್‌ಡೌನ್‌ನ ಕಾರಣದಿಂದ 2020ರಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲಕ್ಕೆ ಬೇಡಿಕೆ ವಿಪರೀತ ಪ್ರಮಾಣದಲ್ಲಿ ಕುಸಿದಿತ್ತು. ಪರಿಣಾಮವಾಗಿ ಬೆಲೆಯೂ ಕುಸಿದಿತ್ತು. ಆಗ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಲಿಲ್ಲ. ಏಕೆಂದರೆ ಕಚ್ಚಾತೈಲದ ಬೆಲೆ ಕುಸಿದಂತೆ, ಕೇಂದ್ರ ಸರ್ಕಾರವು ತೆರಿಗೆ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಯಿತು. ಹೀಗಾಗಿ ಚಿಲ್ಲರೆ ಮಾರಾಟ ಬೆಲೆಯಲ್ಲಿ ಗಣನೀಯ ಬದಲಾವಣೆಯಾಗಿರಲಿಲ್ಲ. ಆದರೆ, ನಂತರದ ತಿಂಗಳುಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗುತ್ತಾ ಹೋಯಿತು. ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಏರಿಕೆ ಮಾಡಿದ್ದ ತೆರಿಗೆ ಪ್ರಮಾಣವನ್ನು ಇಳಿಸಲೇ ಇಲ್ಲ. ಪರಿಣಾಮವಾಗಿ ಎರಡೂ ಇಂಧನಗಳ ಚಿಲ್ಲರೆ ಮಾರಾಟ ಬೆಲೆ ವಿಪರೀತ ಎನ್ನಿಸುವಷ್ಟು ಏರಿಕೆಯಾಯಿತು.

ಈ ಮಧ್ಯೆ 2020 ಮತ್ತು 2021ರಲ್ಲಿ ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಯಿತು. ಈ ಚುನಾವಣೆಗಳು ನಡೆದ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗುತ್ತಿದ್ದರೂ, ಚಿಲ್ಲರೆ ಮಾರಾಟ ಬೆಲೆಯಲ್ಲಿ ಏರಿಕೆಯಾಗಲಿಲ್ಲ. ಸತತವಾಗಿ ಹಲವು ತಿಂಗಳು ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲಾಯಿತು.

2022ರ ಆರಂಭದಲ್ಲೇ ಉಕ್ರೇನ್ ಮತ್ತು ರಷ್ಯಾ ಯುದ್ಧದ ನಂತರ, ಪೂರೈಕೆ ಸಮಸ್ಯೆಯಿಂದಾಗಿ ಕಚ್ಚಾತೈಲದ ಬೆಲೆ ಏರಿಕೆಯಾಗಿತ್ತು. ಆದರೆ, ರಿಯಾಯಿತಿ ದರದಲ್ಲಿ ರಷ್ಯಾದೊಂದಿಗೆ ಕಚ್ಚಾತೈಲ ಖರೀದಿಸುವ ಒಪ್ಪಂದವನ್ನು ಕೇಂದ್ರ ಸರ್ಕಾರ ಮಾಡಿಕೊಂಡಿತ್ತು. ಹೀಗಾಗಿ ಭಾರತವು ಖರೀದಿಸಿದ ಕಚ್ಚಾತೈಲದ ಬೆಲೆ ಇಳಿಕೆಯಾಗುತ್ತಲೇ ಹೊಯಿತು. ಚಿಲ್ಲರೆ ಮಾರಾಟ ಬೆಲೆ ಮಾತ್ರ ಇಳಿಕೆಯಾಗಿಲ್ಲ. 2022ರ ಮೇ 22ರಂದು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಕ್ರಮವಾಗಿ ₹8 ಮತ್ತು ₹6ರಷ್ಟನ್ನು ಸರ್ಕಾರ ಕಡಿತ ಮಾಡಿತು. ಅನಂತರ ಕಚ್ಚಾತೈಲದ ಬೆಲೆ ಮತ್ತಷ್ಟು ಇಳಿಕೆಯಾಯಿತು. 10 ತಿಂಗಳ ಅವಧಿಯಲ್ಲಿ ಶೇ 33ರಷ್ಟು ಇಳಿಕೆಯಾಯಿತು. ಆದರೆ ಬೆಂಗಳೂರಿನಲ್ಲಿ 10 ತಿಂಗಳ ಹಿಂದೆ ಪ್ರತಿ ಲೀಟರ್ ಪೆಟ್ರೋಲ್ ಬೆಲೆ ₹101.94 ಮತ್ತು ಪ್ರತಿ ಲೀಟರ್ ಡೀಸೆಲ್ ಬೆಲೆ ₹87.84 ಇತ್ತು. ಈಗಲೂ ಅಷ್ಟೇ ಇದೆ.



- 2022ರ ಮೇ ತಿಂಗಳಲ್ಲಿ ಭಾರತ ಖರೀದಿಸಿದ್ದ ಪ್ರತೀ ಬ್ಯಾರಲ್ ಕಚ್ಚಾ ತೈಲದ ಬೆಲೆ 109.51 ಅಮೆರಿಕನ್ ಡಾಲರ್ ಇತ್ತು. ಅದೇ ತಿಂಗಳು ಅಮೆರಿಕದ ಡಾಲರ್ ವಿನಿಮಯ ದರದಲ್ಲಿ ಭಾರತದ ರೂಪಾಯಿ ಮೌಲ್ಯ ₹77.69 ಇತ್ತು. ಹೀಗಾಗಿ ಪ್ರತೀ ಬ್ಯಾಲರ್‌ಗೆ ₹8,507 ದರ ತಗುಲಿತ್ತು
- ಆದರೆ, ಜೂನ್ ತಿಂಗಳಲ್ಲಿ ಪ್ರತೀ ಬ್ಯಾಲರ್ ಕಚ್ಚಾ ತೈಲದ ಬೆಲೆ 116 ಡಾಲರ್‌ಗೆ ಏರಿಕೆಯಾಯಿತು. ಡಾಲರ್ ಎದುರು ರೂಪಾಯಿ ಮೌಲ್ಯವು ₹78ಕ್ಕೆ ಹೆಚ್ಚಳವಾಗಿತ್ತು. ಹೀಗಾಗಿ ಅಂದು ಬ್ಯಾರಲ್‌ಗೆ ₹9,048 ವ್ಯಯಿಸಬೇಕಾಗಿತ್ತು. ಇದು, ಆ ಒಂದು ವರ್ಷದಲ್ಲಿ ಭಾರತವು ಪ್ರತೀ ಬ್ಯಾಲರ್ ಖರೀದಿಸಲು ನೀಡಿದ್ದ ಅತಿಹೆಚ್ಚಿನ ಮೊತ್ತವಾಗಿತ್ತು
- ನಂತರದ ತಿಂಗಳಲ್ಲಿ ಬ್ಯಾರಲ್ ಬೆಲೆ ಇಳಿಕೆಯಾಯಿತು. ನೂರು ಡಾಲರ್‌ನ ಗಡಿಯಲ್ಲಿದ್ದ ಪ್ರತೀ ಬ್ಯಾರಲ್ ಕಚ್ಚಾತೈಲದ ದರವು 2022ರ ಆಗಸ್ಟ್ ತಿಂಗಳಲ್ಲಿ 97.4 ಡಾಲರ್‌ಗೆ ಕುಸಿಯಿತು. ಆಗ ಡಾಲರ್ ಎದುರು ರೂಪಾಯಿ ವಿನಿಮಯ ದರದಲ್ಲಿ ಭಾರತವು ಪ್ರತೀ ಬ್ಯಾರಲ್ ಕಚ್ಚಾತೈಲಕ್ಕೆ ₹7,747 ಪಾವತಿಸಿತ್ತು
- ನವೆಂಬರ್ ಹೊತ್ತಿಗೆ ತೈಲ ಬೆಲೆ 87.55 ಡಾಲರ್‌ಗೆ ಕುಸಿಯಿತು. ರೂಪಾಯಿ ಲೆಕ್ಕದಲ್ಲಿ ಬ್ಯಾರಲ್ ದರ ₹7,611 ಇತ್ತು
- ವರ್ಷದ ಕೊನೆಯ ತಿಂಗಳ ಹೊತ್ತಿಗೆ (ಡಿಸೆಂಬರ್ 2022) ಮತ್ತೂ ಕುಸಿದ ಬ್ಯಾರಲ್ ದರ 78.1 ದಾಖಲಿಸಿತ್ತು. ಆಗ ಭಾರತ ಪಾವತಿಸಿದ್ದ ದರ ₹6,416
- ನಂತರದ ತಿಂಗಳುಗಳಲ್ಲಿ ಏರಿಳಿತದ ಬಳಿಕ, 2023ರ ಮಾರ್ಚ್‌ನಲ್ಲಿ 77.60 ಡಾಲರ್‌ಗೆ ಪ್ರತೀ ಬ್ಯಾರಲ್ ತೈಲ ಖರೀದಿಸಲಾಗಿದೆ. ರೂಪಾಯಿ ಲೆಕ್ಕದಲ್ಲಿ ₹6,377ರಂತೆ ಪ್ರತಿ ಬ್ಯಾರಲ್ ಅನ್ನು ಖರೀದಿಸಲಾಗಿದೆ

ತೆರಿಗೆಯದ್ದೇ ಹೊರೆ

ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಸರ್ಕಾರವು ಹಲವು ಸ್ವರೂಪದ ತೆರಿಗೆಗಳನ್ನು ವಿಧಿಸುತ್ತಿದೆ. ಈ ತೆರಿಗೆಗಳ ಮೇಲೆ ರಾಜ್ಯ ಸರ್ಕಾರಗಳೂ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ವಿಧಿಸುತ್ತವೆ. ಹೀಗಾಗಿ ಎರಡೂ ಇಂಧನಗಳ ಚಿಲ್ಲರೆ ಮಾರಾಟ ಬೆಲೆಯಲ್ಲಿ ತೆರಿಗೆಗಳ ಹೊರೆಯೇ ಹೆಚ್ಚು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ವಿಧಿಸುವ ತೆರಿಗೆಯ ವಿವರ ಇಂತಿದೆ

ಕೇಂದ್ರ ಸರ್ಕಾರವು ವಿಧಿಸುತ್ತಿರುವ ಹಲವು ಸ್ವರೂಪದ ತೆರಿಗೆಗಳು
ಮೂಲ ಬೆಲೆ
ರಾಜ್ಯ ಸರ್ಕಾರವು ವಿಧಿಸುವ ವ್ಯಾಟ್



₹26.42 ರಾಜ್ಯ ಸರ್ಕಾರವು ವಿಧಿಸುವ ವ್ಯಾಟ್ (ಶೇ 25.92ರಂತೆ)
₹33.09 ಪ್ರತಿ ಲೀಟರ್ ಪೆಟ್ರೋಲ್‌ನ ಮೂಲ ಬೆಲೆ (ಶೇ 2.50ರಷ್ಟು ಆಮದು ಸುಂಕ, ಸಂಸ್ಕರಣ ಶುಲ್ಕ, ಸಾಗಣೆ ಶುಲ್ಕ ಒಳಗೊಂಡಿದೆ)
₹2.63 ಡೀಲರ್ ಕಮಿಷನ್
₹19.90 ಹೆಚ್ಚುವರಿ ಆಮದು ಸುಂಕ
₹1.40 ಮೂಲ ಎಕ್ಸೈಸ್ ಸುಂಕ
₹11 ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ
₹2.50 ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್
₹5 ರಸ್ತೆ ಮತ್ತು ಮೂಲಸೌಕರ್ಯ ಸೆಸ್



₹12.59 ರಾಜ್ಯ ಸರ್ಕಾರವು ವಿಧಿಸುವ ವ್ಯಾಟ್ (ಶೇ 14.34ರಂತೆ)
₹38.65 ಪ್ರತಿ ಲೀಟರ್ ಪೆಟ್ರೋಲ್‌ನ ಮೂಲ ಬೆಲೆ (ಶೇ 2.50ರಷ್ಟು ಆಮದು ಸುಂಕ, ಸಂಸ್ಕರಣ ಶುಲ್ಕ, ಸಾಗಣೆ ಶುಲ್ಕ ಒಳಗೊಂಡಿದೆ)
₹2 ಡೀಲರ್ ಕಮಿಷನ್
₹18.8 ಹೆಚ್ಚುವರಿ ಆಮದು ಸುಂಕ
₹1.80 ಮೂಲ ಎಕ್ಸೈಸ್ ಸುಂಕ
₹8 ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ
₹4 ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್
₹2 ರಸ್ತೆ ಮತ್ತು ಮೂಲಸೌಕರ್ಯ ಸೆಸ್

* ಕೇಂದ್ರ ಸರ್ಕಾರದ ಪಿಪಿಎಸಿ ಮಾಹಿತಿ

ರಷ್ಯಾದ ಕಚ್ಚಾತೈಲದ ಬೆಲೆಯೆಷ್ಟು?



ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲಕ್ಕೆ ಇರುವ ಬೆಲೆಗಿಂತ ರಿಯಾಯಿತಿ ದರದಲ್ಲಿ ಭಾರತಕ್ಕೆ ಕಚ್ಚಾತೈಲವನ್ನು ರಷ್ಯಾ ಪೂರೈಸುತ್ತಿದೆ. ರಷ್ಯಾ ಮೇಲಿರುವ ನಿರ್ಬಂಧಗಳ ಕಾರಣದಿಂದಾಗಿ ಈ ವಹಿವಾಟು ರೂಪಾಯಿ ಮತ್ತು ರೂಬಲ್‌ನಲ್ಲಿಯೇ ನಡೆಯುತ್ತಿದೆ. ಆದರೆ, ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿರುವ ಪ್ರತಿ ಬ್ಯಾರಲ್ ಕಚ್ಚಾತೈಲಕ್ಕೆ ಪಾವತಿಸುತ್ತಿರುವ ಮೊತ್ತವೆಷ್ಟು ಎಂಬುದನ್ನು ಸರ್ಕಾರವು ಬಹಿರಂಗಪಡಿಸಿಲ್ಲ. ಈ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟ ಬೆಲೆಯಲ್ಲಿ ಇಳಿಕೆಯಾಗದೇ ಇರುವ ಕಾರಣ, ರಷ್ಯಾದಿಂದ ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವ ಕಚ್ಚಾತೈಲದ ಲಾಭವು ಗ್ರಾಹಕರಿಗೆ ಸಿಗುತ್ತಿಲ್ಲ.

ಉಕ್ರೇನ್ ಮತ್ತು ರಷ್ಯಾ ಯುದ್ಧದ ನಂತರ, ರಷ್ಯಾದಿಂದ ಭಾರತವು ಖರೀದಿಸುತ್ತಿರುವ ಕಚ್ಚಾತೈಲದಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದೆ. 2021–22ರಲ್ಲಿ ಭಾರತವು ರಷ್ಯಾದಿಂದ ಒಟ್ಟು 43.16 ಲಕ್ಷ ಟನ್‌ಗಳಷ್ಟು ಕಚ್ಚಾತೈಲವನ್ನು ಆಮದು ಮಾಡಿಕೊಂಡಿತ್ತು. ಆದರೆ ರಷ್ಯಾದಿಂದ ಕಚ್ಚಾತೈಲದ ಆಮದು ಪ್ರಮಾಣವು 2022–23ನೇ ಸಾಲಿನ ಆರ್ಥಿಕ ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ ಒಟ್ಟು 3.82 ಕೋಟಿ ಟನ್‌ಗಳಿಗೆ ಏರಿಕೆಯಾಗಿದೆ. ಒಂಬತ್ತೇ ತಿಂಗಳಲ್ಲಿ ರಷ್ಯಾದಿಂದ ಕಚ್ಚಾತೈಲದ ಆಮದು ಪ್ರಮಾಣ ಶೇ 785ರಷ್ಟು ಏರಿಕೆ ಕಂಡಿದೆ.

ಆಧಾರ: ಕೇಂದ್ರ ಪೆಟ್ರೋಲಿಯಂ ಸಚಿವಾಲಯದ 'ಪೆಟ್ರೋಲಿಯಂ ಬೆಲೆ ವಿಶ್ಲೇಷಣಾ ಘಟಕ'ದ (ಪಿಪಿಎಸಿ) ವರದಿಗಳು, ವಾಣಿಜ್ಯ ಸಚಿವಾಲಯದ ಆಮದು–ರಫ್ತು ದತ್ತಾಂಶ ಬ್ಯಾಂಕ್ ವರದಿಗಳು, ಪಿಟಿಐ

ಟ್ರೇಲರ್‌ನಲ್ಲಿ ಬಂದ ಶಿವಾಜಿ ಸುರತ್ಕಲ್ –2

ರಮೇಶ್ ಅರವಿಂದ್, ಮೇಘನಾ ಗಾಂವ್ಕರ್, ರಾಧಿಕಾ ನಾರಾಯಣ್, ಸಂಗೀತಾ ಶೃಂಗೇರಿ

ರಮೇಶ್ ಅರವಿಂದ್ ನಟನೆಯ 'ಶಿವಾಜಿ ಸುರತ್ಕಲ್ 2' ಟ್ರೇಲರ್‌ನಲ್ಲಿ ಮೂಡಿಬಂದಿದೆ. ಚಿತ್ರದ ಟ್ರೇಲರ್ ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿದೆ. ಆಕಾಶ್ ಶ್ರೀವತ್ಸ ನಿರ್ದೇಶಿಸಿರುವ ಈ ಚಿತ್ರವನ್ನು ರೇಖಾ ಕೆ.ಎನ್. ಹಾಗೂ ಅನೂಪ್ ಗೌಡ ನಿರ್ಮಿಸಿದ್ದಾರೆ.

ಲಾಕ್‌ಡೌನ್‌ನಲ್ಲಿ ಹುಟ್ಟಿದ ಕಥೆ: 'ಶಿವಾಜಿ ಸುರತ್ಕಲ್ 2' ಲಾಕ್ ಡೌನ್ ಸಮಯದಲ್ಲಿ ಹುಟ್ಟಿದ ಕಥೆ. ನಾನು ಹಾಗೂ ರಮೇಶ್ ಅರವಿಂದ್ ವಾಟ್ಸ್‌ಆ್ಯಪ್ ಮೂಲಕ ಎರಡನೇ ಭಾಗದ ಕಥೆಯನ್ನು ಚರ್ಚಿಸಿದೆವು. ಎಲ್ಲರಿಗೂ ಲಾಕ್‌ಡೌನ್‌ನಿಂದ ತೊಂದರೆ ಆಯಿತು. ಆದರೆ, ನಮಗೆ ಮಾತ್ರ ಈ ಚಿತ್ರದ ಕಥೆ ಬರೆಯಲು ಅನುಕೂಲವಾಯಿತು. ನಮ್ಮ ತಂಡದ ಸಹಕಾರದಿಂದ ಚಿತ್ರ ಉತ್ತಮವಾಗಿ ಮೂಡಿಬಂದಿದೆ. ಇದೇ ಏಪ್ರಿಲ್ 14ರಂದು ನಮ್ಮ ಶಿವಾಜಿ ಮತ್ತೆ ಹೊಸ ಕೇಸ್ ಹೊತ್ತು ಬರಲಿದ್ದಾನೆ. ಎಲ್ಲರಲ್ಲೂ ಮನೆ ಮಾಡಿರುವ 'ಮಾಯಾವಿ' ಯಾರು? ಎಂಬ ಪ್ರಶ್ನೆಗೆ ಅಂದೇ ಉತ್ತರ ಸಿಗಲಿದೆ ಎಂದು ನಿರ್ದೇಶಕ ಆಕಾಶ್ ಶ್ರೀವತ್ಸ ತಿಳಿಸಿದರು.

'ಒಂದೊಳ್ಳೆ ತಂಡದ ಜೊತೆಗೆ ಕೆಲಸ ಮಾಡಿದ ಖುಷಿಯಿದೆ. 'ಶಿವಾಜಿ ಸುರತ್ಕಲ್ - 2' ಚಿತ್ರದ ಟ್ರೇಲರ್ ಚೆನ್ನಾಗಿದೆ. ನೀವು ಕುಟುಂಬ ಸಮೇತ ನಮ್ಮ ಚಿತ್ರ ನೋಡಲು ಚಿತ್ರಮಂದಿರಕ್ಕೆ ಬನ್ನಿ' ಎಂದರು ನಟ ರಮೇಶ್ ಅರವಿಂದ್.

ರಾಧಿಕಾ ಚೇತನ್, ಮೇಘನಾ ಗಾಂವ್ಕರ್, ಸಂಗೀತಾ ಶೃಂಗೇರಿ, ರಘು ರಮಣಕೊಪ್ಪ, ವಿನಾಯಕ ಜೋಶಿ, ವಿದ್ಯಾಮೂರ್ತಿ ತಾರಾಗಣದಲ್ಲಿದ್ದಾರೆ.

'ಗ್ರೇ ಗೇಮ್ಸ್'ನ ಆಟ ಶುರು

ವಿಜಯ್ ರಾಘವೇಂದ್ರ, ಶ್ರುತಿ ಪ್ರಕಾಶ್, ಭಾವನಾ ರಾವ್ ಅಭಿನಯದ 'ಗ್ರೇ ಗೇಮ್ಸ್' ಟೀಸರ್‌ನಲ್ಲಿ ಸದ್ದು ಮಾಡಿದೆ. ಇದೊಂದು ಕೌಟುಂಬಿಕ ಕಥನ, ಥ್ರಿಲ್ಲರ್ ಅಂಶಗಳನ್ನು ಹೊಂದಿದೆ. ಸತ್ಯ ಮತ್ತು ಸುಳ್ಳಿನ ನಡುವಿನ ಗೆರೆಗಳನ್ನು ನಿರಂತರ ಬದಲಾವಣೆಗೆ ಒಳಪಡಿಸುತ್ತದೆ ಈ ಕಥೆ ಎಂದಿದೆ ಚಿತ್ರತಂಡ. 'ಲೆಟ್ ದ ಗೇಮ್ ಬಿಗಿನ್ಸ್' ಎನ್ನುವುದು ಚಿತ್ರದ ಅಡಿಬರಹ.

ಆನ್‌ಲೈನ್ ಗೇಮಿಂಗ್‌ಗೆ ಸಂಬಂಧಿಸಿದ ಅಪರಾಧಗಳ ವಿಷಯಗಳ ಸುತ್ತ ಈ ಕಥೆಯಿದೆ. ವಿಜಯ್ ರಾಘವೇಂದ್ರ (ಮನಃಶ್ಶಾಸ್ತ್ರಜ್ಞ), ಭಾವನಾ ರಾವ್ (ಪೊಲೀಸ್ ಅಧಿಕಾರಿ), ಮತ್ತು ಶ್ರುತಿ ಪ್ರಕಾಶ್ (ಚಿತ್ರನಟಿ)ಯಾಗಿ ಪಾತ್ರಗಳನ್ನು ನಿರ್ವಹಿಸಿದ್ದಾರೆ, ಹೊಸ ಪ್ರತಿಭೆ ಜೈ ಇಲ್ಲಿ ಗೇಮರ್ ಪಾತ್ರವನ್ನು ನಿರ್ವಹಿಸಿದ್ದಾರೆ. ಅಪರ್ಣಾ, ರವಿ ಭಟ್ ಕೂಡಾ ತಾರಾಗಣದಲ್ಲಿದ್ದಾರೆ.

ತಂತ್ರಜ್ಞಾನ ಯುಗದಲ್ಲಿ ನಮ್ಮ ಮೇಲಾಗುವ ಮಾನಸಿಕ ಒತ್ತಡ ಸಂಬಂಧಿಸಿ ಚಿತ್ರದ ಕಥೆಯಿದೆ. ವಾಸ್ತವ ಮತ್ತು ವರ್ಚುವಲ್ ರಿಯಾಲಿಟಿ ಲೋಕದ ನಡುವಿನ ಸಂಗತಿಗಳನ್ನು ಚಿತ್ರಿಸಿದ್ದೇವೆ. ಮೂರು ಹಾಡುಗಳು ಮತ್ತು ಹೊಸ ಕಥಾವಸ್ತುವಿನ ಜೊತೆಗೆ ಭಾವನಾತ್ಮಕ ತಿರುವುಗಳು ಚಿತ್ರದಲ್ಲಿವೆ ಎಂದು ಚಿತ್ರತಂಡ ಹೇಳಿಕೊಂಡಿದೆ. ಗಂಗಾಧರ ಸಾಲಿಮಠ ಈ ಚಿತ್ರದ ನಿರ್ದೇಶಕರು. ವರುಣ ಡಿ.ಕೆ. ಛಾಯಾಗ್ರಹಣವಿದೆ. ಆನಂದ ಎಚ್. ಮುಗದ್ ನಿರ್ಮಾಪಕರು. ಸತೀಶ ಗ್ರಾಮಪುರೋಹಿತ, ಅರವಿಂದ ಜೋಶಿ, ಡೋಲೇಶ್ವರ್ ರಾಜ್ ಸುಂಕು ಈ ಚಿತ್ರದ ಸಹ ನಿರ್ಮಾಪಕರು.

ವಿಜಯ್ ರಾಘವೇಂದ್ರ, ಶ್ರುತಿ ಪ್ರಕಾಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಸರ್ವರಿಗೂ ಹಿತವಾದದ್ದು ಇದೆಯೆ?

ಸರ್ವಹಿತವೊಂದುಂಟೆ! ಅದಕೆ ಪಥ ನಮಗುಂಟೆ? |
ನಿರ್ವಾಹಸಾಧನಗಳೆತ್ತ? ಗುರುವೆತ್ತ? ||
ಪೂರ್ವವನು ನೆಟ್ಟಗಿಪ ನರಕೃತಿಯಿನಾಗದೇನ್ |
ಅರ್ವಾಚಿಯಲಿ ಸೊಟ್ಟು? – ಮಂಕುತಿಮ್ಮ || **854**

ಪದ-ಅರ್ಥ: ಸರ್ವಹಿತವೊಂದುಂಟೆ = ಸರ್ವಹಿತವು + ಒಂದು + ಉಂಟೆ, ಪಥ = ದಾರಿ, ನಿರ್ವಾಹಸಾಧನಗಳೆತ್ತ = ನಿರ್ವಾಹಸಾಧನಗಳು(ನಡೆಸಲು ಸಹಾಯವಾಗುವ) + ಸಾಧನಗಳು, ಪೂರ್ವವನು = ಹಿಂದಿನದನ್ನು, ನೆಟ್ಟಗಿಪ = ಸರಿಯಾಗಿಸುವ, ನರಕೃತಿಯಿನಾಗದೇನ್ = ನರಕೃತಿಯನ್(ನರರ ಪ್ರಯತ್ನದಿಂದ) + ಆಗದೇನ್(ಆಗದೇನು). ಅರ್ವಾಚಿಯಲಿ = ಭವಿಷ್ಯದಲ್ಲಿ.

ವಾಚ್ಯಾರ್ಥ: ಎಲ್ಲರಿಗೂ ಹಿತವಾದದ್ದು ಒಂದು ಇರಲು ಸಾಧ್ಯವೇ? ಅದನ್ನು ಪಡೆಯುವ ದಾರಿ ನಮಗೆ ಗೊತ್ತೇ? ಹಾಗೆ ಮಾಡಲು ಸಹಾಯವಾಗುವ ಉಪಕರಣಗಳಿವೆಯೇ? ಅದನ್ನು ತೋರುವ ಗುರು ಯಾರು? ಹಿಂದೆ ಆಗಿಹೋದದ್ದನ್ನು ಸರಿಮಾಡಲು ಹೊರಡುವ ಮನುಷ್ಯ ಪ್ರಯತ್ನದಿಂದ ಭವಿಷ್ಯದಲ್ಲಿ ತೊಂದರೆಯಾಗುವುದಿಲ್ಲವೆ?

ವಿವರಣೆ: ಎಲ್ಲರೂ ಸಂತೋಷವಾಗಿ, ಹಿತವಾಗಿ ಬದುಕಬೇಕೆನ್ನುವವರೇ. ಆದರೆ ಈ ಹಿತವನ್ನು ಪಡೆಯುವುದು ಹೇಗೆ? ಎಲ್ಲರಿಗೂ ಒಂದೇ ಹಿತವಾದೀತೇ?. 'ಲೋಕೋ ಭಿನ್ನ ರುಚಿ:' ಎಂಬ ಮಾತಿದೆ. ಹೌದು ಪ್ರಪಂಚದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಮನಸ್ಸುಗಳಿವೆ, ಅದಕ್ಕಿಂತ ಹೆಚ್ಚಾದ ಬಯಕೆಗಳಿವೆ. ಆ ಬಯಕೆಗಳನ್ನು ಪೂರೈಸಲು ಸಾವಿರಾರು ವಿಧಾನಗಳಿವೆ. ಕೆಲವರಿಗೆ ಧ್ಯಾನದಿಂದ ಸಂತೋಷ, ಇನ್ನು ಕೆಲವರಿಗೆ ಎಡೆಬಿಡದ ಕಾರ್ಯದಿಂದ. ಕೆಲವರಿಗೆ ಮೌನದಲ್ಲಿ ಹಿತವೆನ್ನಿಸಿದರೆ ಮತ್ತೆ ಕೆಲವರಿಗೆ ಮಾತಿನಲ್ಲಿ. ನಾವು ಕಂಡ ಹಾಗೆ ಕೆಲ ಜನರು ಊಟ-ತಿಂಡಿಗಳಿಂದ ಸಂತೋಷ ಹೊಂದಿದರೆ ಮತ್ತೆ ಕೆಲವರು ಉಪವಾಸ-ವ್ರತಗಳಿಂದ ಸಂತೋಷ ಹೊಂದುತ್ತಾರೆ. ಕೆಲವರಿಗೆ ಶಾಂತಿಯಿಂದ ತೃಪ್ತಿ, ಮತ್ತೆ ಹಲವರಿಗೆ ಗದ್ದಲ ಎಬ್ಬಿಸಿದಾಗಲೇ ತೃಪ್ತಿ. ಅಂತೆಯೇ ಬುದ್ಧ, ಹಿಟ್ಲರ್ ಇವರುಗಳ ದಾರಿಯೂ ಬೇರೆ. ಕಗ್ಗ ಆ ಮಾತನ್ನು ಕೇಳುತ್ತದೆ. ಎಲ್ಲರಿಗೂ ಒಪ್ಪಿತವಾದ ಒಂದು ಹಿತ ಎನ್ನುವುದು ಇದೆಯೆ? ಅದನ್ನು ಪಡೆಯುವ ದಾರಿ ನಿಮಗೆ ಗೊತ್ತೆ? ಸರ್ವರಿಗೂ ಹೊಂದುವ ಹಿತವೊಂದು ಇದೆಯೆಂದು ಭಾವಿಸೋಣ. ಆದರೆ ಅದನ್ನು ಪಡೆಯುವ ಸಾಧನ, ಸೌಕರ್ಯಗಳು ನಮಗಿವೆಯೇ? ಇದೆಲ್ಲಕ್ಕೂ ಮಾರ್ಗ ನಿರ್ದೇಶನ ಮಾಡುವ ಗುರುಗಳಿದ್ದಾರೆಯೇ? ಈ ಪ್ರಶ್ನೆಗಳಿಗೆ ಉತ್ತರ ಹೌದೆಂದಾದರೆ ಪ್ರಪಂಚ ಎಂದೆಂದಿಗೂ ಶಾಂತಿಯಿಂದಲೇ ಇರುತಿತ್ತು. ಯಾವ ತಳಮಳ, ಹೋರಾಟ, ಮಹಾಯುದ್ದಗಳು ಆಗುತ್ತಿರಲಿಲ್ಲ. ಕಗ್ಗದಲ್ಲಿ ಇನ್ನೊಂದು ಪ್ರಶ್ನೆ ಇದೆ. ಹಿಂದೆ ಏನೇನೋ ಆಗಿ ಹೋಗಿದೆ. ಇತಿಹಾಸವೆಂದರೆ ಅದೆ. ಅದನ್ನು ಸರಿಪಡಿಸಬೇಕೆಂದು ಮನುಷ್ಯ ಪ್ರಯತ್ನಿಸಿದರೆ ಏನಾಗಬಹುದು? ಆಗಿ ಹೋದದ್ದನ್ನು ಬದಲಿಸುವುದು ಸಾಧ್ಯವಿಲ್ಲ. ಅದನ್ನು ಬದಲಾಯಿಸಿಯೇ ಬಿಡುತ್ತೇನೆ ಎಂದು ರಣೋತ್ಸಾಹದಲ್ಲಿ ಹೊರಟರೆ ಮುಂದಿನ ಭವಿಷ್ಯವೂ ಸೊಟ್ಟಾಗುವುದಿಲ್ಲವೆ? ಇತಿಹಾಸವನ್ನು ತಿದ್ದಹೊರಟವರು ಭವಿಷ್ಯದ ಮೇಲೂ ಒಂದು ಕಣ್ಣಿಟ್ಟು ಕಾರ್ಯೋನ್ಮುಖರಾಗಬೇಕು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ದ್ವಾದಶಿ ಗಂ. 06-25 ನಿತ್ಯನಕ್ಷತ್ರ: ಮಘಾ ಗಂ. 07-24 ಯೋಗ: ಗಂಡ ಗಂ. 27-40, ಕರಣ: ಬಾಲವ ಗಂ. 06-25, ಮೀನ ಮಾಸದ 19 ನೇ ದಿನ, ಮಳೆನಕ್ಷತ್ರ: ರೇವತಿ 1. ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-29 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 11 ರಂಜಾನ್ ದಿನ ವಿಶೇಷ : ಅನಂಗ ತ್ರಯೋದಶಿ, ಸೋಮ ಪ್ರದೋಷ, ಅದೃಷ್ಟ ಸಂಖ್ಯೆ : 1, 10

ಮೇಷ: ಮನೆಯ ಆಗುಹೋಗು ವಿಷಯಗಳನ್ನು ತಂದೆಯೊಡನೆ ಚರ್ಚಿಸುವಿರಿ. ಅಭಿಪ್ರಾಯ ವಿನಿಮಯಗಳಿಂದ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ಸಿಗುವುದು. ಅದರಿಂದಾಗಿ ಮನಸ್ಸಿಗೆ ನೆಮ್ಮದಿ ಮೂಡುವುದು.

ವೃಷಭ: ವಿಶಿಷ್ಟ ರೀತಿಯ ವೃತ್ತಿ ಕೌಶಲದ ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಸಹೋದ್ಯೋಗಿಯೊಬ್ಬರು ಅಪೇಕ್ಷಿಸುವರು. ಉದ್ಯೋಗದ ಗೌಪ್ಯತೆ ಬಿಟ್ಟುಕೊಡುವುದು ಸರಿಯಲ್ಲ. ಓದುವುದರಲ್ಲಿ ಹೆಚ್ಚಿನ ಆಸಕ್ತಿ ಮೂಡುವುದು.

ಮಿಥುನ: ವ್ಯವಹಾರಿಕ ವಿಷಯದಲ್ಲಿ ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ಈ ದಿನ ತಿಳಿಯುವುದು. ನಿಧಾನವಾಗಿ ಅದರ ಲಾಭ ಬಂದು ಕೈ ಸೇರಿದ ಸಂತಸ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಬೆಳೆಸಿಕೊಳ್ಳಿ.

ಕರ್ಕಾಟಕ: ನಿರ್ದಿಷ್ಟವಾದ ಕೆಲಸ ನಿರ್ದಿಷ್ಟ ಸಮಯದಲ್ಲಿ ಮಾಡಿ ಮುಗಿಸಿಕೊಳ್ಳುವಿರಿ. ವ್ಯಂಗ್ಯಚಿತ್ರ ಕಲಾವಿದರಿಗೆ ಮಾಸ ಪತ್ರಿಕೆಯ ಸಂಸ್ಥೆಯಿಂದ ಅವಕಾಶ ದೊರೆಯಲಿದೆ. ನೆರೆಯವರೊಂದಿಗಿನ ಸಂಬಂಧ ಸುಧಾರಿಸುವುದು.

ಸಿಂಹ: ಜೀವನದ ಬಗ್ಗೆ ಹೆಚ್ಚಿನ ಉತ್ಸಾಹ ತಾಳುವಿರಿ. ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು, ಹೊಸ ಚೈತನ್ಯ ತುಂಬಿ ಬರಲಿದೆ. ಸಂಗೀತಗಾರರಿಗೆ ಹಾಗೂ ನೃತ್ಯ ಕಲೆಗಳಿಗೆ ಪ್ರಾಧಾನ್ಯ ದೊರಕುವುದು.

ಕನ್ಯಾ: ಕೈಗಾರಿಕೆಯನ್ನು ನಡೆಸುವವರಿಗೆ ಅಧಿಕ ಖರ್ಚು ಸಂಭವಿಸಲಿದೆ. ಉತ್ಪಾದನೆ ಹೆಚ್ಚಿಸುವ ಬಗ್ಗೆ ಶ್ರಮ ಪಡಬಹುದು. ಸಹೋದ್ಯೋಗಿಗಳ ಉಪಟಳದಿಂದ ಅಗೌರವವಾಗುವ ಸನ್ನಿವೇಶ ಎದುರಾಗಬಹುದು.

ತುಲಾ: ಶಿಕ್ಷಕ ವೃತ್ತಿ ಮಾಡುವವರಿಗೆ ಬೋಧನಾ ಕೆಲಸಕ್ಕಿಂತ ಮುಖ್ಯವಾಗಿ ದಾಖಲೆಯ ನಿರ್ವಹಣೆ ತಲೆಬಿಸಿ ಎನಿಸಲಿದೆ. ವಾಸಗೃಹ, ವಾಣಿಜ್ಯ ಕಟ್ಟಡಗಳ ನಿರ್ಮಾಣ ಕಾರ್ಯಗಳಿಗೆ ಹಣಕಾಸಿನ ಹೊಂದಾಣಿಕೆ ಸುಲಭವಾಗಿ ಆಗುವುದು.

ವೃಶ್ಚಿಕ: ಆತ್ಮೀಯರಾರು ಎಂಬುದರ ಪರಿಚಯ ಈ ದಿನ ನಿಮಗಾಗಲಿದೆ. ಲಾಭದಾಯಕವೆನಿಸುವ ವ್ಯಕ್ತಿಗಳೊಂದಿಗೆ ಮಾತ್ರ ಮಾತನಾಡುವುದು ಸರಿಯಲ್ಲ. ಷೇರು ವ್ಯವಹಾರದಲ್ಲಿ ನಷ್ಟವಾಗಬಹುದು. ಜಾಗ್ರತೆ ವಹಿಸಿರಿ.

ಧನು: ರಾಜಕೀಯ ವ್ಯಕ್ತಿಗಳು ಆತ್ಮವಂಚನೆಯ ಬಗ್ಗೆ ವಿಮರ್ಶಿಸಿಕೊಳ್ಳಿರಿ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು. ನಿಮ್ಮಿಂದ ಸಹಾಯ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವಂತೆ ಆಗುವ ಲಕ್ಷಣಗಳಿದೆ.

ಮಕರ: ಪಾಲುದಾರಿಕೆ ವ್ಯವಹಾರಗಳು ಲಾಭ ತರಲಿದೆ. ವೃತ್ತಿರಂಗದಲ್ಲಿ ಅನಿವಾರ್ಯವಾಗಿ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗುವುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಕುಂಭ: ಮಾಡಿದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯಾಗುವ ಯೋಗ ನಿಮಗೆ ಈ ದಿನವಿದೆ. ಕೈತಪ್ಪಿ ಹೋದ ಹಣ ಪುನಃ ಕೈ ಸೇರುವುದು. ಹನುಮ ಸಮೇತನಾದ ಶ್ರೀರಾಮನ ಪರಿವಾರ ಆರಾಧಿಸಿ ಶ್ರೇಯೋವಂತರಾಗಿರಿ.

ಮೀನ: ವೈದ್ಯಕೀಯ ವೃತ್ತಿ ಅನುಸರಿಸುವವರಿಗೆ ಆಯ- ವ್ಯಯ ಸಮತೋಲನದಲ್ಲಿದ್ದರೂ ಅಪವಾದದ ಭೀತಿ ಎದುರಾಗುವುದು. ಅನುವಂಶಿಕ ಆಸ್ತಿ ಅನುಭವಿಸುವ ಯೋಗ ಬರಲಿದೆ. ಶತ್ರುಗಳು ಮಿತ್ರರಾಗಲು ಬಯಸಿ ಬರುತ್ತಾರೆ.

ಪದಬಂಧ 5277
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಸಹೃದಯರ ಮನಮುಟ್ಟುವಂತೆ ಕಾವ್ಯ ಓದುವವನು (3)
4. ಖೋತಾವನ್ನು ಹೀಗೆನ್ನಿ (3)
6. ನಿಗದಿತ ಬೆಲೆಗಿಂತ ಹೆಚ್ಚು ಹಣ ಬಯಸುವವನು (5)
7. ಸರಸದಲ್ಲಿಯೇ ಕಾಣಿಸುತ್ತಿರುವ ದ್ರವ (2)
9. ಕಡಲ ಹತ್ತಿರ ಪಡೆದ ಸಾಲ (2)
10. ಸರಕ್ಕನೆ ಹೋಗಿ ಧರಿಸಿದ ಮಾಲೆ (2)
11. ಪುರಿಯಲ್ಲಿರುವ ವೈರಿ (2)
16. ಒಳ್ಳೆತನದ ಸೋಗಿನಲ್ಲಿ ವಂಚನೆ ಮಾಡುವವನು (5)
17. ಸೊಂಟದಿಂದ ಪ್ರಾರಂಭವಾದ ಕಂಪನ (3)
18. ಬೆಳ್ಳಿ ಇಲ್ಲಿದೆ (3)

ಮೇಲಿಂದ ಕೆಳಕ್ಕೆ
1. ಅನ್ಯ ಮಾರ್ಗವು ಗರದೊಳಗಿದೆ (4)
2. ಲಾಡಿ ಹಿಡಿದುಕೊಂಡಿರುವ ತುಂಟ (3)
3. ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವಸ್ಪರ್ಧೆ (3)
4. ಕಕ್ಕಾವಿಕ್ಕಿಯಾಗಿರುವ ಪೆದ್ದ (3)
5. ತಡವಾಗಿ ಆಗಿರುವ ತಬ್ಬಿಬ್ಬು (4)
8. ವಾರದ ಕೊನೆಗೆ ಕಾಣಿಸಿದ ಆರೋಹಿ (3)
9. ಕೆಲಸಗಳನ್ನು ನಿರ್ವಹಿಸುವ ನಿಶ್ಚಿತ ಸ್ಥಳ (3)
10. ನೆಮ್ಮದಿ ಈ ರೀತಿ ಬಂದಿದೆ (4)
12. ವೇದೋಕ್ತ ವಿಧಿಗಳನ್ನು ಮಾಡುವವನು (4)
13. ಪಾಕದ ಸಮಯದಲ್ಲಿ ತಯಾರಿಸಿದ ಶರಬತ್ತು (3)
14. ವಂಗ ದೇಶದಿಂದ ತಂದ ಸಾಂಬಾರ ದ್ರವ್ಯ (3)
15. ಮೊಸಳೆ ಇಲ್ಲಿ ಕಾಣುತ್ತಿದೆ (3)



5276ನೇ ಪದಬಂಧದ ಉತ್ತರ
3.ಕಿತಾಪತಿ 5.ಜಾಯಮಾನ
6.ಕುಡುಗೋಲು
8.ಮಡಿವಾಳ 12.ವನಸುಮ
14.ನಿರಾಯುಧ 15.ಅಂತರ್ಧಾನ
16.ಮನ್ವಂತರ
ಮೇಲಿಂದ ಕೆಳಕ್ಕೆ:
1.ಅಜಾತಶತ್ರು
2.ಸಮಾಗಮ
3.ಕಿರುಕುಳ 4.ತಿಕ್ಕಲು 7.ಗೋರಿ
9.ವಾಮನ 10.ಉದಾಸೀನತೆ
11.ನೀರಾ 12.ವಧಕಾರ
13.ಮನೆತನ 14.ನಿಗಮ

ಸುಡೊಕು 5663

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5662 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಸುಕೋ ಬ್ಯಾಂಕ್ ಲಾಭ ₹ 7.87 ಕೋಟಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಸಹಕಾರಿ ಕ್ಷೇತ್ರದಲ್ಲಿ ವಿಶ್ವಾಸಾರ್ಹವಾಗಿ ಬೆಳೆಯುತ್ತಿರುವ ಸುಕೋ ಬ್ಯಾಂಕ್ 2022-23ನೇ ಆರ್ಥಿಕ ವರ್ಷದಲ್ಲಿ ಒಟ್ಟು ₹ 1,560 ಕೋಟಿ ವಹಿವಾಟು ನಡೆಸಿ, ಶೇಕಡ 23.43ರಷ್ಟು ಪ್ರಗತಿ ಸಾಧಿಸಿದೆ. ₹ 7.87 ಕೋಟಿ ಲಾಭ ಗಳಿಸಿದೆ' ಎಂದು ಬ್ಯಾಂಕಿನ ಅಧ್ಯಕ್ಷ ಮೋಹಿತ್ ಮಸ್ಕಿ ತಿಳಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬ್ಯಾಂಕಿನ ಅನುತ್ಪಾದಕ ಸಾಲ ಶೂನ್ಯವಾಗಿದ್ದು, ಒಟ್ಟು ಲಾಭ ₹ 18.65 ಕೋಟಿ. ತೆರಿಗೆ ಪಾವತಿ ನಂತರದ ನಿವ್ವಳ ಲಾಭ ₹ 7.87 ಕೋಟಿ' ಎಂದರು.

ಸುಕೋ ಬ್ಯಾಂಕ್ ಕರ್ನಾಟಕದಾದ್ಯಂತ ಕಾರ್ಯಜಾಲ ಹೊಂದಿದ್ದು, 29 ಶಾಖೆಗಳ ಮೂಲಕ ವ್ಯವಹಾರ ನಡೆಸಿದೆ. ಒಟ್ಟು ₹ 940 ಕೋಟಿ ಠೇವಣಿ ಹೊಂದಿ, ₹ 620 ಕೋಟಿ ಸಾಲ ವಿತರಣೆ ಮಾಡಿದೆ. ಒಟ್ಟು ಸಾಲದಲ್ಲಿ ₹ 25 ಲಕ್ಷದೊಳಗಿನ ಕಿರು ಸಾಲಗಳು 252 ಕೋಟಿಯಷ್ಟಿದ್ದು, ಇದು ಒಟ್ಟು ಸಾಲದ ಶೇ 41ರಷ್ಟು. ಇದು ಸುಕೋ ಬ್ಯಾಂಕ್ ಎಂಎಸ್ಎಂಇ ವಲಯಕ್ಕೆ ನೀಡುತ್ತಿರುವ ಮಹತ್ವವನ್ನು ಸಾಬೀತು ಮಾಡುತ್ತದೆ ಎಂದು ಅವರು ವಿವರಿಸಿದರು.

ಕಳೆದ ವರ್ಷ ಹೊಸ ಠೇವಣಿ ಯೋಜನೆಯನ್ನು ಜಾರಿ ತರಲಾಗಿದೆ. ರೆಪೊ ದರಕ್ಕಿಂತ ಶೇ 2.20ರಷ್ಟು ಹೆಚ್ಚು ಬಡ್ಡಿಯನ್ನು ಈ ಯೋಜನೆಯಲ್ಲಿ ನೀಡಲಾಗುತ್ತಿದೆ. ಮೂರು ವರ್ಷಗಳ ಠೇವಣಿ ಯೋಜನೆ ಇದಾಗಿದೆ. ಪ್ರತಿ ಆರು ತಿಂಗಳಿಗೊಮ್ಮೆ ರೆಪೊ ದರದ ಅನುಸಾರ ಬಡ್ಡಿದರ ಬದಲಾಗುತ್ತದೆ ಎಂದು ಹೇಳಿದರು.

ಈಗ ಶೇ 8.70ರಷ್ಟು ಬಡ್ಡಿ ನೀಡಲಾಗುತ್ತಿದೆ. ಹಣದುಬ್ಬರದ ಪರಿಣಾಮ ನಿಭಾಯಿಸಲು ಇದು ಉತ್ತಮ ಠೇವಣಿ ಯೋಜನೆ ಎಂದರು. ವ್ಯವಸ್ಥಾಪಕ ನಿರ್ದೇಶಕ ಎ.ಆರ್. ಗಿರೀಶ್, ಆಡಳಿತ ಮಂಡಳಿ ಕಾರ್ಯದರ್ಶಿ ವೆಂಕಟೇಶರಾವ್ ಹಾಜರಿದ್ದರು.

ಇಂದಿನಿಂದ ನಡೆಯಲಿದೆ ಆರ್‌ಬಿಐನ ಎಂಪಿಸಿ ಸಭೆ

ಬಿಗಿ ಹಣಕಾಸು ನೀತಿಗೆ ಕೊನೆ?

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಈ ವಾರ ಶೇಕಡ 0.25ರಷ್ಟು ಹೆಚ್ಚಿಸುವ ಸಾಧ್ಯತೆ ಇದ್ದು, ಇದು ಹಣದುಬ್ಬರ ಹೆಚ್ಚಳ ನಿಯಂತ್ರಿಸಲು 2022ರ ಮೇ ತಿಂಗಳಿನಿಂದ ಅನುಸರಿಸುತ್ತ ಬಂದಿರುವ ಬಿಗಿ ಹಣಕಾಸು ನೀತಿಯ ಕೊನೆಯ ಹಂತದ ಏರಿಕೆ ಆಗಬಹುದು ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ಎಂಪಿಸಿ ಸಭೆ ಸೋಮವಾರದಿಂದ ಗುರುವಾರದವರೆಗೆ ನಡೆಯಲಿದೆ. ಗುರುವಾರ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಮಾರುಕಟ್ಟೆ ತಜ್ಞರ ಪ್ರಕಾರ, 2022ರ ಮೇ ತಿಂಗಳಿನಲ್ಲಿ ಆರಂಭಿಸಿದ ಬಡ್ಡಿದರ ಹೆಚ್ಚಳ ಪ್ರಕ್ರಿಯೆಯು ಗುರುವಾರ ಕೊನೆಯಾಗುವ ಸಾಧ್ಯತೆ ಇದೆ.

2023-24ನೇ ಹಣಕಾಸು ವರ್ಷದ ಮೊದಲ ದ್ವೈಮಾಸಿಕ ಸಭೆ ಇದಾಗಿದೆ. ಆರ್‌ಬಿಐ 2022ರ ಮೇ ತಿಂಗಳಿನಿಂದ ಈವರೆಗೆ ರೆಪೊ ದರವನ್ನು ಶೇ 2.50ರಷ್ಟು ಹೆಚ್ಚಳ ಮಾಡಿದೆ.

'ಆರ್‌ಬಿಐ ಮತ್ತೊಮ್ಮೆ ಬಡ್ಡಿದರವನ್ನು ಶೇ 0.25ರಷ್ಟು ಹೆಚ್ಚಿಸುವ ನಿರೀಕ್ಷೆ ಮಾಡಲಾಗಿದೆ. ತಟಸ್ಥ ಹಣಕಾಸು ನೀತಿಯನ್ನು ಅನುಸರಿಸುವ ತೀರ್ಮಾನ ಕೈಗೊಳ್ಳಬಹುದು. ಆ ಮೂಲಕ ಬಿಗಿ ಹಣಕಾಸು ನೀತಿಯನ್ನು ಕೊನೆಗೊಳಿಸಬಹುದು' ಎಂದು ಬ್ಯಾಂಕ್ ಆಫ್ ಬರೋಡಾದ ಆರ್ಥಿಕ ತಜ್ಞ ಮದನ್ ಸಬ್ನವೀಸ್ ಅವರು ಈಚೆಗೆ ಹೇಳಿದ್ದರು.

ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು 2022ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಶೇ 6ಕ್ಕಿಂತಲೂ ಕೆಳಕ್ಕೆ ಇಳಿಕೆ ಕಂಡಿತ್ತು. ಆದರೆ 2023ರ ಜನವರಿಯಲ್ಲಿ ಶೇ 6.52 ಮತ್ತು ಫೆಬ್ರುವರಿಯಲ್ಲಿ ಶೇ 6.44ಕ್ಕೆ ತಲುಪಿದೆ.

ಜಿಎಸ್‌ಟಿ ನೋಂದಣಿ ರದ್ದತಿ: ಹಿಂಪಡೆಯುವ ಅರ್ಜಿಗೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಜಿಎಸ್‌ಟಿ ವಿವರ ಸಲ್ಲಿಸದೆ ಇರುವ ಕಾರಣಕ್ಕೆ ವಾಣಿಜ್ಯೋದ್ಯಮಗಳ ಜಿಎಸ್‌ಟಿ ನೋಂದಣಿ ರದ್ದಾಗಿದ್ದರೆ, ರದ್ದು ಮಾಡಿದ್ದನ್ನು ಹಿಂಪಡೆಯುವಂತೆ ಕೋರಿ ಜೂನ್ 30ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಹೀಗೆ ಅರ್ಜಿ ಸಲ್ಲಿಸಲು ಮೊದಲು ತೆರಿಗೆಗಳನ್ನು, ಅದಕ್ಕೆ ಬಡ್ಡಿ ಮತ್ತು ದಂಡವನ್ನು ಪಾವತಿಸಿರಬೇಕು.

ಕೇಂದ್ರ ಹಣಕಾಸು ಸಚಿವಾಲಯವು ಕೇಂದ್ರ ಜಿಎಸ್‌ಟಿ ಕಾಯ್ದೆಯಲ್ಲಿ ತಿದ್ದುಪಡಿಗಳನ್ನು ತಂದಿದೆ. ವಾಣಿಜ್ಯೋದ್ಯಮಗಳ ಜಿಎಸ್‌ಟಿ ನೋಂದಣಿಯು 2022ರ ಡಿಸೆಂಬರ್ 31ಕ್ಕೆ ಮೊದಲು ರದ್ದಾಗಿದ್ದರೆ, ರದ್ದತಿಯನ್ನು ಹಿಂಪಡೆಯುವಂತೆ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸದೆ ಇದ್ದರೆ, ಅದನ್ನು ಜೂನ್ 30ಕ್ಕೂ ಮೊದಲು ಮಾಡಬಹುದು ಎಂದು ಸಚಿವಾಲಯ ಹೇಳಿದೆ.

ನೋಂದಣಿ ರದ್ದತಿಯನ್ನು ಹಿಂದಕ್ಕೆ ಪಡೆಯುವಂತೆ ಅರ್ಜಿ ಸಲ್ಲಿಸುವುದಕ್ಕೆ ಇನ್ನೂ ಹೆಚ್ಚಿನ ಕಾಲಾವಕಾಶ ಸಿಗುವುದಿಲ್ಲ ಎಂದು ಸಚಿವಾಲಯದ ಅಧಿಸೂಚನೆಯು ಹೇಳಿದೆ.

ಕಾಲೇಜು ವಿದ್ಯಾರ್ಥಿಗಳಿಗೆ ಕ್ರೆಡಿಟ್ ಕಾರ್ಡ್

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಕ್ರೆಡಿಟ್ ಕಾರ್ಡ್ ಬಳಕೆ ಒಳ್ಳೆಯದೋ ಕೆಟ್ಟದ್ದೋ ಎನ್ನುವ ಚರ್ಚೆ ಬಹಳ ಕಾಲದಿಂದಲೂ ಇದೆ. ಕೆಲವರು ಅದನ್ನು ಸದುಪಯೋಗಪಡಿಸಿಕೊಂಡು ಉನ್ನತಿ ಸಾಧಿಸಿದ್ದರೆ, ಕೆಲವರು ಅದನ್ನು ದುರ್ಬಳಕೆ ಮಾಡಿಕೊಂಡು ಅವನತಿಯತ್ತ ಸಾಗಿದ್ದಾರೆ. ಇದರ ನಡುವೆಯೇ ಕಾಲೇಜು ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಕೂಡ ಕ್ರೆಡಿಟ್ ಕಾರ್ಡ್‌ಗಳು ಬಂದಿವೆ. ಈ ಕ್ರೆಡಿಟ್ ಕಾರ್ಡ್‌ಗಳು ಎಷ್ಟು ಸೂಕ್ತ? ಯಾವುದನ್ನು ಪಡೆದುಕೊಳ್ಳಬೇಕು, ಯಾವುದರಿಂದ ದೂರ ಇರಬೇಕು?

ಕಾಲೇಜು ವಿದ್ಯಾರ್ಥಿಗಳಿಗೆ ಸುಲಭದಲ್ಲಿ ಕ್ರೆಡಿಟ್ ಕಾರ್ಡ್ ಸಿಗುತ್ತದೆಯೇ? ಕಾಲೇಜು ಮೆಟ್ಟಿಲು ಹತ್ತಿದ ತಕ್ಷಣ ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಮುಂದಾಗುವ ವಿದ್ಯಾರ್ಥಿಗಳು ಇದ್ದಾರೆ. ಆದರೆ ಎಲ್ಲರಿಗೂ ವಿದ್ಯಾರ್ಥಿ ಕ್ರೆಡಿಟ್ ಕಾರ್ಡ್‌ಗಳನ್ನು ಬ್ಯಾಂಕ್‌ಗಳು ಒದಗಿಸುವುದಿಲ್ಲ. ಅವು ಕೆಲವು ನಿಯಮಗಳನ್ನು ಜಾರಿಗೆ ತಂದಿದ್ದು, ಅವುಗಳ ಆಧಾರದಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ಕ್ರೆಡಿಟ್ ಕಾರ್ಡ್ ಕೊಡುತ್ತದೆ. ಕೆಲವು ಬ್ಯಾಂಕ್‌ಗಳು ಶಿಕ್ಷಣ ಸಾಲ ಪಡೆದಿರುವ ವಿದ್ಯಾರ್ಥಿಗಳಿಗೆ ಮಾತ್ರ ಕ್ರೆಡಿಟ್ ಕಾರ್ಡ್ ಒದಗಿಸುತ್ತವೆ. ಮತ್ತಷ್ಟು ಬ್ಯಾಂಕ್‌ಗಳು ನಿಶ್ಚಿತ ಠೇವಣಿಯನ್ನು ಆಧಾರವಾಗಿ ಇಟ್ಟುಕೊಂಡು ಕ್ರೆಡಿಟ್ ಕಾರ್ಡ್ ಒದಗಿಸುತ್ತವೆ.

ಇನ್ನು ಕೆಲವು ಬ್ಯಾಂಕ್‌ಗಳು ಪೋಷಕರು ಹೊಂದಿರುವ ಕ್ರೆಡಿಟ್ ಕಾರ್ಡ್ ಜೊತೆ ಹೆಚ್ಚುವರಿಯಾಗಿ ಮಕ್ಕಳಿಗೆ ಆ್ಯಡ್–ಆನ್ ಕ್ರೆಡಿಟ್ ಕಾರ್ಡ್ ಒದಗಿಸುತ್ತವೆ.

ಕ್ರೆಡಿಟ್ ಕಾರ್ಡ್ ಪಡೆಯಲು ಅರ್ಹತೆ: ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸಬೇಕು ಅಂದರೆ 18 ವರ್ಷ ವಯಸ್ಸು ಆಗಿರಬೇಕು. ಮಾಸಿಕವಾಗಿ ನಿರ್ದಿಷ್ಟ ಆದಾಯವಿರಬೇಕು. ವೇತನದ ಚೀಟಿ, ಐ.ಟಿ ವಿವರ ಸಲ್ಲಿಸಿರುವ ವಿವರ ಒದಗಿಸಬೇಕು. ಇಷ್ಟೆಲ್ಲಾ ಇದ್ದಾಗ ಮಾತ್ರ ಕ್ರೆಡಿಟ್ ಕಾರ್ಡ್ ಸಿಗುತ್ತದೆ. ಆದರೆ ಇವ್ಯಾವುದನ್ನೂ ಅರಿಯದ ಬಹುತೇಕ ಕಾಲೇಜು ವಿದ್ಯಾರ್ಥಿಗಳು ಕ್ರೆಡಿಟ್ ಕಾರ್ಡ್‌ಗಾಗಿ ಬ್ಯಾಂಕ್‌ಗಳಲ್ಲಿ ಅರ್ಜಿ ಸಲ್ಲಿಸುತ್ತಾರೆ. ಒಂದು ಬ್ಯಾಂಕ್‌ನಲ್ಲಿ ಕ್ರೆಡಿಟ್ ಕಾರ್ಡ್ ಸಿಗದಿದ್ದರೆ ಮತ್ತೊಂದರಲ್ಲಿ, ಅದರಲ್ಲಿ ಸಿಗದಿದ್ದರೆ ಇನ್ನೊಂದರಲ್ಲಿ ಎಂಬಂತೆ ಮುಂದುವರಿಯುತ್ತಾರೆ. ಹೀಗೆ ಮಾಡಿದಾಗ ಮುಂದೆ ಅವರ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಬಹುದು.

ಹಾಗಾಗಿ ತಿಂಗಳ ಆದಾಯವಿಲ್ಲದ ವಿದ್ಯಾರ್ಥಿಗಳು ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸದೆ ಇರುವುದು ಸೂಕ್ತ. ವಿದ್ಯಾಭ್ಯಾಸದ ಜೊತೆ ಅರೆಕಾಲಿಕ ಕೆಲಸ ಮಾಡುತ್ತಿದ್ದು ನಿರ್ದಿಷ್ಟ ಆದಾಯ ಗಳಿಸುತ್ತಿದ್ದರೆ ಕ್ರೆಡಿಟ್ ಕಾರ್ಡ್ ಬಯಸಿ ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಥಿಗಳು ಹೇಗೆ ಸುಲಭದಲ್ಲಿ ಕಾರ್ಡ್ ಪಡೆಯಬಹುದು?: ಕಾಲೇಜು ವಿದ್ಯಾರ್ಥಿಗಳು ಕ್ರೆಡಿಟ್ ಕಾರ್ಡ್ ಪಡೆಯಬೇಕು ಎಂದಾದಲ್ಲಿ ಉಳಿತಾಯ ಖಾತೆ ಹೊಂದಿರುವ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ (ಎಫ್.ಡಿ) ಇಟ್ಟು ಅದರ ಆಧಾರದ ಮೇಲೆ ಕ್ರೆಡಿಟ್ ಕಾರ್ಡ್ ಪಡೆದುಕೊಳ್ಳಬಹುದು. ಉದಾಹರಣೆಗೆ ₹ 10 ಸಾವಿರ ನಿಶ್ಚಿತ ಠೇವಣಿ ಇಟ್ಟರೆ ₹ 8 ಸಾವಿರದಿಂದ ₹ 9 ಸಾವಿರದವರೆಗೆ ಕ್ರೆಡಿಟ್ ಲಿಮಿಟ್ ಇರುವ ಕಾರ್ಡ್ ಸಿಗುತ್ತದೆ. ಕೆಲವು ಬ್ಯಾಂಕ್‌ಗಳು ವಿದ್ಯಾರ್ಥಿ ಕ್ರೆಡಿಟ್ ಕಾರ್ಡ್‌ಗೆ ₹ 15 ಸಾವಿರದ ಲಿಮಿಟ್ ಒದಗಿಸುತ್ತವೆ.

ಈ ಕ್ರೆಡಿಟ್ ಕಾರ್ಡ್‌ಅನ್ನು ವಿವೇಚನೆಯಿಂದ ಬಳಸಿ ಸಮಯಕ್ಕೆ ಸರಿಯಾಗಿ ಕ್ರೆಡಿಟ್ ಕಾರ್ಡ್ ಬಿಲ್ ಮರುಪಾವತಿ ಮಾಡಿದರೆ ವಿದ್ಯಾರ್ಥಿ ದೆಸೆಯಿಂದಲೇ ಕ್ರೆಡಿಟ್ ಸ್ಕೋರ್ ಹೆಚ್ಚಳ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕ್ರೆಡಿಟ್ ಸ್ಕೋರ್ ಉತ್ತಮಗೊಂಡರೆ ಭವಿಷ್ಯದಲ್ಲಿ ಕಡಿಮೆ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

ಆ್ಯಡ್–ಆನ್ ಕಾರ್ಡ್: ವಿದ್ಯಾರ್ಥಿಯ ತಂದೆ ಅಥವಾ ತಾಯಿ ಈಗಾಗಲೇ ಕ್ರೆಡಿಟ್ ಕಾರ್ಡ್ ಪಡೆದು ಬಳಸುತ್ತಿದ್ದರೆ ಹೆಚ್ಚುವರಿಯಾಗಿ ಮತ್ತೊಂದು ಕ್ರೆಡಿಟ್ ಕಾರ್ಡ್ ಪಡೆದುಕೊಳ್ಳಬಹುದು. ಇಂತಹ ಕ್ರೆಡಿಟ್ ಕಾರ್ಡ್‌ಗೆ ಆ್ಯಡ್–ಆನ್ ಕ್ರೆಡಿಟ್ ಕಾರ್ಡ್ ಎನ್ನಲಾಗುತ್ತದೆ. ಪೋಷಕರು ಮಕ್ಕಳಿಗೆ ಇಂತಹ ಕಾರ್ಡ್ ಕೊಡಿಸಲು ಅವಕಾಶವಿದೆ. ಮಕ್ಕಳು ಪೋಷಕರಿಂದ ಪಡೆದ ಕ್ರೆಡಿಟ್ ಕಾರ್ಡ್ ಬಳಸಿದರೆ ಅದರ ಬಿಲ್ ಪಾವತಿಯನ್ನು ಕ್ರೆಡಿಟ್ ಕಾರ್ಡ್ ಹೊಂದಿರುವವರು ಮಾಡಬೇಕಾಗುತ್ತದೆ.

ಪಾವತಿ ವಿಳಂಬದಂತಹ ಸಮಸ್ಯೆಗಳು ಎದುರಾದರೆ ಅದರ ದಂಡವನ್ನು ಪೋಷಕರೇ ಭರಿಸಬೇಕಾಗುತ್ತದೆ. ಈ ಕಾರ್ಡ್‌ನಿಂದ ವಿದ್ಯಾರ್ಥಿಯ ಕ್ರೆಡಿಟ್ ಸ್ಕೋರ್ ಮೇಲೆ ಯಾವುದೇ ಸಕಾರಾತ್ಮಕ ಅಥವಾ ನಕಾರಾತ್ಮಕ ಪರಿಣಾಮ ಉಂಟಾಗುವುದಿಲ್ಲ. ಮಕ್ಕಳಲ್ಲಿ ಹಣಕಾಸು ನಿರ್ವಹಣೆಯ ಅರಿವು ಮೂಡಬೇಕು ಎಂದು ಬಯಸುವ ಪೋಷಕರು ಈ ಕಾರ್ಡ್ ಕೊಡಿಸಬಹುದು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಮೂರು ವಾರಗಳ ಬಳಿಕ ಗಳಿಕೆ

ಸತತ ಮೂರು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಲಯಕ್ಕೆ ಮರಳಿವೆ. ಮಾರ್ಚ್ 31ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 58,991 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.5ರಷ್ಟು ಜಿಗಿದಿದೆ. 17,359 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.44ರಷ್ಟು ಹೆಚ್ಚಳ ದಾಖಲಿಸಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ವಿದೇಶಿ ಹೂಡಿಕೆದಾರರಿಂದ ಖರೀದಿ ಭರಾಟೆ, ಬ್ಯಾಂಕಿಂಗ್ ವಲಯದ ಬಿಕ್ಕಟ್ಟು ಶಮನಗೊಳ್ಳುವ ಲಕ್ಷಣಗಳು ಗೋಚರಿಸಿರುವುದು ಸೇರಿ ಹಲವು ಅಂಶಗಳು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4ರಷ್ಟು, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 2.7ರಷ್ಟು, ಲೋಹ ಸೂಚ್ಯಂಕ ಶೇ 2.3ರಷ್ಟು ಮತ್ತು ಫಾರ್ಮಾ ಸೂಚ್ಯಂಕ ಶೇ 2.2ರಷ್ಟು ಗಳಿಸಿಕೊಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,243.74 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,955.78 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್ಇ ಲಾರ್ಜ್ ಕ್ಯಾಪ್‌ನಲ್ಲಿ ಇನ್ಫೋ ಎಜ್, ರಿಲಯನ್ಸ್ ಇಂಡಸ್ಟ್ರೀಸ್, ಇಂಡಸ್ ಇಂಡ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಬಾಷ್, ಜೆಎಸ್‌ಡಬ್ಲ್ಯು ಸ್ಟೀಲ್ ಮತ್ತು ಹಿಂಡಾಲ್ಕೊ ಇಂಡಸ್ಟ್ರೀಸ್ ಗಳಿಕೆ ಕಂಡಿವೆ. ಅದಾನಿ ಗ್ರೀನ್ ಎನರ್ಜಿ, ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್‌ಮಿಷನ್ ಮತ್ತು ನೈಕಾ ಶೇ 10ರಿಂದ ಶೇ 14ರಷ್ಟು ಕುಸಿದಿವೆ.

ಬಿಎಸ್ಇ ಮಿಡ್ ಕ್ಯಾಪ್‌ನಲ್ಲಿ ಪಿಬಿ ಫಿನ್‌ಟೆಕ್, ಗ್ಲೆನ್ ಮಾರ್ಕ್ ಫಾರ್ಮಾ, ಮೋತಿಲಾಲ್ ಓಸ್ವಾಲ್ ಫೈನಾನ್ಸಿಯಲ್ ಸರ್ವಿಸಸ್, ಎಸ್‌ಜೆವಿಎನ್, ಅಲ್ ಕೆಮ್ ಲ್ಯಾಬೊರೇಟರಿಸ್, ದಾಲ್ಮಿಯಾ ಭಾರತ್ ಮತ್ತು ಆದಿತ್ಯ ಬಿರ್ಲಾ ಕ್ಯಾಪಿಟಲ್ ಗಳಿಸಿಕೊಂಡಿವೆ.

ಮುನ್ನೋಟ: ಏಪ್ರಿಲ್ 3ರಿಂದ 6ರವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ನಡೆಯಲಿದೆ. ಏಪ್ರಿಲ್ 6ರಂದು ರೆಪೊ ದರದಲ್ಲಿ 25 ಮೂಲಾಂಶಗಳಷ್ಟು ಹೆಚ್ಚಳ ಮಾಡುವ ಸಾಧ್ಯತೆಯಿದೆ. ರೆಪೊ ದರ ಹೆಚ್ಚಳವಾದರೆ ಸಾಲಗಳ ಮೇಲಿನ ಬಡ್ಡಿ ಹೊರೆ ಮತ್ತಷ್ಟು ಹೆಚ್ಚಾಗಲಿದ್ದು ಷೇರು ಮಾರುಕಟ್ಟೆ ಸಹ ಅದಕ್ಕೆ ಪ್ರತಿಕ್ರಿಯಿಸಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಬೆಳವಣಿಗೆಗಳು ಷೇರು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ತಮಿಳು ಭಾಷೆ: ಹ್ಯೂಸ್ಟನ್ ವಿ.ವಿ– ಐಸಿಸಿಆರ್ ಒಪ್ಪಂದ

ಹ್ಯೂಸ್ಟನ್, ಅಮೆರಿಕ (ಪಿಟಿಐ): ತಮಿಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಸಂಶೋಧನೆಗೆ ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ಐಸಿಸಿಆರ್) ಪೀಠ ಸ್ಥಾಪನೆಗೆ ಹ್ಯೂಸ್ಟನ್ ವಿಶ್ವವಿದ್ಯಾಲಯ ಮತ್ತು ಐಸಿಸಿಆರ್ ಒಪ್ಪಂದ ಮಾಡಿಕೊಂಡಿವೆ.

ಮಾರ್ಚ್ 29ರಂದು ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ವಿಶ್ವವಿದ್ಯಾಯದಲ್ಲಿ ಭಾರತೀಯ ಅಧ್ಯಯನ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವ ಸಲುವಾಗಿ ಕೈಗೊಂಡ ಕ್ರಮ ಇದು ಎಂದು ಒಪ್ಪಂದದಲ್ಲಿ ತಿಳಿಸಲಾಗಿದೆ.

'ಐಸಿಸಿಆರ್‌ನೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ಸಂತಸ ತಂದಿದೆ ಎಂದರು. 'ಇದು ಉಭಯ ದೇಶಗಳ ನಡುವಣ ಸಾಂಸ್ಕೃತಿಕ ಬಾಂಧವ್ಯವನ್ನು ಬಲಪಡಿಸಲಿದೆ' ಎಂದು ವಿಶ್ವವಿದ್ಯಾಲಯ ಅಧ್ಯಕ್ಷೆ ರೇಣು ಖಾತೋರ್ ತಿಳಿಸಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಈ ಹುದ್ದೆಗೇರಿದ ಭಾರತೀಯ ಮೂಲದ ಪ್ರಥಮ ವ್ಯಕ್ತಿ ಇವರಾಗಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	100 ಮೊಟ್ಟೆಗೆ	₹450
	12 ಮೊಟ್ಟೆಗೆ	₹60
ಮೈಸೂರು	100 ಮೊಟ್ಟೆಗೆ	₹453

ಮೂಗು ತೂರಿಸುವುದನ್ನು ನಿಲ್ಲಿಸಿ

ಅಮೆರಿಕಾ, ಜರ್ಮನಿಗಳಿಗೆ ಸಚಿವ ಜೈಶಂಕರ್ ತಿರುಗೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶ್ಚಿಮದ ದೇಶಗಳು ಇತರ ದೇಶಗಳ ಆಂತರಿಕ ವಿಷಯಗಳಲ್ಲಿ ಮೂಗು ತೂರಿಸುವುದನ್ನು ನಿಲ್ಲಿಸಬೇಕು. ರಾಹುಲ್‌ಗಾಂಧಿಯ ಸಂಸದ ಸ್ಥಾನ ಅನರ್ಹಗೊಂಡ ವಿಚಾರದಲ್ಲಿ ಅಮೆರಿಕ ಮತ್ತು ಜರ್ಮನಿಗಳ ಪ್ರತಿಕ್ರಿಯೆ ಅನಗತ್ಯ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಮತ್ತು ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ನೇತೃತ್ವದಲ್ಲಿ ಕಬ್ಬನ್ ಉದ್ಯಾನದಲ್ಲಿ ವಾಯು ವಿಹಾರಿಗಳೊಂದಿಗೆ ಭಾನುವಾರ ನಡೆದ ಸಂವಾದದಲ್ಲಿ ಮಾತನಾಡಿದರು.

'ಪಶ್ಚಿಮದ ರಾಷ್ಟ್ರಗಳು ತಮ್ಮ ಹಿತಾಸಕ್ತಿಗೆ ಅನುಗುಣವಾದ ಅಭಿಪ್ರಾಯಗಳನ್ನು ಇತರ ದೇಶಗಳ ಮೇಲೆ ಹೇರುವುದನ್ನು ನಿಲ್ಲಿಸಬೇಕು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಸಂವಾದದಲ್ಲಿ ಸಂಸದ ಪಿ.ಸಿ. ಮೋಹನ್, ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಮತ್ತು ಸಂಸದ ತೇಜಸ್ವಿ ಸೂರ್ಯ ಭಾಗವಹಿಸಿದ್ದರು

ಈ ದೇಶಗಳು ಹಿಂದಿನಿಂದಲೂ ಇತರ ದೇಶಗಳ ಸಾರ್ವಭೌಮತ್ವ, ಸಾಂವಿಧಾನಿಕ ಅಧಿಕಾರಗಳ ಕುರಿತಾದ ಆಂತರಿಕ ವಿಷಯಗಳ ಮೇಲೆ ತಮ್ಮ ಅಭಿಪ್ರಾಯವೇ ಶ್ರೇಷ್ಠ ಎಂಬ ಮನಸ್ಥಿತಿಯಿಂದ ಹೊರಬಂದಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಬೇರೆ ರಾಷ್ಟ್ರಗಳೂ ಕೂಡ ಪಶ್ಚಿಮದ ದೇಶಗಳ ಕುರಿತಾಗಿ ಸಮನಾದ ದೃಷ್ಟಿಕೋನದಿಂದ ಪ್ರತಿಕ್ರಿಯೆ ನೀಡಲು ಆರಂಭಿಸುವುದು ಸಾಮಾನ್ಯ. ಹಿಂದೆಂಗಿಂತಲೂ ಈ ಸಂದರ್ಭದಲ್ಲಿ ಇಂತಹ ಮನಸ್ಥಿತಿ ವಿಶ್ವದ ಎಲ್ಲೆಡೆ ಕಾಣಬಹುದು' ಎಂದರು.

'ನಮ್ಮಲ್ಲಿಯೇ ಇರುವ ಕೆಲವರು ಪಶ್ಚಿಮದ ರಾಷ್ಟ್ರಗಳಿಗೆ ಹೋಗಿ ಭಾರತದ ಕುರಿತು ಅವಮಾನಕರ ಅಭಿಪ್ರಾಯಗಳನ್ನು ವಿವರಿಸಿ, 'ವಿದೇಶಗಳಿಗೆ ಆಹ್ವಾನ ನೀಡಿರುವುದರ ಪರಿಣಾಮದಿಂದ ಮಾತ್ರ ಇಂತಹ ಹೇಳಿಕೆಗಳು ಹೊರಬರಲು ಸಾಧ್ಯ. ಈ ರೀತಿಯ ಮನಸ್ಥಿತಿಯ ದೇಶದ ಒಳಗಿನ ಮತ್ತು ಹೊರಗಿನ ಇಬ್ಬರಲ್ಲೂ ಇರುವ ಮೂಲ ಸಮಸ್ಯೆಯನ್ನು ಪರಿಹರಿಸುವ ಕಾರ್ಯ ಆಗಬೇಕಿದೆ' ಎಂದು ಜೈಶಂಕರ್ ತಿಳಿಸಿದರು.

ವೇಗದ ಮಿತಿ ಮೀರಿ ಚಲಿಸಿದ ವಂದೇ ಭಾರತ್ ರೈಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಭೋಪಾಲ್– ನವದೆಹಲಿ ನಡುವೆ ಸಂಚರಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಗಂಟೆಗೆ 161 ಕಿ.ಮೀ ವೇಗದಲ್ಲಿ ಚಲಿಸಿ ತನ್ನ ವೇಗದ ಮಿತಿಯನ್ನು ಮೀರಿದೆ.

'ಪ್ರಸ್ತುತ, ವಂದೇ ಭಾರತ್ ರೈಲಿನ ನಿರೀಕ್ಷಿತ ವೇಗದ ಮಿತಿ ಗಂಟೆಗೆ 160 ಕಿ.ಮೀ ಆಗಿದೆ. ಆದರೆ, ಸಾಮಾನ್ಯವಾಗಿ ಈ ರೈಲುಗಳು ಗಂಟೆಗೆ ಸರಾಸರಿ 100 ಕಿ.ಮೀ ವೇಗದಲ್ಲಿ ಸಂಚರಿಸುತ್ತವೆ. ಭೋಪಾಲ್– ನವದೆಹಲಿ ರೈಲು ಆಗ್ರಾದ ರಾಜಾ ಕಿ ಮಂಡಿ ಮತ್ತು ಮಥುರಾದ ನಡುವೆ ಗಂಟೆಗೆ 161 ಕಿ.ಮೀ ವೇಗದಲ್ಲಿ ಚಲಿಸಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಆಗ್ರಾ ಕಂಟೋನ್ಮೆಂಟ್ ಮತ್ತು ನಿಜಾಮುದ್ದೀನ್ ರೈಲು ನಿಲ್ದಾಣಗಳ ನಡುವಿನ ಹಳಿಯನ್ನು ವಂದೇ ಭಾರತ್ ರೈಲಿನ ವೇಗದ ಮಿತಿಗೆ ಸರಿಹೊಂದುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

ಭೋಪಾಲ್– ನವದೆಹಲಿ ನಡುವಿನ ಶತಾಬ್ದಿ ಎಕ್ಸ್‌ಪ್ರೆಸ್‌ಗೆ ಹೋಲಿಕೆ ಮಾಡಿದರೆ, ವಂದೇ ಭಾರತ್ ಪ್ರಯಾಣದ ಸಮಯವನ್ನು ಸುಮಾರು ಒಂದು ಗಂಟೆ ಕಡಿಮೆ ಮಾಡುತ್ತದೆ.

ಅಮೃತ್‌ಪಾಲ್ ಸಿಂಗ್ ಸಹಚರರ ವಿರುದ್ಧ ತನಿಖೆ

ಚಂಡೀಗಢ (ಪಿಟಿಐ): ಪ್ರತ್ಯೇಕ ಖಾಲಿಸ್ತಾನ ಪ್ರತಿಪಾದಕ, ಸಿಖ್ ಧರ್ಮ ಪ್ರಚಾರಕ ಅಮೃತ್ ಪಾಲ್ ಸಿಂಗ್ ಸಹಚರರಿಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ನೀಡಿರುವ ಶಸ್ತ್ರಾಸ್ತ್ರ ಪರವಾನಗಿ ಹಿಂಪಡೆಯಲು ಮಾಡಿರುವ ವಿಳಂಬವು ಸದ್ಯ ಸಿಬಿಐ ತನಿಖೆಯ ಭಾಗವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತಲೆಮರೆಸಿಕೊಂಡಿರುವ ಅಮೃತ್ ಪಾಲ್ ಸಿಂಗ್‌ಗೆ ಇಬ್ಬರು ನಿವೃತ್ತ ಯೋಧರು ವೈಯಕ್ತಿಕ ಭದ್ರತಾ ಅಧಿಕಾರಿಗಳಾಗಿದ್ದರು. ಇವರಲ್ಲಿ 19ನೇ ಸಿಖ್ ರೆಜಿಮೆಂಟ್‌ನಲ್ಲಿದ್ದ ವರಿಂದರ್ ಸಿಂಗ್ ಮತ್ತು 23ನೇ ಶಸ್ತ್ರಸಜ್ಜಿತ ಪಂಜಾಬ್ ರೆಜಿಮೆಂಟ್‌ನಲ್ಲಿದ್ದ ತಲ್ವಿಂದರ್ ಸಿಂಗ್ ಅವರ ಶಸ್ತ್ರಾಸ್ತ್ರ ಪರವಾನಗಿಗಳನ್ನು ನೆರೆಯ ಕೇಂದ್ರಾಡಳಿತ ಪ್ರದೇಶದ ಜಿಲ್ಲೆಗಳಿಂದ ನವೀಕರಿಸಲಾಗಿದೆ ಅಥವಾ ಇವರಿಗೆ ಹೊಸದಾಗಿ ಪರವಾನಗಿ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಮೃತ್‌ಪಾಲ್ ಸಿಂಗ್ ಸಹಚರರು ತಮ್ಮ ಶಸ್ತ್ರಾಸ್ತ್ರಗಳೊಂದಿಗೆ ಪೊಲೀಸರ ಜತೆ ಘರ್ಷಣೆಗೆ ಇಳಿಯುವುದಕ್ಕೂ 6 ವಾರಗಳ ಮೊದಲು ಪಂಜಾಬ್ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಗುಪ್ತಚರ) ಸಂಬಂಧಿಸಿದ ಪೊಲೀಸ್ ಉಪ ಆಯುಕ್ತರಿಗೆ ಜನವರಿ 12ರಂದು ಈ ಬಗ್ಗೆ ಪತ್ರ ಬರೆದಿದ್ದರು. ಇದರ ಹೊರತಾಗಿಯೂ ಇವರ ಶಸ್ತ್ರಾಸ್ತ್ರಗಳ ಪರವಾನಗಿಗಳನ್ನು ರದ್ದುಪಡಿಸಿರಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಅಕ್ರಮವಾಗಿ ಶಸ್ತ್ರಾಸ್ತ್ರ ಪರವಾನಗಿಗಳನ್ನು ಅನರ್ಹ ವ್ಯಕ್ತಿಗಳಿಗೆ ನೀಡುವಲ್ಲಿ ಅಂದಿನ ಡಿ.ಸಿ., ಎ.ಡಿ.ಸಿ. ಪಾತ್ರ ವಹಿಸಿರುವುದು ಕಂಡುಬಂದಿದೆ ಎಂದು ಸಿಬಿಐ ವಕ್ತಾರ ಆರ್. ಸಿ. ಜೋಶಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬುರುಂಡಿ ಚಿನ್ನದ ಗಣಿಯಲ್ಲಿ 13 ಕಾರ್ಮಿಕರ ಸಾವು

ನೈರೋಬಿ (ಎಪಿ): ಬುರುಂಡಿಯ ವಾಯವ್ಯ ಭಾಗದ ಸಿಬಿಟೋಕ್ ಪ್ರಾಂತ್ಯದಲ್ಲಿ ಸುರಿದ ಧಾರಾಕಾರ ಮಳೆಯಿಂದ ಚಿನ್ನದ ಗಣಿಯಲ್ಲಿ ನೀರು ತುಂಬಿದ್ದು, ಅದರಲ್ಲಿನ ಹೊಂಡಕ್ಕೆ ಬಿದ್ದ 13 ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಹೊಂಡದಲ್ಲಿ ಬಿದ್ದ ಕಾರ್ಮಿಕರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ ಎಂದು ಪ್ರಾಂತ್ಯದ ಜಿಲ್ಲಾ ಆಡಳಿತಾಧಿಕಾರಿ ನಿಕೋಡೆಮೆ ಡಹಾಬೋನ್ಯಿಮನ ಹೇಳಿದ್ದಾರೆ.

ಬುರುಂಡಿಯ ವಾಯವ್ಯ ಮತ್ತು ಈಶಾನ್ಯ ಭಾಗಗಳಲ್ಲಿನ ಚನ್ನದ ಗಣಿಗಳಲ್ಲಿ ಇಂತಹ ದುರಂತಗಳು ಸಾಮಾನ್ಯ ಎಂಬಂತಾಗಿದೆ. ಅಧಿಕಾರಿಗಳ ಕಣ್ಣು ತಪ್ಪಿಸಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗುವ ಕಾರ್ಮಿಕರು ಕತ್ತಲೆಯಲ್ಲಿ ಕೆಲಸಕ್ಕೆ ಇಳಿಯುವುದೇ ಇಂತಹ ದುರಂತಗಳಿಗೆ ಕಾರಣ ಎನ್ನಲಾಗಿದೆ.

ನೇಪಾಳದ ಹೆಚ್ಚುವರಿ ವಿದ್ಯುತ್ ಭಾರತಕ್ಕೆ ಮಾರಾಟ?

ಕಠ್ಮಂಡು (ಪಿಟಿಐ): ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ ಪ್ರಚಂಡ ಅವರ ನವದೆಹಲಿ ಭೇಟಿಯ ವೇಳೆ ದೇಶದಲ್ಲಿ ಬಳಸಿ ಉಳಿದ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಭಾರತಕ್ಕೆ ಮಾರಾಟ ಮಾಡುವ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ.

ಪ್ರಚಂಡ ಅವರ ದೆಹಲಿ ಭೇಟಿಯ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಏಪ್ರಿಲ್ ಎರಡನೇ ವಾರದ ಬಳಿಕ ದೆಹಲಿಗೆ ತೆರಳುವ ಸಾಧ್ಯತೆ ಇದೆ ಎಂದು 'ಕಠ್ಮಂಡು ಪೋಸ್ಟ್' ವರದಿ ಮಾಡಿದೆ.

ಸುಂಟರಗಾಳಿ: ಸಾವನ್ನಪ್ಪಿದವರ ಸಂಖ್ಯೆ 26ಕ್ಕೆ ಏರಿಕೆ

ಅಮೆರಿಕ (ಎಪಿ): ಅಮೆರಿಕದ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಕಳೆದ ವಾರದಿಂದ ಬೀಸುತ್ತಿರುವ ಭೀಕರ ಸುಂಟರಗಾಳಿಗೆ ಸಾವನ್ನಪ್ಪಿದವರ ಸಂಖ್ಯೆ 26ಕ್ಕೆ ಏರಿಕೆಯಾಗಿದೆ.

ಅರ್ಕಾನ್‌ಸಾಸ್ ರಾಜಧಾನಿ ಲಿಟ್ಲ್ ರಾಕ್‌ನಲ್ಲಿ ಶನಿವಾರ ನಡೆಯುತ್ತಿದ್ದ ಸಂಗೀತ ಕಛೇರಿಯೊಂದರ ಮೇಲ್ಚಾವಣಿ ಕುಸಿದಿದೆ. ಇಂಡಿಯಾನಾ, ವೈನ್ನೆ ಸೇರಿ ಒಟ್ಟು 8 ರಾಜ್ಯಗಳಲ್ಲಿ ಮನೆ, ವಾಣಿಜ್ಯ ಕಟ್ಟಡಗಳಿಗೆ ಹಾನಿಯಾಗಿದ್ದು, ಮರಗಳು ಧರೆಗುರುಳಿವೆ. ಆದರೆ ಯಾರಿಗೂ ಗಾಯಗಳಾಗಿಲ್ಲ.

ಮೂವರು ಬ್ರಿಟಿಷ್ ನಾಗರಿಕರ ಬಂಧನ, ಸಂಧಾನ ಯತ್ನ

ಲಂಡನ್ (ಎಎಫ್‌ಪಿ): ಅಫ್ಗಾನಿಸ್ತಾನದ ತಾಲಿಬಾನ್‌ಗಳು ಬ್ರಿಟನ್ನಿನ ಮೂವರನ್ನು ಬಂಧಿಸಿದ್ದು, ಅವರನ್ನು ಬಿಡಿಸಿಕೊಳ್ಳಲು ಬ್ರಿಟಿಷ್ ಸರ್ಕಾರ ಮಾತುಕತೆಯಲ್ಲಿ ನಿರತವಾಗಿದೆ ಎಂದು ಗೃಹ ಕಾರ್ಯದರ್ಶಿ ಸುಯೆಲ್ಲಾ ಬ್ರೇವರ್‌ಮನ್ ಹೇಳಿದ್ದಾರೆ. ಇಬ್ಬರನ್ನು ಕಳೆದ ಜನವರಿಯಲ್ಲೇ ತಾಲಿಬಾನ್‌ಗಳು ವಶಕ್ಕೆ ಪಡೆದಿದ್ದವು. ಇನ್ನೊಬ್ಬ ವ್ಯಕ್ತಿ ಯಾವಾಗ ಬಂಧನಕ್ಕೆ ಒಳಗಾದ ಎಂಬ ಮಾಹಿತಿ ಲಭಿಸಿಲ್ಲ.

ಅಸ್ಸಾಂ ಸಿ.ಎಂಗೆ ಬೆದರಿಕೆ: ಖಾಲಿಸ್ತಾನ ಪರ ಕಾರ್ಯಕರ್ತನ ವಿರುದ್ಧ ಪ್ರಕರಣ

ಗುವಾಹಟಿ: ಅಸ್ಸಾಂನಲ್ಲಿ ಖಾಲಿಸ್ತಾನ ಪರ ಜನರನ್ನು ಹಿಂಸಿಸಲಾಗಿದೆ ಎಂದು ಆರೋಪಿಸಿರುವ 'ಜಸ್ಟೀಸ್ ಫಾರ್ ಸಿಖ್' ಎಂಬ ನಿಷೇಧಿತ ಖಾಲಿಸ್ತಾನ ಪರ ಸಂಘಟನೆಗೆ ಸೇರಿರುವ ಸದಸ್ಯನೊಬ್ಬ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರಿಗೆ ಬೆದರಿಕೆ ಕರೆ ಮಾಡಿದ್ದಾನೆ. ಈ ಹಿನ್ನೆಲೆಯಲ್ಲಿ ಅಸ್ಸಾಂ ಪೊಲೀಸರು ಹಿಮಂತ ಅವರ ಭದ್ರತೆಯನ್ನು ಭಾನುವಾರ ಮತ್ತಷ್ಟು ಬಿಗಿಗೊಳಿಸಿದ್ದಾರೆ.

ಹಲವಾರು ಮೊಬೈಲ್ ಫೋನ್‌ಗಳಿಂದ ಅಸ್ಸಾಂನ ಹಲವು ಪತ್ರಕರ್ತರಿಗೆ ಕರೆ ಬಂದಿದೆ. ಧ್ವನಿ ಮುದ್ರಿತ ಸಂದೇಶವನ್ನು ಇದರಲ್ಲಿ ಬಿತ್ತರಿಸಲಾಗಿದೆ. ಖಾಲಿಸ್ತಾನ ಪರ ಕಾರ್ಯಕರ್ತ ಗುರ್ಪತ್ವಾನ್ ಸಿಂಗ್ ಪನ್ನು ಎಂದು ತನ್ನ ಪರಿಚಯ ಹೇಳಿಕೊಳ್ಳುವ ವ್ಯಕ್ತಿಯು, ಅಸ್ಸಾಂನಲ್ಲಿ ಖಾಲಿಸ್ತಾನ ಪರ ಹೋರಾಟಗಾರರನ್ನು ಹಿಂಸಿಸಲಾಗುತ್ತಿದೆ ಎಂದು ಆರೋಪಿಸುತ್ತಾನೆ. ಹಿಮಂತ ಅವರನ್ನು ಕುರಿತು, 'ಇದು ಖಾಲಿಸ್ತಾನ ಪರವಿರುವ ಸಿಖ್ಖರು ಮತ್ತು ಭಾರತ ಸರ್ಕಾರದ ನಡುವೆ ನಡೆಯುತ್ತಿರುವ ಹೋರಾಟ. ಈ ಹಿಂಸಾಚಾರಕ್ಕೆ ನೀವು ಬಲಿ ಆಗಬೇಡಿ. ನಿಮ್ಮ ಸರ್ಕಾರವು ಸಿಖ್ಖರನ್ನು ಹಿಂಸಿಸಿದರೆ ಮತ್ತು ಪೀಡಿಸಿದರೆ, ಅದಕ್ಕೆ ನಿಮ್ಮನ್ನು ಜವಾಬ್ದಾರರನ್ನಾಗಿ ಮಾಡಬೇಕಾಗುತ್ತದೆ' ಎಂದು ಬೆದರಿಕೆ ಒಡ್ಡಿದ್ದಾನೆ.

ಈ ಸಂದೇಶವು ಭಾನುವಾರ ಸಂಜೆ ಹೊತ್ತಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಅಸ್ಸಾಂನ ಪೊಲೀಸ್ ಮಹಾನಿರ್ದೇಶಕರು, ಪನ್ನು ಒಬ್ಬ ಭಯೋತ್ಪಾದಕ. ಆತನ ವಿರುದ್ಧ ಭಾರತೀಯ ದಂಡ ಸಂಹಿತೆಯ ಕೆಲ ಸೆಕ್ಷನ್‌ಗಳು ಮತ್ತು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ಟ್ವೀಟ್ ಮಾಡಿದ್ದಾರೆ.

1998ರ 'ನಕಲಿ' ಎನ್‌ಕೌಂಟರ್: 36 ಆರೋಪಿಗಳು ಖುಲಾಸೆ

ಭದೋಹಿ, ಉತ್ತರ ಪ್ರದೇಶ (ಪಿಟಿಐ): ನಾಲ್ಕು ಜನರ ಎನ್‌ಕೌಂಟರ್‌ಗೆ ಸಂಬಂಧಿಸಿದ 25 ವರ್ಷಗಳ ಹಿಂದಿನ ಪ್ರಕರಣದಲ್ಲಿ ಇಲ್ಲಿನ ಜಿಲ್ಲಾ ನ್ಯಾಯಾಲಯ 34 ಪೊಲೀಸ್ ಸಿಬ್ಬಂದಿ ಸೇರಿದಂತೆ 36 ಮಂದಿಯನ್ನು ಖುಲಾಸೆಗೊಳಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಶೈಲೋಜ್ ಚಂದ್ರ ಅವರು ಶುಕ್ರವಾರ 36 ಜನರನ್ನು ಖುಲಾಸೆಗೊಳಿಸಿದರು.

ಈ ಬಗ್ಗೆ ಮಾಹಿತಿ ನೀಡಿದ ಹೆಚ್ಚುವರಿ ಜಿಲ್ಲಾ ಸರ್ಕಾರಿ ವಕೀಲ (ಎಡಿಜಿಸಿ) ವಿಕಾಸ್ ನಾರಾಯಣ್ ಸಿಂಗ್, '1998 ರ ಅಕ್ಟೋಬರ್‌ನಲ್ಲಿ ದರೋಡೆ ಮಾಡಲು ಸರೋಯ್ ಪೆಟ್ರೋಲ್ ಪಂಪ್‌ಗೆ ಹೋಗಿದ್ದ ಕ್ರಿಮಿನಲ್ ಧನಂಜಯ್ ಸಿಂಗ್ ಸೇರಿದಂತೆ ನಾಲ್ವರನ್ನು ಗುಂಡಿಕ್ಕಿ ಕೊಲ್ಲಲಾಯಿತು ಎಂದು ಪೊಲೀಸರು ಹೇಳಿದ್ದರು' ಎಂದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 17/04/23 ಜಾರ್ಖಂಡ್, ಕೋಲ್ಕತಾ, ಭುವನೇಶ್ವರ್. 26/04/23 ಜಮ್ಮು, ಕಾಶ್ಮೀರ, ವೈಷ್ಣೋದೇವಿ 08/06/23 ಚಾರ್ಧಮ್ ಯಾತ್ರ. 9964527782, 9591017782

13 ದಿನಗಳ ಉತ್ತರಭಾರತ ಪ್ರವಾಸ. 8 ದಿನಗಳ ಸಿಕ್ಕಿಂ,ಡಾರ್ಜಿಲಿಂಗ್ ಹಾಗು ಚಾರ್ ಧಾಮ್‌ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ ಬೆಂಗಳೂರು. 9740228186, 9980270467

5.07.2023 ರಿಂದ 13 ದಿನಗಳು ಅಮರನಾಥ, ವೈಷ್ಣೋದೇವಿ ಶ್ರೀನಗರ, ಅಮೃತಸರ, ಸಂಪರ್ಕಿಸಿ: ಶ್ರೀ ಗಂಗಾ ಟೂರಿಸ್ಟ್. ಬೆಂಗಳೂರು. 9480253807/ 8105522123

Travel

ಸೋಮನಾಥ್, ದ್ವಾರಕ ಮಾತೃಗಯಾ, ಉಜ್ಜಯಿನಿ,ಓಂಕಾರೇಶ್ವರ 12.04.2023 ರಿಂದ 10 ದಿನಗಳು. ಕಾಶಿ,ಗಯಾ ನೈಮಿಶಾರಣ್ಯ,ಪುರಿ,ಭುವನೇಶ್ವರ್ 17.04.2023 ರಿಂದ 10 ದಿನಗಳು. ಕಾಶ್ಮೀರ್,ಗುಲ್ ಮಾರ್ಗ್ ಸೆಲ್‌ಗಾಂವ್ ವೈಷ್ಣೋದೇವಿ 17.04.2023 22.04.2023 ರಿಂದ 9 ದಿನಗಳು. ನೇಪಾಳ ಮುಕ್ತಿನಾಥ್,ಕಾಶಿ 15.05.2023 ರಿಂದ 10 ದಿನಗಳು ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು-18

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ,ITI ನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 9686220858

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ 9148525233, 7899235388

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.13,000 - 17,000. ph: 8951315839, 9880120052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

TRAVEL CORNER

BGS WORLD TOURS ಬಿಜಿಎಸ್ ವರ್ಲ್ಡ್ ಟೂರ್ಸ್‌ನಿಂದ
ಉತ್ತಮ ಪ್ರವಾಸಗಳು: 15.4.2023, ಕಾಶಿ, ಗಯಾ, ಅಯೋಧ್ಯ, ಅಲಹಾಬಾದ, ನೇಮಿಶಾರಣ್ಯ 6 ದಿನಗಳು ರೈಲಿನಲ್ಲಿ 20,000/–, ವಿಮಾನದಲ್ಲಿ 35,000/–. 20.4.2023 ಮತ್ತು 2.5.2023 ಜೈಪುರ, ಆಗ್ರ, ಕಾಶಿ, ಹರಿದ್ವಾರ, ದೆಹಲಿ 12 ದಿನಗಳು ರೈಲಿನಲ್ಲಿ 35,000/–, ವಿಮಾನದಲ್ಲಿ 45,000/–. 18.4.2023 ಗುಜರಾತ್ 6 ದಿನಗಳು ರೈಲಿನಲ್ಲಿ 23,000/– ವಿಮಾನದಲ್ಲಿ 35,000/–. 25.4.2023, 5.5.2023 ಶ್ರೀಲಂಕಾ ರಾಮಾಯಣ ಪ್ರವಾಸ 7 ದಿನಗಳು 59,000/–. 10 ದಿನಗಳು 78,000/– ಸಾವಿರ. 15.4.2023 ದುಬೈ ಫೆಸ್ಟಿವಲ್ 5 ದಿನಗಳು. 2.5.2023 ಸಿಂಗಪೂರ್, ಮಲೇಷಿಯಾ, ಥೈಲ್ಯಾಂಡ್ 7/12 ದಿನಗಳು 1.9.2023 ದುಬೈ, ಇರಾನ್, ಅಜರ್‌ಬೈಜಿನ್ 16 ದಿನಗಳು. ಸಂಪರ್ಕಿಸಿ: ಎನ್.ಎಸ್. ಇಂದ್ರೇಶ್. ಪೀಣ್ಯ ದಾಸರಹಳ್ಳಿ ಮತ್ತು ವಿಜಯನಗರ, ಬೆಂಗಳೂರು.
ಮೊಬೈಲ್ 9845133785, 9686200695

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ವ್ಯಾಪಾರ

Business Offers

Business For Sale

HOTEL FOR Sale Successfully Running Veg & Non-veg With Dining & Catering Services Tumkur Road, Near Nelamangala Toll Contact: 9900063243, 9743184133, 9886688309

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಸೈಬರಾಬಾದ್ ಪೊಲೀಸರ ಕಾರ್ಯಾಚರಣೆ • ವ್ಯಕ್ತಿ ಬಂಧನ, ಇಬ್ಬರು ಆರೋಪಿಗಳಿಗೆ ಶೋಧ

67 ಕೋಟಿ ಜನರ ದತ್ತಾಂಶ ಕಳವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ದೇಶದಾದ್ಯಂತ 67 ಕೋಟಿಯಷ್ಟು ಜನರ ವೈಯಕ್ತಿಕ ಹಾಗೂ ಗೌಪ್ಯ ಮಾಹಿತಿಯನ್ನು ಕಳವು ಮಾಡಿ, ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಇಲ್ಲಿನ ಸೈಬರಾಬಾದ್ ಪೊಲೀಸರು ಬಂಧಿಸಿದ್ದಾರೆ.

ವಿನಯ್ ಭಾರದ್ವಾಜ್ ಬಂಧಿತ ಆರೋಪಿ. ಈತನಿಗೆ ಜನರ ವೈಯಕ್ತಿಕ ಹಾಗೂ ಗೌಪ್ಯ ಮಾಹಿತಿ ಒದಗಿಸುತ್ತಿದ್ದ ಆರೋಪಿಗಳಾದ ಅಮೀರ್ ಸೊಹೇಲ್ ಹಾಗೂ ಮದನಗೋಪಾಲ್ ಎಂಬುವವರ ಪತ್ತೆಗೆ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಡಿಸಿಪಿ (ಕ್ರೈಮ್ಸ್) ಕಲ್ಮೇಶ್ವರ ಶಿಂಗೇನವರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಯಾರ ಮಾಹಿತಿ ಕಳ್ಳತನ–ಮಾರಾಟ: ಹರಿಯಾಣದ ಫರೀದಾಬಾದ್‌ನಲ್ಲಿ ಆರೋಪಿಯು 'ಇನ್‌ಸ್ಪೈರ್ ವೆಬ್ಜ್' ಎಂಬ ವೆಬ್‌ಸೈಟ್ ಮೂಲಕ ಈ ಕಾರ್ಯಾಚರಣೆ ನಡೆಸುತ್ತಿದ್ದ ಎಂದು ಡಿಸಿಪಿ ಕಲ್ಮೇಶ್ವರ ಶಿಂಗೇನವರ ಹೇಳಿದ್ದಾರೆ.

'ಬೈಜೂಸ್, ವೇದಾಂತದ ವಿದ್ಯಾರ್ಥಿಗಳ ಮಾಹಿತಿ ವಿನಯ್ ಹೊಂದಿದ್ದ. ದೇಶದ ಎಂಟು ಮಹಾನಗರಗಳಲ್ಲಿನ 1.84 ಲಕ್ಷ ಕ್ಯಾಬ್ ಬಳಕೆದಾರರು, ಆರು ಮಹಾನಗರಗಳು ಹಾಗೂ ಗುಜರಾತ್ ರಾಜ್ಯ ಸೇರಿ 4.5 ಲಕ್ಷ ಉದ್ಯೋಗಿಗಳ ಮಾಹಿತಿಯನ್ನೂ ಆರೋಪಿ ಹೊಂದಿದ್ದ' ಎಂದು ಹೇಳಿದ್ದಾರೆ.

ಜಿಎಸ್‌ಟಿ ಪಾವತಿಸುವವರು, ಆರ್‌ಟಿಒ ಕಚೇರಿ, ಅಮೆಜಾನ್, ನೆಟ್‌ಫ್ಲಿಕ್ಸ್, ಯೂಟ್ಯೂಬ್, ಪೇಟಿಯಂ, ಫೋನ್‌ಪೆ, ಬಿಗ್‌ಬ್ಯಾಸ್ಕೆಟ್, ಬುಕ್ ಮೈಶೋ, ಇನ್‌ಸ್ಟಾಗ್ರಾಮ್, ಜೊಮಾಟೊ, ಪಾಲಿಸಿಬಜಾರ್, ಅಪ್‌ಸ್ಟಾಕ್ಸ್ ಸೇರಿದಂತೆ ಹಲವಾರು ಕಂಪನಿಗಳ ಗ್ರಾಹಕರ ಮಾಹಿತಿಯನ್ನು ವಿನಯ್ ಹೊಂದಿದ್ದ ಎಂದಿದ್ದಾರೆ.

'ರಕ್ಷಣಾ ಇಲಾಖೆ ಸಿಬ್ಬಂದಿ, ಪ್ಯಾನ್ ಕಾರ್ಡ್ ಹೊಂದಿರುವವರು, ವಿವಿಧ ರಾಜ್ಯಗಳಲ್ಲಿನ 9,10,11 ಹಾಗೂ 12ನೇ ತರಗತಿ ವಿದ್ಯಾರ್ಥಿಗಳು, ದೆಹಲಿ ವಿದ್ಯುತ್ ಕಂಪನಿಗಳ ಗ್ರಾಹಕರು, ಡಿಮ್ಯಾಟ್ ಖಾತೆ ಹೊಂದಿರುವವರು, ಹಲವಾರು ಮಂದಿಯ ಮೊಬೈಲ್ ನಂಬರ್‌ಗಳು, ವಿಮಾ ಪಾಲಿಸಿ ಹೊಂದಿರುವವರ ವೈಯಕ್ತಿಕ ಮಾಹಿತಿಯೂ ವಿನಯ್ ಬಳಿ ಇತ್ತು. ಕಾರುಗಳನ್ನು ಹೊಂದಿರುವವರು, ಉದ್ಯೋಗಾಕಾಂಕ್ಷಿಗಳು ಹಾಗೂ ಅನಿವಾಸಿ ಭಾರತೀಯರ ವೈಯಕ್ತಿಕ ಮಾಹಿತಿಯನ್ನು ಕೂಡ ಕಳವು ಮಾಡಿ, ಮಾರಾಟ ಮಾಡುತ್ತಿದ್ದ' ಎಂದು ತಿಳಿಸಿದ್ದಾರೆ. 'ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಬಳಕೆದಾರರು, ನೀಟ್ ವಿದ್ಯಾರ್ಥಿಗಳಿಗೆ ಸೇರಿದ ಮಾಹಿತಿಯ ಕಳವು ಮತ್ತು ಮಾರಾಟದಲ್ಲಿ ನಿರತವಾಗಿದ್ದ ಗುಂಪನ್ನು ಇತ್ತೀಚೆಗೆ ಬಂಧಿಸಿ, ವಿಚಾರಣೆಗೆ ಒಳಪಡಿಸಲಾಯಿತು. ಈ ಗುಂಪು, ಮಾಹಿತಿಯನ್ನು ಜಸ್ಟ್‌ಡಯಲ್ ಹಾಗೂ ಇದೇ ರೀತಿಯ ಇತರ ವೇದಿಕೆಗಳ ಮೂಲಕ ಮಾರಾಟ ಮಾಡುತ್ತಿತ್ತು. ಈ ಜಾಡನ್ನು ಹಿಡಿದು ತನಿಖೆ ಕೈಗೊಂಡಾಗ ವಿನಯ್ ಭಾರದ್ವಾಜ್‌ನ ಕೃತ್ಯವೂ ಬೆಳಕಿಗೆ ಬಂತು' ಎಂದು ಹೇಳಿದ್ದಾರೆ.

'ಆರೋಪಿಯು 104 ವಿಭಾಗಗಳಿಗೆ ಸಂಬಂಧಿಸಿದ 66.9 ಕೋಟಿಗೂ ಅಧಿಕ ಜನರ ವೈಯಕ್ತಿಕ ಮಾಹಿತಿಯನ್ನು ನಿರ್ವಹಣೆ ಮಾಡುತ್ತಿದ್ದ' ಎಂದಿದ್ದಾರೆ.

'ಕಳವು ಮಾಡಿ ಮಾರುತ್ತಿದ್ದ ಮಾಹಿತಿ ಪ್ರಮಾಣ ಅಗಾಧವಾದುದು. ಈ ಮಾಹಿತಿಯನ್ನು ಸೈಬರ್ ಅಪರಾಧಗಳು, ಮಾರ್ಕೆಟಿಂಗ್‌ಗೆ ಸಂಬಂಧಿಸಿದ ಕರೆಗಳು ಹಾಗೂ ಜಾಹೀರಾತಿಗಾಗಿ ಬಳಕೆ ಮಾಡಲಾಗುತ್ತಿತ್ತು. ಇದು ತಂದೊಡ್ಡಿರುವ ಅಪಾಯ ದೊಡ್ಡಮಟ್ಟದ್ದೇ ಇದ್ದು, ತನಿಖೆಯಿಂದ ಗೊತ್ತಾಗಲಿದೆ' ಎಂದು ಡಿಸಿಪಿ ಶಿಂಗೇನವರ ತಿಳಿಸಿದ್ದಾರೆ.

11 ಸಂಸ್ಥೆಗಳಿಗೆ ನೋಟಿಸ್

ಹೈದರಾಬಾದ್ (ಪಿಟಿಐ): ದೇಶದಾದ್ಯಂತ 67 ಕೋಟಿಯಷ್ಟು ಜನರ ವೈಯಕ್ತಿಕ ಮಾಹಿತಿ ಕಳವು ಹಾಗೂ ಮಾರಾಟ ಪ್ರಕರಣಕ್ಕೆ ಸಂಬಂಧಿಸಿ 11 ಸಂಸ್ಥೆಗಳಿಗೆ ಸೈಬರಾಬಾದ್ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಸಂಸ್ಥೆಗಳ ಪ್ರತಿನಿಧಿಗಳು ಒಂದು ವಾರದೊಳಗೆ ಪೊಲೀಸರ ಮುಂದೆ ಹಾಜರಾಗಬೇಕು. ತಮ್ಮ ಕಂಪನಿಗಳಲ್ಲಿ ದತ್ತಾಂಶವನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದ ವಿವರಗಳನ್ನು ಸಲ್ಲಿಸಬೇಕು' ಎಂಬುದಾಗಿ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಎರಡು ಸಾರ್ವಜನಿಕ ವಲಯದ ಬ್ಯಾಂಕುಗಳು, ಒಂದು ಖಾಸಗಿ ಬ್ಯಾಂಕ್, ಸಾಮಾಜಿಕ ಮಾಧ್ಯಮ ಸಂಸ್ಥೆ, ಐಟಿ ಕಂಪನಿ, ಆನ್‌ಲೈನ್ ದಿನಸಿ ಮಾರಾಟ ಕಂಪನಿ, ಡಿಜಿಟಲ್ ಪೇಮೆಂಟ್ ಆ್ಯಪ್ ಕಂಪನಿ ಹಾಗೂ ಒಂದು ಆನ್‌ಲೈನ್ ಮೂಲಕ ವಿಮಾ ಪಾಲಿಸಿ ಒದಗಿಸುವ ಕಂಪನಿ ಸೇರಿ 11 ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದೆ.

ಸಚಿವರ ಸಾಥ್ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ತಮ್ಮ ನಿಯೋಗದೊಂದಿಗೆ ಡಾರ್ಜಿಲಿಂಗ್‌ನಲ್ಲಿ ಶನಿವಾರ ರಾತ್ರಿ ಚಹಾ ಎಲೆಗಳನ್ನು ಕೀಳುವ ಕಾರ್ಯದಲ್ಲಿ ಭಾಗಿಯಾದ್ದರು. ಪಿಟಿಐ ಚಿತ್ರ

'ಕರಡು ಮಸೂದೆ ಸರಳ ಭಾಷೆಯಲ್ಲಿರಲಿ'

ನವದೆಹಲಿ (ಪಿಟಿಐ): ಮಸೂದೆಗಳನ್ನು ಸರಳ ಭಾಷೆಯಲ್ಲಿ ಸಿದ್ಧಪಡಿಸಿದರೆ ಅವುಗಳನ್ನು ಸಾಮಾನ್ಯ ಜನರೂ ಅರ್ಥ ಮಾಡಿಕೊಳ್ಳುತ್ತಾರೆ. ಜೊತೆಗೆ, ಉದ್ದೇಶಿತ ಕಾಯ್ದೆಯನ್ನು ರೂಪಿಸಲು ಇರುವ ಕಾರಣಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಂಸದೀಯ ಸ್ಥಾಯಿ ಸಮಿತಿಯೊಂದು ಹೇಳಿದೆ.

ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ನೇತೃತ್ವದ ಕಾನೂನು ಮತ್ತು ಸಿಬ್ಬಂದಿ ಸಮಿತಿ ಈ ಸಂಬಂಧ ಕೇಂದ್ರ ಕಾನೂನು ಸಚಿವಾಲಯಕ್ಕೆ ಶಿಫಾರಸು ಸಲ್ಲಿಸಿದೆ.

'ವೈಯಕ್ತಿಕ ಡಿಜಿಟಲ್ ಮಾಹಿತಿ ಸಂರಕ್ಷಣೆ ಮಸೂದೆ– 2022, ಭಾರತೀಯ ದೂರಸಂಪರ್ಕ ಮಸೂದೆ–2022 ಸೇರಿದಂತೆ ಇತ್ತೀಚೆಗೆ ಹಲವು ಮಸೂದೆಗಳನ್ನು ಕೇಂದ್ರ ಸರ್ಕಾರ ಮಂಡಿಸಿ, ಅನುಮೋದನೆ ಪಡೆದಿದೆ. ಇಂತಹ ಮಸೂದೆಗಳ ಉದ್ದೇಶಗಳನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದಾದಲ್ಲಿ, ಅವು ಸರಳ ಭಾಷೆಯಲ್ಲಿ ಇರಬೇಕು' ಎಂದು ಪ್ರತಿಪಾದಿಸಿದೆ.

ಸಿಐಸಿಗೆ ನೇರ ನೇಮಕಾತಿ– ಪರಿಶೀಲನೆಗೆ ಸೂಚನೆ: ಕೇಂದ್ರೀಯ ಮಾಹಿತಿ ಆಯೋಗದ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿ ನಡೆಸಲು ಇರುವ ಅಡೆತಡೆಗಳನ್ನು ಪರಿಶೀಲಿಸಲು ಸಿಬ್ಬಂದಿ ನೇಮಕಾತಿ ಆಯೋಗಕ್ಕೆ ಸಿಬ್ಬಂದಿ, ಸಾರ್ವಜನಿಕರ ಕುಂದುಕೊರತೆಗಳು, ಕಾನೂನು ಹಾಗೂ ನ್ಯಾಯ ಕುರಿತ ಸಂಸದೀಯ ಸ್ಥಾಯಿ ಸಮಿತಿ ಸೂಚಿಸಿದೆ.

ರಾಮನವಮಿ ಶೋಭಾಯಾತ್ರೆ ವೇಳೆ ಕಲ್ಲು ತೂರಾಟ • ಹೌರಾ ಶಾಂತ

ಹೂಗ್ಲಿ: ಭುಗಿಲೆದ್ದ ಹಿಂಸಾಚಾರ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಹೌರಾದಲ್ಲಿ ರಾಮನವಮಿಯ ಮೆರವಣಿಗೆ ವೇಳೆ ಕಳೆದ ವಾರ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದು ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದ್ದು, ಭಾನುವಾರ ಹೂಗ್ಲಿ ಜಿಲ್ಲೆಯಲ್ಲಿ ಬಿಜೆಪಿ ನೇತೃತ್ವದಲ್ಲಿ ನಡೆದ ರಾಮನವಮಿ ಶೋಭಾಯಾತ್ರೆ ವೇಳೆ ಕಲ್ಲೂ ತೂರಾಟ ನಡೆದಿದ್ದು, ಹಿಂಚಾಚಾರ ಭುಗಿಲೆದ್ದಿದೆ.

ಶೋಭಾ ಯಾತ್ರೆಯ ವೇಳೆ ಕಲ್ಲು ತೂರಾಟ ನಡೆದಿದ್ದರಿಂದ ಜನರು ರಕ್ಷಣೆಗಾಗಿ ಸುರಕ್ಷಿತ ಸ್ಥಳಗಳತ್ತ ಓಡುತ್ತಿದ್ದ ದೃಶ್ಯಗಳು ಕಂಡುಬಂದವು. ಶೋಭಾ ಯಾತ್ರೆಯಲ್ಲಿ ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ದಿಲೀಪ್ ಘೋಷ್ ಕೂಡ ಭಾಗವಹಿಸಿದ್ದರು ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಈ ಹಿಂಸಾಚಾರದ ಹಿಂದೆ ಬಿಜೆಪಿ ಮತ್ತು ಇತರ ಬಲಪಂಥೀಯ ಗುಂಪುಗಳಿವೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಈ ಆರೋಪ ತಳ್ಳಿಹಾಕಿರುವ ಬಿಜೆಪಿ, ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಏಜೆನ್ಸಿಯಿಂದ (ಎನ್‌ಐಎ) ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ. ಹೂಗ್ಲಿಯಿಂದ ಸುಮಾರು 40 ಕಿ.ಮೀ. ದೂರದಲ್ಲಿರುವ ಹೌರಾದಲ್ಲಿ ಸದ್ಯ ಪರಿಸ್ಥಿತಿ ಶಾಂತವಾಗಿದ್ದು, ನಿಯಂತ್ರಣದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಿಗ್ಗೆಯಿಂದಲೇ ವಾಹನ ಸಂಚಾರ ಸಹಜ ಸ್ಥಿತಿಗೆ ಮರಳಿದ್ದು, ಅಂಗಡಿಗಳು ಮತ್ತು ಮಾರುಕಟ್ಟೆಗಳಲ್ಲಿ ಎಂದಿನಂತೆ ವ್ಯಾಪಾರ, ವಹಿವಾಟು ಪುನರಾರಂಭವಾಗಿದೆ. ಹೌರಾ ಪಟ್ಟಣದ ಕಾಜಿಪರಾ ಮೂಲಕ ರಾಮನವಮಿ ಮೆರವಣಿಗೆ ಗುರುವಾರ ಹಾದುಹೋಗುತ್ತಿದ್ದಾಗ ಎರಡು ಗುಂಪುಗಳ ನಡುವೆ ಘರ್ಷಣೆಗಳು ನಡೆದು, ಹಿಂಸಾಚಾರ ಭುಗಿಲೆದ್ದಿತ್ತು.

77 ಮಂದಿ ಬಂಧನ: ರಾಮನವಮಿ ಆಚರಣೆಯ ಸಂದರ್ಭದಲ್ಲಿ ನಳಂದಾ ಜಿಲ್ಲೆಯ ಬಿಹಾರ್ ಷರೀಫ್ ನಗರದಲ್ಲಿ ನಡೆದಿದ್ದ ಕೋಮು ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿ ಒಟ್ಟು 77 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಬಿಹಾರ್ ಷರೀಫ್‌ನಲ್ಲಿ ಪರಿಸ್ಥಿತಿಯು ಸಂಪೂರ್ಣ ಹತೋಟಿಯಲ್ಲಿದ್ದು, ಶಾಂತಿ ನೆಲೆಸಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿ ಮೊಕ್ಕಾಂ ಮಾಡಿದ್ದಾರೆ ಎಂದು ಬಿಹಾರ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಪರಿಸ್ಥಿತಿ ಅವಲೋಕಿಸಿದ ಶಾ: ಬಿಹಾರದಲ್ಲಿ ನಡೆದ ಹಿಂಸಾಚಾರದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ.

ಬಿಹಾರದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರೊಂದಿಗೆ ಅಮಿತ್ ಶಾ ಚರ್ಚೆ ನಡೆಸಿ, ಈಗಿನ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಹಾರ ಸರ್ಕಾರದ ಕೋರಿಕೆಯ ಮೇರೆಗೆ ಘರ್ಷಣೆಯನ್ನು ನಿಯಂತ್ರಿಸಲು ಹೆಚ್ಚುವರಿ ಅರೆಸೇನಾ ಪಡೆಗಳನ್ನು ಬಿಹಾರಕ್ಕೆ ರವಾನಿಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ.

ಸಸಾರಾಮ್ ಮತ್ತು ಬಿಹಾರ ಷರೀಫ್ ಪಟ್ಟಣಗಳಲ್ಲಿ ಘರ್ಷಣೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

'ಪ್ರಧಾನಿ ಮೋದಿಯವರೇಕೆ ಮೌನವಹಿಸಿದ್ದಾರೆ?'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಭುಗಿಲೆದ್ದಿರುವ ಕೋಮು ಗಲಭೆ ಬಗ್ಗೆ ಪ್ರಧಾನಿ ಮೋದಿ ಏಕೆ ಮೌನ ವಹಿಸಿದ್ದಾರೆ? ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಭಾನುವಾರ ಪ್ರಶ್ನಿಸಿದ್ದಾರೆ. ಜೊತೆಗೆ ಹಿಂಸಾಚಾರಕ್ಕೆ 2024ರ ಸಾರ್ವತ್ರಿಕ ಚುನಾವಣೆ ಕಾರಣವಾಗದಿರಲಿ ಎಂದಿದ್ದಾರೆ.

ಬಂಗಾಳ ಮತ್ತು ಬಿಹಾರದಲ್ಲಿ ಬೆಂಕಿ ಹಚ್ಚುವುದನ್ನು ನಿಲ್ಲಿಸಿ, ವಿಷ ಬೀಜ ಬಿತ್ತುವ ಕೆಲಸವನ್ನು ಮಾಡಬೇಡಿ, ಇದರಿಂದ ಸಾಮಾನ್ಯ ವ್ಯಕ್ತಿ ಬಲಿಯಾಗುತ್ತಾನೆ. ಇದು ಕೇವಲ ರಾಜಕಾರಣಿಗಳಿಗೆ ಮತ್ತು ಅವರ ಕಾರ್ಯತಂತ್ರಗಳಿಗೆ ಪ್ರಯೋಜನವಾಗಲಿದೆ ಎಂದು ದೇಶದ ಜನತೆಯಲ್ಲಿ ಮನವಿ ಮಾಡಿದ್ದಾರೆ. ಈ ಬಗ್ಗೆ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಮಾತನಾಡಬೇಕು, ಈ ರೀತಿಯ ಹಿಂಸಾಚಾರವನ್ನು ಖಂಡಿಸಬೇಕು. ಈ ಹಿಂಸಾಚಾರದ ನಡುವೆ ಅವರಿಬ್ಬರೂ ಮಾತನಾಡದಿರುವುದು ದುರದೃಷ್ಟಕರ, ಅವರೇಕೆ ಸುಮ್ಮನಿದ್ದಾರೆ?, ಇದು ಒಂದು ಪಕ್ಷಕ್ಕೆ ಸಂಬಂಧಿಸಿದ್ದಲ್ಲ, ಹಿಂಸಾತ್ಮಕ ಪರಿಸರದಿಂದ ದೂರವುಳಿದು ದೇಶ ಮುಂದುವರೆಯಬೇಕಿದೆ ಎಂದರು.

ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಘಟನೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ರಾಜ್ಯಪಾಲರಾದ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರ ಬಳಿ ಪರಿಸ್ಥಿತಿ ನಿಯಂತ್ರಿಸಲು ಆದೇಶ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ ಇಷ್ಟು ಕಾಳಜಿ ಸಾಕಾಗುವುದಿಲ್ಲ ಎಂದು ಸಿಬಲ್ ಹೇಳಿದ್ದಾರೆ.

'ಕಾಂಗ್ರೆಸ್ ಫೈಲ್ಸ್' ವಿಡಿಯೊ ಮೊದಲ ಕಂತು ಬಿಡುಗಡೆ

ಚುನಾವಣೆ ಅಭಿಯಾನಕ್ಕಿಳಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಗೆ 2024ರಲ್ಲಿ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಇತರೆ ಪ್ರತಿಪಕ್ಷಗಳನ್ನು ಮಣಿಸಲು ಪಣ ತೊಟ್ಟಿರುವ ಆಡಳಿತಾರೂಢ ಬಿಜೆಪಿ, ಹಿಂದುತ್ವಕ್ಕೆ ಒತ್ತು ನೀಡುವುದರ ಜೊತೆಗೆ, ಭ್ರಷ್ಟಾಚಾರ ಹಾಗೂ ವಂಶಾಡಳಿತ ವಿಷಯಗಳನ್ನು ಆದ್ಯತೆಯಾಗಿಸಿಕೊಂಡು ಚುನಾವಣಾ ಪ್ರಚಾರಕ್ಕೆ ಇಳಿದಿದೆ. ಇದರ ಭಾಗವಾಗಿ, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಿದೆ. ಬಿಜೆಪಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ 'ಕಾಂಗ್ರೆಸ್ ಫೈಲ್ಸ್' ಹೆಸರಿನ ಸರಣಿಯ ಮೊದಲ ವಿಡಿಯೊವನ್ನು ಅಪ್‌ಲೋಡ್ ಮಾಡಲಾಗಿದೆ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ನಡೆದಿದ್ದವು ಎನ್ನಲಾದ ಹಗರಣಗಳನ್ನು ಈ ವಿಡಿಯೊ ಒಳಗೊಂಡಿದೆ.

ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂಬ ವಿಚಾರ ಅಥವಾ ಪ್ರಧಾನಿ ನರೇಂದ್ರ ಮೋದಿ–ಉದ್ಯಮಿ ಗೌತಮ್ ಅದಾನಿ ಅವರ ನಡುವೆ ಇದೆ ಎನ್ನಲಾದ ನಂಟಿನ ವಿಚಾರಗಳ ಪೈಕಿ ಯಾವ ವಿಷಯವನ್ನು ಆದ್ಯತೆಯಾಗಿಸಿಕೊಂಡು ಬಿಜೆಪಿ ವಿರುದ್ಧ ಹೋರಾಟ ನಡೆಸಬೇಕು ಎಂಬ ಬಗ್ಗೆ ಕಾಂಗ್ರೆಸ್ ಹಾಗೂ ಇತರೆ ಪ್ರತಿಪಕ್ಷಗಳು ಒಮ್ಮತಕ್ಕೆ ಬರುವುದು ಇನ್ನೂ ಬಾಕಿಯಿದೆ. ಈ ನಡುವೆಯೇ, ಬಿಜೆಪಿಯು 2004–2014ರ ಅವಧಿಯಲ್ಲಿ ಯುಪಿಎ ಸರ್ಕಾರದಲ್ಲಿ ನಡೆದಿದ್ದವು ಎನ್ನಲಾಗಿರುವ ಹಗರಣಗಳನ್ನೇ ಚುನಾವಣಾ ಸರಕಾಗಿ ಬಳಸಿಕೊಳ್ಳಲು ಮೊದಲ ಹೆಜ್ಜೆಯಿರಿಸಿದೆ.

2ಜಿ ಹಗರಣ, ಕಲ್ಲಿದ್ದಲು ಗಣಿ ಹರಾಜಿನಲ್ಲಿ ನಡೆದಿದೆ ಎನ್ನಲಾದ ಅಕ್ರಮ, 2010ನೇ ಕಾಮನ್‌ವೆಲ್ತ್ ಗೇಮ್ಸ್ ಆಯೋಜನೆಯ ಅಸಮರ್ಪಕ ನಿರ್ವಹಣೆ ವಿಚಾರಗಳನ್ನು ಬಿಜೆಪಿ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಪ್ರಸ್ತಾಪಿಸಲಾಗಿದೆ. ಮೂರು ನಿಮಿಷಗಳ ವಿಡಿಯೊದಲ್ಲಿ ಸೋನಿಯಾ ಗಾಂಧಿ ಕುಟುಂಬ ಸದಸ್ಯರು, ಕಾಂಗ್ರೆಸ್ ಮುಖಂಡರಾದ ಸುರೇಶ್ ಕಲ್ಮಾಡಿ, ಪವನ್ ಬನ್ಸಾಲ್, ಡಿಎಂಕೆ ಮುಖಂಡರಾದ ಎ. ರಾಜಾ ಹಾಗೂ ಕನಿಮೊಳಿ ಅವರ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಯುಪಿಎ ಅವಧಿಯಲ್ಲಿ ₹4 ಲಕ್ಷ ಕೋಟಿ ಮೊತ್ತದ ಹಗರಣ ನಡೆದಿದ್ದರೂ, ರೋಮ್ ದೊರೆ ನೀರೊ ರೀತಿಯಲ್ಲಿ ಮನಮೋಹನ್ ಸಿಂಗ್ ಅವರು 'ಮೌನಿ ಬಾಬಾ' ಆಗಿದ್ದರು ಎಂದು ವಿಡಿಯೊದಲ್ಲಿ ಆರೋಪಿಸಲಾಗಿದೆ.

ಪ್ರತಿಪಕ್ಷಗಳು ಆರಂಭಿಸಿರುವ 'ಭ್ರಷ್ಟಾಚಾರಿ ಬಚಾವೋ ಆಂದೋಲನ'ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಟೀಕಿಸಿದ್ದರು. ಜಾರಿ ನಿರ್ದೇಶನಾಲಯ, ಸಿಬಿಐ ಸೇರಿದಂತೆ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ವಿರೋಧ ಪಕ್ಷಗಳನ್ನು ಮಾತ್ರ ಗುರಿಯಾಗಿಸಿ ಬಳಸಲಾಗುತ್ತಿದೆ ಎಂದು ಕಾಂಗ್ರೆಸ್ ಸೇರಿದಂತೆ 14 ಪ್ರತಿಪಕ್ಷಗಳು ಸುಪ್ರೀ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಆರೋಪಿಸಿವೆ.

ಕಲಾಕೃತಿಯೊಂದನ್ನು ಎರಡು ಕೋಟಿ ರೂಪಾಯಿಗೆ ಖರೀದಿಸುವಂತೆ ಸೋನಿಯಾ ಕುಟುಂಬದ ಸದಸ್ಯರೊಬ್ಬರು ಒತ್ತಡ ಹೇರಿದ್ದರು ಎಂಬುದರ ಸುತ್ತ ಇರುವ ವಿವಾದವನ್ನು ಎರಡನೇ ವಿಡಿಯೊ ಒಳಗೊಂಡಿರಲಿದೆ ಎನ್ನಲಾಗಿದೆ.

ಮೋದಿ ಪದವಿ: ಪುನಃ ಪ್ರಶ್ನೆ ಎತ್ತಿದ ಎಎಪಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿಯ ಸತ್ಯಾಸತ್ಯತೆ ಕುರಿತು ಮತ್ತೆ ಪ್ರಶ್ನೆ ಎತ್ತಿರುವ ಎಎಪಿ, ಈ ಕುರಿತು ತನಿಖೆ ನಡೆಸಿದರೆ ಮೋದಿ ಅವರು ಪದವಿ ಪಡೆದಿರುವುದು ಸುಳ್ಳು ಎಂದು ಸಾಬೀತಾಗುತ್ತದೆ ಎಂದು ಹೇಳಿದೆ.

ಮೋದಿ ಅವರು ಪದವಿ ಪಡೆದಿರುವ ಕುರಿತು ಮಾಹಿತಿ ನೀಡುವಂತೆ ಗುಜರಾತ್ ಹೈಕೋರ್ಟ್‌ಗೆ ಕೇಂದ್ರೀಯ ಮಾಹಿತಿ ಆಯೋಗ (ಸಿಐಸಿ) ನೀಡಿದ್ದ ಆದೇಶವನ್ನು ಗುಜರಾತ್ ಹೈಕೋರ್ಟ್ ಶುಕ್ರವಾರವಷ್ಟೇ ರದ್ದುಪಡಿಸಿತ್ತು. ಜೊತೆಗೆ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ₹25,000 ದಂಡ ವಿಧಿಸಿತ್ತು. ಅದರ ಬೆನ್ನಲ್ಲೇ ಎಎಪಿಯು ಮೋದಿ ಅವರ ಪದವಿ ವಿಚಾರವನ್ನು ಪ್ರಸ್ತಾಪಿಸಿದೆ.

ಈ ಕುರಿತು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಜ್ಯಸಭೆ ಸಂಸದ ಮತ್ತು ಪಕ್ಷದ ರಾಷ್ಟ್ರೀಯ ವಕ್ತಾರ ಸಂಜಯ್ ಸಿಂಗ್ ಅವರು, 'ಮೋದಿ ಅವರು ದೇಶದ ಎದುರು ಸತ್ಯ ಬಿಚ್ಚಿಡಬೇಕು. ಅವರ ಪದವಿ ಪ್ರಮಾಣ ಪತ್ರ ನಕಲಿ ಎಂದು ಸಾಬೀತಾದರೆ, ಚುನಾವಣಾ ಆಯೋಗಕ್ಕೆ ಸುಳ್ಳು ಮಾಹಿತಿ ಸಲ್ಲಿಸಿದ್ದಕ್ಕಾಗಿ ಅವರು ಲೋಕಸಭೆ ಸದಸ್ಯತ್ವ ಕಳೆದುಕೊಳ್ಳಲಿದ್ದಾರೆ ಮತ್ತು ಚುನಾವಣೆಗಳಲ್ಲಿ ಸ್ಪರ್ಧಿಸಲು ಅನರ್ಹರಾಗುತ್ತಾರೆ' ಎಂದು ಹೇಳಿದರು.

ಪ್ರಧಾನಿ ಅವರ ಪದವಿ ಕುರಿತು ಚರ್ಚೆ ಶುರುವಾದಾಗಿನಿಂದ ಬಿಜೆಪಿ ಸಂಪೂರ್ಣ ವ್ಯಾಕುಲಕ್ಕೊಳಗಾಗಿದೆ. ಸರ್ಕಾರದ ಎಲ್ಲಾ ಸಚಿವರು ಮತ್ತು ವಕ್ತಾರರು ಪ್ರಧಾನಿ ಅವರ ಪದವಿ ಪ್ರಮಾಣಪತ್ರವು ನಕಲಿಯಲ್ಲ ಎಂದು ಸಾಬೀತುಪಡಿಸಲು ಪ್ರಯಾಸಪಡುತ್ತಿದ್ದಾರೆ. ತನಿಖೆ ನಡೆಸಿದರೆ ಪದವಿ ಪ್ರಮಾಣಪತ್ರ ನಕಲಿ ಎಂದು ಸಾಬೀತಾಗುತ್ತದೆ ಮತ್ತು ಅವರ ಸಂಸತ್ ಸದಸ್ಯತ್ವ ರದ್ದಾಗುತ್ತದೆ ಎಂದರು. ದೆಹಲಿಯ ಎಎಪಿ ಸರ್ಕಾರದ ಭ್ರಷ್ಟಾಚಾರಗಳನ್ನು ತನಿಖಾ ಸಂಸ್ಥೆಗಳು ಬಹಿರಂಗಗೊಳಿಸಿದ್ದರ ಹಿನ್ನೆಲೆಯಲ್ಲಿ ಕೇಜ್ರಿವಾಲ್ ಅವರು ಮೋದಿ ವಿರುದ್ಧ ದಾಳಿ ನಡೆಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಬಯೊಮೆಟ್ರಿಕ್ ವಿವರ ನೀಡಲು ಹಿಂಜರಿಕೆ

ಆದಿವಾಸಿ, ಮುಸ್ಲಿಮರಿಂದ ವಿರೋಧ • ಸಿಎಸ್‌ಡಿಎಸ್ ಸಮೀಕ್ಷಾ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಡಳಿತ ವ್ಯವಸ್ಥೆ ಬಗ್ಗೆ ಇರುವ 'ಅಪನಂಬಿಕೆ' ಕಾರಣದಿಂದಾಗಿ ಆದಿವಾಸಿ ಹಾಗೂ ಮುಸ್ಲಿಂ ಸಮುದಾಯಕ್ಕೆ ಸೇರಿದ ಅಪರಾಧಿಗಳು, ವಿಚಾರಣಾಧೀನ ಕೈದಿಗಳು ಹಾಗೂ ಬಂಧಿತರು ತಮ್ಮ ಬಯೊಮೆಟ್ರಿಕ್ ದತ್ತಾಂಶವನ್ನು ಪೊಲೀಸರೊಂದಿಗೆ ಹಂಚಿಕೊಳ್ಳಲು ಹಿಂಜರಿಯುತ್ತಿದ್ದಾರೆ.

ಕಾಮನ್ ಕಾಸ್ ಆ್ಯಂಡ್ ಲೋಕ್‌ನೀತಿ– ಸೆಂಟರ್ ಫಾರ್ ಸ್ಟಡಿ ಡೆವೆಲಪಿಂಗ್ ಸೊಸೈಟೀಸ್ (ಸಿಎಸ್‌ಡಿಎಸ್) ಸಂಸ್ಥೆಯು ಸಿದ್ಧಪಡಿಸಿರುವ 'ಭಾರತದಲ್ಲಿ ಪೊಲೀಸ್‌ಗಿರಿಯ ಸ್ಥಿತಿಗತಿ ವರದಿ 2023: ಕಣ್ಗಾವಲು ಮತ್ತು ಖಾಸಗಿತನದ ಪ್ರಶ್ನೆ' ಎಂಬ ಸಮೀಕ್ಷಾ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ.

'ಕೆಲ ಸಮುದಾಯಗಳ ಜನಸಂಖ್ಯೆಗೆ ಹೋಲಿಸಿದರೆ ಅವರು ಬಂಧನಕ್ಕೆ ಒಳಗಾಗುತ್ತಿರುವ ಪ್ರಮಾಣವು ಇತರರಿಗಿಂತ ಬಹಳ ಹೆಚ್ಚು ಇದೆ. ಈ ಕಾರಣದಿಂದಾಗಿಯೇ ದತ್ತಾಂಶ ನೀಡಲು ಕೆಲ ಸಮುದಾಯಗಳು ಹಿಂಜರಿಯುತ್ತಿವೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ತಮಿಳುನಾಡಿನ ಜನರಲ್ಲಿ ಶೇ 56ರಷ್ಟು ಹಾಗೂ ಕರ್ನಾಟಕದ ಜನರಲ್ಲಿ ಶೇ 54ರಷ್ಟು ಮಂದಿ ಬಯೊಮೆಟ್ರಿಕ್ ದತ್ತಾಂಶವನ್ನು ಪೊಲೀಸರು ಪಡೆಯುವ ಕುರಿತು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಎರಡು ರಾಜ್ಯಗಳಲ್ಲಿ ಅತಿ ಹೆಚ್ಚು ಜನರು ವಿರೋಧ ವ್ಯಕ್ತಪಡಿಸಿದ್ದು, ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನಗಳಲ್ಲಿ ಇವೆ.

ಬಯೊಮೆಟ್ರಿಕ್ ದತ್ತಾಂಶವನ್ನು ಸಂಗ್ರಹಿಸಲು, ಅಪರಾಧ ಪ್ರಕ್ರಿಯೆ (ಗುರುತಿಸುವಿಕೆ) ಕಾಯ್ದೆ 2022ರಲ್ಲಿ ಅವಕಾಶ ನೀಡಲಾಗಿದೆ. ಈ ಕಾರಣಕ್ಕಾಗಿಯೇ ಸಾಮಾಜಿಕ ಕಾರ್ಯಕರ್ತರು ಈ ಕಾಯ್ದೆಯನ್ನು ವಿರೋಧಿಸುತ್ತಲೇ ಬಂದಿದ್ದಾರೆ.

ನಿರ್ದಿಷ್ಟ ಸಮುದಾಯದ ಜನರನ್ನು ಬಂಧಿಸುವ ಪ್ರಮಾಣ ಹೆಚ್ಚಿರುವುದೂ ದತ್ತಾಂಶ ನೀಡಲು ಹಿಂಜರಿಯುತ್ತಿರುವುದರ ಮತ್ತೊಂದು ಪ್ರಮುಖ ಕಾರಣ ಎಂದು ವರದಿಯಲ್ಲಿ ಹೇಳಲಾಗಿದೆ. ಉಳಿದವರಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಮುಸ್ಲಿಂ ಸಮುದಾಯದವರು ಜೈಲಿಗೆ ಹೋಗುವ ಪ್ರಮಾಣ ಹೆಚ್ಚಿರುತ್ತದೆ ಎಂಬ ಅಧಿಕೃತ ದಾಖಲೆಗಳ ಮಾಹಿತಿಯನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆದಿವಾಸಿಗಳ ಹಿಂಜರಿಕೆ ಯಾಕಾಗಿ?

ಅಭಿವೃದ್ಧಿ ಹೆಸರಲ್ಲಿ ಸರ್ಕಾರವು ಆದಿವಾಸಿಗಳ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಅಣೆಕಟ್ಟು ಕಟ್ಟುತ್ತದೆ. ಇದರಿಂದಾಗಿ ಸ್ವಂತ ಜಾಗವನ್ನು ಬಿಟ್ಟು ಬೇರೆಡೆ ಬದುಕು ಕಟ್ಟಿಕೊಳ್ಳುವ ಅನಿವಾರ್ಯ ಸೃಷ್ಟಿಯಾಗುತ್ತದೆ. ಆದ್ದರಿಂದ ಸರ್ಕಾರದ ಅತಿಕ್ರಮಣವನ್ನು ಆದಿವಾಸಿಗಳು ವಿರೋಧಿಸುತ್ತಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಇದಕ್ಕಾಗಿ, ಇರುವ ಕಾನೂನುಗಳ ಮೂಲಕ ಆದಿವಾಸಿಗಳನ್ನು ಬಂಧಿಸಿ, ಅವರ ಮೇಲೆ 'ಸುಳ್ಳು' ಪ್ರಕರಣಗಳನ್ನು ದಾಖಲಿಸಲಾಗುತ್ತದೆ. 'ನಮ್ಮನ್ನು ಹೆಚ್ಚಾಗಿ ನಕ್ಸಲ್ ಸಂಬಂಧಿತ ಕಾನೂನಿನ ಅಡಿಯಲ್ಲಿ ಬಂಧಿಸಲಾಗುತ್ತದೆ' ಎಂದು ಶೇ 28ರಷ್ಟು ಆದಿವಾಸಿಗಳು 'ಭಾರತದಲ್ಲಿ ಪೊಲೀಸ್‌ಗಿರಿಯ ಸ್ಥಿತಿಗತಿ ವರದಿ 2018'ರ ಸಮೀಕ್ಷೆಯಲ್ಲಿ ಹೇಳಿದ್ದರು.

'ಇಂಥ ಸಂದರ್ಭಗಳಲ್ಲಿ ಸರ್ಕಾರವನ್ನು ವಿರೋಧಿಸುವ ಆದಿವಾಸಿಗಳ ಮೇಲೆ ಕಣ್ಗಾವಲು ಇರಿಸಲು ಬಯೊಮೆಟ್ರಿಕ್ ದತ್ತಾಂಶಗಳನ್ನು ಬಳಸಿಕೊಳ್ಳುತ್ತದೆ' ಎಂದು ಆದಿವಾಸಿಗಳು ಹೇಳುತ್ತಾರೆ ಎಂದು ವರದಿಯಲ್ಲಿ ಹೇಳಲಾಗಿದೆ.



ಊಟಕ್ಕೆ ಅಸ್ಸಾಂ ಸಿ.ಎಂ ಆಹ್ವಾನಿಸುವೆ: ಕೇಜ್ರಿವಾಲ್

ಗುವಾಹಟಿ (ಪಿಟಿಐ): 'ಚಹಾಕೂಟ, ಊಟಕ್ಕಾಗಿ ಹಿಮಂತ ಬಿಸ್ವ ಶರ್ಮ ಅವರನ್ನು ನವದೆಹಲಿಯ ನನ್ನ ಮನೆಗೆ ಆಹ್ವಾನಿಸುತ್ತೇನೆ. ಆದರೆ, ಬೆದರಿಕೆ ಒಡ್ಡುವುದು ಮುಖ್ಯಮಂತ್ರಿ ಸ್ಥಾನದಲ್ಲಿರುವ ಶರ್ಮ ಅವರಿಗೆ ಶೋಭೆ ತರುವುದಿಲ್ಲ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ಹೇಳಿದರು.

'ಅಸ್ಸಾಂ ಜನರು ಒಳ್ಳೆಯವರು. ಇಲ್ಲಿನ ಜನರು ಅತಿಥಿಗಳನ್ನು ಸ್ವಾಗತಿಸುತ್ತಾರೆ. ಹಿಮಂತ ಬಿಸ್ವ ಶರ್ಮ ಅವರು ಇಲ್ಲಿನ ಜನರನ್ನು ನೋಡಿ ಕಲಿಯಬೇಕು' ಎಂದು ಹೇಳಿದರು.

ದೆಹಲಿ ವಿಧಾನಸಭೆಯಲ್ಲಿ ಮಾತನಾಡಿದ್ದ ಕೇಜ್ರಿವಾಲ್, 'ಶರ್ಮ ವಿರುದ್ಧ ಹಲವಾರು ಪ್ರಕರಣಗಳಿವೆ' ಎಂದು ಹೇಳಿದ್ದರು ಎನ್ನಲಾಗಿದೆ. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ಶರ್ಮ, 'ವಿಧಾನಸಭೆ ಹೊರಗಡೆ ಮಾತನಾಡಿ, ನನ್ನ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದರೆ ಕೇಜ್ರಿವಾಲ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವೆ' ಎಂದು ಶುಕ್ರವಾರ ಬೆದರಿಕೆ ಹಾಕಿದ್ದರು. ಈ ಹಿನ್ನೆಲೆಯಲ್ಲಿ ಕೇಜ್ರಿವಾಲ್ ಅವರಿಂದ ಇಂಥ ಹೇಳಿಕೆ ಹೊರಬಿದ್ದಿದೆ.

'ನನ್ನ ವಿರುದ್ಧ ಆರೋಪ ಮಾಡಿದ ಕೇಜ್ರಿವಾಲ್ ವಿರುದ್ಧ ಮೊಕದ್ದಮೆ ಹೂಡಲು ಬಯಸಿದ್ದೆ. ಆದರೆ, ಆತ ಒಬ್ಬ ಹೇಡಿ. ವಿಧಾನಸಭೆಯಲ್ಲಿ ನನ್ನ ವಿರುದ್ಧ ಆರೋಪಗಳನ್ನು ಮಾಡಿದ್ದಾರೆ' ಎಂದು ಕೇಜ್ರಿವಾಲ್ ವಿರುದ್ಧ ಹರಿಹಾಯ್ದಿದ್ದರು.

'ಕೇಜ್ರಿವಾಲ್ ಅವರು ಏಪ್ರಿಲ್ 2ರಂದು ಅಸ್ಸಾಂಗೆ ಬಂದು, ನನ್ನ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಲಿ. ಸಿಸೋಡಿಯಾ ವಿರುದ್ಧ ಹೂಡಿರುವಂತೆ, ಮರುದಿನವೇ ಕೇಜ್ರಿವಾಲ್ ವಿರುದ್ಧವೂ ಮಾನನಷ್ಟ ಮೊಕದ್ದಮೆ ದಾಖಲಿಸುವೆ' ಎಂದೂ ಹೇಳಿದ್ದರು.

ಮೋದಿ ವಿರೋಧಿ ಫಲಕ: ಎಎಪಿ ಸದಸ್ಯರ ಬಂಧನ

ಯಮುನಾನಗರ, ಹರಿಯಾಣ (ಪಿಟಿಐ): 'ಮೋದಿ ತೊಲಗಿಸಿ ದೇಶ ಉಳಿಸಿ' ಎಂಬ ಬರಹಗಳಿದ್ದ ಫಲಕಗಳನ್ನು ಪ್ರದರ್ಶಿಸಿದ ಆರೋಪದ ಮೇಲೆ ಎಎಪಿಯ 14 ಸದಸ್ಯರನ್ನು ಇಲ್ಲಿಯ ಪೊಲೀಸರು ಭಾನುವಾರ ವಶಕ್ಕೆ ತೆಗೆದುಕೊಂಡು ಬಳಿಕ ಬಿಡುಗಡೆ ಮಾಡಿದ್ದಾರೆ.

ನಗರದಲ್ಲಿ ಶಾಂತಿ, ಸುವ್ಯವಸ್ಥೆಗೆ ಭಂಗ ವುಂಟಾಗಬಹುದು ಎಂಬ ಆತಂಕದ ಮೇಲೆ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು ಎಂದು ಯಮುನಾ ನಗರ ಠಾಣಾಧಿಕಾರಿ ತಿಳಿಸಿದ್ದಾರೆ.

'ಶಾಂತಿಯುತ ಮಾದರಿಯಲ್ಲಿ ಪ್ರತಿಭಟನೆ ನಡೆಸುವ ಮತ್ತು ಧ್ವನಿ ಎತ್ತುವ ಹಕ್ಕನ್ನು ಸಂವಿಧಾನದಲ್ಲಿ ನೀಡಲಾಗಿದೆ. ಆದರೆ ಪ್ರತಿಭಟನೆಗೆ ಸರ್ಕಾರ ತೋರಿದ ಪ್ರತಿಕ್ರಿಯೆಯು ಅದಕ್ಕಿರುವ ಅಭದ್ರತೆಯನ್ನು ತೋರುತ್ತದೆ' ಎಂದು ಎಎಪಿ ನಾಯಕಿ ಚೈತ್ರಾ ಸರ್ವಾರ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಿಸೆಗಳ್ಳತನಕ್ಕೆ ಸುಪಾರಿ ಪಡೆದಿದ್ದೀರಾ: ಖರ್ಗೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಅಗತ್ಯ ಔಷಧಗಳ ಬೆಲೆ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಜನರ ಕಿಸೆಗಳ್ಳತನ ಮಾಡಲು ನೀವು ಸುಪಾರಿ ಪಡೆದಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

384 ಅಗತ್ಯ ಔಷಧಗಳು, ಔಷಧ ತಯಾರಿಕೆಯಲ್ಲಿ ಬಳಸುವ 1,000ಕ್ಕೂ ಹೆಚ್ಚು ರಾಸಾಯನಿಕಗಳ ಬೆಲೆಯನ್ನು ಶೇ 11ರಷ್ಟು ಹೆಚ್ಚಿಸಲು ಸರ್ಕಾರ ನಿರ್ಧರಿಸಿರುವ ಕುರಿತು ಮಾಧ್ಯಮಗಳು ವರದಿ ಮಾಡಿದ ಬೆನ್ನಲ್ಲೇ ಖರ್ಗೆ ಅವರು ಹೀಗೆ ಟ್ವೀಟ್ ಮಾಡಿದ್ದಾರೆ.

'ತನ್ನ ವ್ಯಕ್ತಿತ್ವಕ್ಕೆ ಧಕ್ಕೆ ತರಲು ವಿರೋಧಿಗಳು ವಿದೇಶಿಯರಿಗೆ ಸುಫಾರಿ ನೀಡಿದ್ದಾರೆ' ಎಂದು ಪ್ರಧಾನಿ ಮೋದಿ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಮರುದಿನವೇ ಖರ್ಗೆ ಹೀಗೆ ತಿರುಗೇಟು ನೀಡಿದ್ದಾರೆ.

ತನಿಖಾ ಸಂಸ್ಥೆಗಳ ದುರ್ಬಳಕೆ: 5ಕ್ಕೆ ಅರ್ಜಿ ವಿಚಾರಣೆ

ನವದೆಹಲಿ: ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ದೂರಿ ಕಾಂಗ್ರೆಸ್ ನೇತೃತ್ವದಲ್ಲಿ 14 ಪಕ್ಷಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಏಪ್ರಿಲ್ 5ರಂದು ನಡೆಸಲಿದೆ.

'ವಿಪಕ್ಷಗಳ ಒಗ್ಗಟ್ಟಿಗೆ ಕಾಂಗ್ರೆಸ್ ಆಧಾರ'

ನವದೆಹಲಿ (ಪಿಟಿಐ): ದೇಶದಲ್ಲಿ ವಿರೋಧ ಪಕ್ಷಗಳ ಒಗ್ಗಟ್ಟು ಮೂಡುತ್ತಿರುವುದು ಸ್ವಾಗತಾರ್ಹ. ಕಾಂಗ್ರೆಸ್ ಪಕ್ಷವೇ ನಿಜವಾದ ಆಧಾರದಂತೆ ಕಾರ್ಯನಿರ್ವಹಿಸಲಿದ್ದು, ಉಳಿದ ಪಕ್ಷಗಳು ಅದರೊಂದಿಗೆ ಸೇರಿಕೊಳ್ಳುತ್ತವೆ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಭಾನುವಾರ ಹೇಳಿದ್ದಾರೆ.

'ಒಂದು ವೇಳೆ ನಾನು ಪಕ್ಷದ ನಾಯಕತ್ವ ವಹಿಸಿದ್ದರೆ, ಮೈತ್ರಿಕೂಟದ ಸಂಚಾಲಕ ಜವಾಬ್ದಾರಿ ನಿರ್ವಹಿಸುವಂತೆ ಸಣ್ಣಪಕ್ಷವೊಂದಕ್ಕೆ ಅವಕಾಶ ನೀಡುತ್ತಿದ್ದೆ' ಎಂದೂ ತರೂರ್ ಹೇಳಿದ್ದಾರೆ.

'ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಅವರಿಗೆ ಜೈಲು ಶಿಕ್ಷೆಯಾಗಿರುವುದು ವಿರೋಧ ಪಕ್ಷಗಳ ಒಗ್ಗಟ್ಟಿಗೆ ಹೊಸ ದಿಕ್ಕು ತೋರಿದೆ. ಅನೇಕ ಪಕ್ಷಗಳು ಈಗ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಗಾದೆ ಮಾತನ್ನು ಅರ್ಥ ಮಾಡಿಕೊಳ್ಳಲು ಆರಂಭಿಸಿವೆ' ಎಂದಿದ್ದಾರೆ. 'ಬಿಜೆಪಿ ವಿರುದ್ಧ ಒಗ್ಗಟ್ಟಾಗಲು ವಿಪಕ್ಷಗಳಿಗೆ ಈಗ ಹೊಸ ಕಾರಣ ವೊಂದು ಸಿಕ್ಕಂತಾಗಿದೆ. ಮುಂದಿನ ವರ್ಷ ನಡೆಯುವ ಚುನಾವಣೆ ಬಿಜೆಪಿ ಪಾಲಿಗೆ ಕಠಿಣವಾಗಲಿದೆ' ಎಂದೂ ಪ್ರತಿಪಾದಿಸಿದರು.

'ಉನ್ನತ ಸ್ಥಾನಕ್ಕೇರಿದ ವ್ಯಕ್ತಿಗೆ ನಾಯಕತ್ವ ಏಕಾಂಗಿ ಭಾವನೆ ಮೂಡಿಸುತ್ತೆ'

ನಾರಾಯಣ ಮೂರ್ತಿ

ಅಹಮದಾಬಾದ್ (ಪಿಟಿಐ): 'ನಾಯಕತ್ವವು ವ್ಯಕ್ತಿಯೊಬ್ಬ ಉನ್ನತ ಸ್ಥಾನಕ್ಕೇರಿದ ನಂತರ ಆತನಲ್ಲಿ ಒಂಟಿತನದ ಭಾವನೆ ಮೂಡಿಸುತ್ತದೆ. ನಾನು ಇದನ್ನು ಅನುಭವಿಸಿದ್ದೇನೆ' ಎಂದು ಇನ್ಫೊಸಿಸ್ ಸಹಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಭಾನುವಾರ ಹೇಳಿದರು.

ಅಂಜನಾ ದತ್ತ ಅವರು ರಚಿಸಿರುವ, ಉದ್ಯಮಿ ಮದನ ಮೋಹಂಕ ಅವರ ಜೀವನಚರಿತ್ರೆ 'ಐ ಡಿಡ್ ವಾಟ್ ಐ ಹ್ಯಾಡ್ ಟು ಡು' ಬಿಡುಗಡೆ ಮಾಡಿ ಮಾತನಾಡಿದರು.

'ಮದನ್ ಕೂಡ ನಿನ್ನೆ ಇದೇ ಮಾತನ್ನು ಹೇಳಿದರು. ಈಗ ಅವರ ಪುತ್ರ ಮೆಹುಲ್ ಅವರಲ್ಲೂ ಇಂಥದೇ ಭಾವನೆ ಮನೆ ಮಾಡಿರುತ್ತದೆ' ಎಂದರು. 'ಮಾರ್ಗದರ್ಶನ ಕೋರಿ ನಿಮ್ಮತ್ತ ನೋಡುತ್ತಿರುವ ಲಕ್ಷಾಂತರ ಜನರ ಆತ್ಮವಿಶ್ವಾಸವನ್ನು ಹೆಚ್ಚಿಸುವುದು. ಅವರಿಗಾಗಿ ಸರಿಯಾದದ್ದನ್ನೇ ಮಾಡುವುದೇ ನಾಯಕತ್ವ ಎನಿಸುತ್ತದೆ' ಎಂದು ನಾರಾಯಣಮೂರ್ತಿ ಹೇಳಿದರು.

ಮದನ್ ಮೋಹಂಕ ಅವರು ತೇಗಾ ಇಂಡಸ್ಟ್ರೀಜ್ ಸಂಸ್ಥಾಪಕರು.

'ಸಾವರ್ಕರ್ ಗೌರವ ಯಾತ್ರೆ'

ಠಾಣೆ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇತ್ತೀಚೆಗೆ ಪತ್ರಿಕಾಗೋಷ್ಠಿವೊಂದರಲ್ಲಿ 'ನನ್ನ ಹೆಸರು ಸಾವರ್ಕರ್ ಅಲ್ಲ. ನನ್ನ ಹೆಸರು ಗಾಂಧಿ ಮತ್ತು ಗಾಂಧಿ ಯಾರ ಬಳಿಯೂ ಕ್ಷಮೆ ಕೇಳುವುದಿಲ್ಲ' ಎಂದು ಹೇಳಿದ್ದನ್ನು ವಿರೋಧಿಸಿ 'ಸಾವರ್ಕರ್ ಗೌರವ ಯಾತ್ರೆ'ಯನ್ನು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದಲ್ಲಿ, ಅವರ ಹುಟ್ಟೂರಾದ ಠಾಣೆಯಲ್ಲಿ ಭಾನುವಾರ ನಡೆಸಲಾಯಿತು.

ಹಿಂದುತ್ವವಾದಿ ವಿ.ಡಿ. ಸಾವರ್ಕರ್ ಅವರನ್ನು ಗೌರವಿಸಿ ಹಾಗೂ ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ವಿರೋಧಿಸಿ 'ಸಾವರ್ಕರ್ ಗೌರವ ಯಾತ್ರೆ'ಯನ್ನು ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ನಡೆಸುವುದಾಗಿ ಬಿಜೆಪಿ–ಶಿವಸೇನಾ (ಶಿಂದೆ ಬಣ) ಮೈತ್ರಿ ಸರ್ಕಾರ ಕಳೆದ ತಿಂಗಳೇ ಘೋಷಿಸಿತ್ತು.

ಇಲ್ಲಿನ ರಾಮ್ ಗಣೇಶ್ ಗಡ್ಕರಿ ರಂಗಯತನ್ ಸಭಾಂಗಣದಿಂದ ಯಾತ್ರೆ ಆರಂಭಗೊಂಡಿತು. ನೂರಾರು ಸಂಖ್ಯೆಯಲ್ಲಿದ್ದ ಯಾತ್ರಾರ್ಥಿಗಳು 'ನಾನು ಸಾವರ್ಕರ್' ಎಂಬ ಬರಹವಿದ್ದ ಟೋಪಿಯನ್ನು ಧರಿಸಿದ್ದರು. ಸುಮಾರು 200 ಬೈಕುಗಳು ಹಾಗೂ 100 ಆಟೊರಿಕ್ಷಾಗಳು ಯಾತ್ರೆಯಲ್ಲಿ ಭಾಗವಹಿಸಿದ್ದವು.

'ಸಾವರ್ಕರ್ ಇದ್ದ ಜೈಲಿನಲ್ಲಿ ಇದ್ದು ತೋರಿಸಲಿ': 'ಸ್ವಾತಂತ್ರ ಯೋಧ ಸಾವರ್ಕರ್ ಅವರನ್ನು ಅವಮಾನಿಸುವುದು ಎಂದರೆ ಪತ್ರಿಯೊಬ್ಬ ಭಾರತೀಯನನ್ನು ಅವಮಾನಿಸಿದಂತೆ. ಸಾವರ್ಕರ್ ಅವರನ್ನು ಇರಿಸಲಾಗಿದ್ದ ಜೈಲಿನಲ್ಲಿ ಯಾರಾದರು ಒಬ್ಬರು ಒಂದು ದಿನ ಇದ್ದು ತೋರಿಸಲಿ' ಎಂದು ಯಾತ್ರೆ ವೇಳೆ ಮಾತನಾಡಿದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ರಾಹುಲ್ ಗಾಂಧಿ ವಿರುದ್ಧ ಹರಿಹಾಯ್ದರು.

ಮಹಾರಾಷ್ಟ್ರದ ಠಾಣೆಯಲ್ಲಿ ಭಾನುವಾರ ನಡೆದ 'ಸಾವರ್ಕರ್ ಗೌರವ ಯಾತ್ರೆ'ಯಲ್ಲಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಯಾತ್ರಾರ್ಥಿಗಳತ್ತ ಕೈಬೀಸಿದರು —ಪಿಟಿಐ ಚಿತ್ರ

ರಾಹುಲ್, ದೇಶಪ್ರೇಮಿ ಸಾವರ್ಕರ್ ಆಗಲು ಸಾಧ್ಯವಿಲ್ಲ: ಮಿಶ್ರಾ

ಜೈಪುರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ, 'ನಾನು ಸಾವರ್ಕರ್ ಅಲ್ಲ' ಎಂಬ ಹೇಳಿಕೆಗೆ ತಿರುಗೇಟು ನೀಡಿರುವ ಬಿಜೆಪಿ ನಾಯಕ ಕಪಿಲ್ ಮಿಶ್ರಾ , 'ಅವರು ದೇಶಪ್ರೇಮಿ, ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಆಗಲು ಸಾಧ್ಯವೇ ಇಲ್ಲ' ಎಂದಿದ್ದಾರೆ.

'ಸನಾತನ ಸಂಸ್ಕೃತಿ ಮತ್ತು ಹಿಂದುತ್ವ'ದ ಕುರಿತು ನವ್ಯೋನ್ಮೇಶ್ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಹುಲ್ ನಿಜವಾದ ಗಾಂಧಿ ಕೂಡ ಅಲ್ಲ, ಸಾವರ್ಕರ್ ಆಗಲೂ ಸಾಧ್ಯವಿಲ್ಲ. ಏಕೆಂದರೆ ಸಾವರ್ಕರ್ ಆಗಲು ಮೊದಲು ದೇಶಪ್ರೇಮಿ ಆಗಿರಬೇಕು ಮತ್ತು 'ಅಖಂಡ ಸನಾತನ ಭಾರತ'ದ ಬಗ್ಗೆ ಅಚಲ ನಂಬಿಕೆ ಹೊಂದಿರಬೇಕು' ಎಂದು ಹೇಳಿದರು.

'ಮೊರಾದಾಬಾದ್ ವ್ಯಾಪಾರಿ 'ಆಗ್ರಾದ ಪೇಟ ಲಭ್ಯವಿದೆ' ಎಂಬ ನಾಮಫಲಕ ಹಾಕಿಕೊಂಡಂತೆ, ಇವರು 'ಗಾಂಧಿ' ಹೆಸರಿನ ನಾಮಫಲಕ ಇಟ್ಟುಕೊಂಡಿದ್ದಾರೆ. ಇದರಿಂದಾಗಿ ಇವರ 'ವ್ಯಾಪಾರ' ನಡೆಯುತ್ತಿದೆ' ಎಂದು ಟೀಕಿಸಿದರು.

ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ನಡುವಣ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ತಂಡದ ಆಟಗಾರರನ್ನು ಬೆಂಬಲಿಸಿದ ಅಭಿಮಾನಿಗಳು. (ಎಡಚಿತ್ರ) ಮುಂಬೈ ತಂಡದ ವಿಕೆಟ್ ಬಿದ್ದಾಗ ಆರ್‌ಸಿಬಿ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರಗಳು/ರಂಜು ಪಿ

ಚಿನ್ನಸ್ವಾಮಿ ಅಂಗಳದಲ್ಲಿ ಹರಿದ ಹರ್ಷದ ಹೊನಲು; ಅಭಿಮಾನಿಗಳಿಗೆ ಆರ್‌ಸಿಬಿ ಗೆಲುವಿನ ಕಾಣಿಕೆ

ವಿರಾಟ್ ಕೊಹ್ಲಿ– ಡುಪ್ಲೆಸಿ ಅಬ್ಬರ

• ಗಿರೀಶ ದೊಡ್ಡಮನಿ

ಬೆಂಗಳೂರು: ಮೂರು ವರ್ಷಗಳ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯವು 'ಮಾಯಾಲೋಕ' ಸೃಷ್ಟಿಸಿತು.

ಭಾನುವಾರ ರಾತ್ರಿ ಇಲ್ಲಿ ಪ್ರತಿಧ್ವನಿಸಿದ ಡಿಜೆ ಸಂಗೀತ, ಚಿಯರ್ ಲೀಡರ್‌ಗಳ ನೃತ್ಯ ಮತ್ತು ಹೊನಲು ಬೆಳಕಿನ ರಂಗಿನಿಂದಾಗಿ ಕ್ರೀಡಾಂಗಣ ಮನಮೋಹಕವಾಗಿತ್ತು. ಇದೆಲ್ಲಕ್ಕೂ ಕಳಶವಿಟ್ಟಂತೆ ಆತಿಥೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 8 ವಿಕೆಟ್‌ಗಳಿಂದ ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದಿತು. 16ನೇ ಆವೃತ್ತಿಯ ಐಪಿಎಲ್‌ನಲ್ಲಿ ಶುಭಾರಂಭ ಮಾಡಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಮುಂಬೈ ಇಂಡಿಯನ್ಸ್ ತಂಡವು, ತಿಲಕ್ ವರ್ಮಾ ಅರ್ಧಶತಕದ ಬಲದಿಂದ 171 ರನ್ ಗಳಿಸಿತ್ತು. ಆರ್‌ಸಿಬಿಯು ಈ ಗುರಿಯನ್ನು ಸುಲಭವಾಗಿ ಮುಟ್ಟಲು ಫಫ್ ಡುಪ್ಲೆಸಿ ಹಾಗೂ ವಿರಾಟ್ ಕೊಹ್ಲಿಯ ಅಬ್ಬರದ ಬ್ಯಾಟಿಂಗ್ ಕಾರಣವಾಯಿತು. ಕೊಹ್ಲಿ ಅಜೇಯ 82 ರನ್ ಗಳಿಸಿದರು. ತಂಡದ ನಾಯಕ ಫಫ್ ಡುಪ್ಲೆಸಿಯೂ ಹಿಂದೆ ಬೀಳಲಿಲ್ಲ. 43 ಎಸೆತಗಳಲ್ಲಿ 73 ರನ್ ಗಳಿಸಿದ್ದಲ್ಲದೇ ಮೊದಲ ವಿಕೆಟ್‌ಗೆ ಕೊಹ್ಲಿಯೊಂದಿಗೆ 148 ರನ್ ಸೇರಿಸಿದರು. ಕೊಹ್ಲಿ ಐದು ಮತ್ತು ಫಫ್ ಅರ್ಧ ಡಜನ್ ಸಿಕ್ಸರ್ ಬಾರಿಸಿದರು.

ದುಬಾರಿಯಾದ ಜೀವದಾನ: ಮುಂಬೈ ಇಂಡಿಯನ್ಸ್ ತಂಡದ ಸೋಲಿಗೆ ಅದರ ಆಟಗಾರರ ಕಳಪೆ ದರ್ಜೆಯ ಫೀಲ್ಡಿಂಗ್ ಕೂಡ ಕಾರಣವಾಯಿತು. ನಾಲ್ಕನೇ ಓವರ್ ಬೌಲಿಂಗ್ ಮಾಡಿದ ಜೋಫ್ರಾ ಆರ್ಚರ್ ಅವರು ವಿರಾಟ್ ಕೊಹ್ಲಿ ಕ್ಯಾಚ್ ಕೈಬಿಟ್ಟು ಪರಿತಪಿಸಿದರು. ಇದರ ಲಾಭವೆತ್ತಿದ ವಿರಾಟ್ ರನ್‌ಗಳನ್ನು ಸೂರೆ ಮಾಡಿದರು. ಅವರು 68 ರನ್ ಗಳಿಸಿದ್ದಾಗಲೂ ಫೀಲ್ಡರ್ ಹೃತಿಕ್ ಶೋಕಿನ್ ಸುಲಭ ಕ್ಯಾಚ್ ನೆಲಕ್ಕೆ ಚೆಲ್ಲಿದರು.

ಆರ್‌ಸಿಬಿ ತಂಡದ ನಾಯಕ ಫಫ್ ಡುಪ್ಲೆಸಿ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ

ಬ್ಯಾಟರ್‌ಗಳನ್ನು ರನ್‌ಔಟ್ ಮಾಡುವ ಕೆಲವು ಅವಕಾಶಗಳನ್ನೂ ರೋಹಿತ್ ಬಳಗ ಕೈಚೆಲ್ಲಿತು. ಓವರ್ ಥ್ರೋಗಳಿಂದಲೂ ರನ್‌ಗಳು ಸೋರಿದವು.

ಜೋಫ್ರಾ ಸೇರಿದಂತೆ ಆರು ಬೌಲರ್‌ಗಳನ್ನು ಫಫ್ ಮತ್ತು ಕೊಹ್ಲಿ ದಂಡಿಸಿದರು. ಸೂರ್ಯಕುಮಾರ್ ಯಾದವ್ ಬದಲಿಗೆ ಇಂಪ್ಯಾಕ್ಟ್ ಪ್ಲೆಯರ್ ಆಗಿ ಕಣಕ್ಕಿಳಿದ ಜೇಸನ್ ಬೆಹ್ರನ್ ಡಾರ್ಫ್ ಕೂಡ ವಿಕೆಟ್ ಪಡೆಯಲಿಲ್ಲ.

15ನೇ ಓವರ್‌ನಲ್ಲಿ ಡುಪ್ಲೆಸಿಯ ವಿಕೆಟ್ ಪಡೆಯುವಲ್ಲಿ ಅರ್ಷದ್ ಖಾನ್ ಸಫಲರಾದರು. ಕ್ರೀಸ್‌ಗೆ ಬಂದ ದಿನೇಶ್ ಕಾರ್ತಿಕ್ ಖಾತೆ ತೆರೆಯದೆ ಔಟಾದರು. ವಿರಾಟ್ ಜೊತೆಗೂಡಿದ ಗ್ಲೆನ್ ಮ್ಯಾಕ್ಸ್‌ವೆಲ್ ಎರಡು ಸಿಕ್ಸರ್ ಸಿಡಿಸಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂತಸದ ಅಲೆ ಎಬ್ಬಿಸಿದರು.

ತಿಲಕ್ ಆಸರೆ: ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ಬೌಲರ್‌ಗಳು ಆರಂಭದಲ್ಲಿಯೇ ಮುಂಬೈಗೆ ಪೆಟ್ಟುಕೊಟ್ಟರು. ಸಿರಾಜ್ ಹಾಗೂ ಕರಣ್ ಶರ್ಮಾ ಉತ್ತಮ ಬೌಲಿಂಗ್ ಮಾಡಿದರು. ಇದರಿಂದಾಗಿ ಮುಂಬೈ ತಂಡವು 48 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು.

ಆದರೆ ಏಕಾಂಗಿ ಹೋರಾಟ ನಡೆಸಿದ ತಿಲಕ್ ವರ್ಮಾ 46 ಎಸೆತಗಳಲ್ಲಿ 84 ರನ್ ಗಳಿಸಿದರು. ಇದರ ಫಲವಾಗಿ ಮುಂಬೈ ಸ್ಪರ್ಧಾತ್ಮಕ ಮೊತ್ತ ಗಳಿಸಿತು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್: 7ಕ್ಕೆ171 (20 ಓವರ್)

ರೋಹಿತ್ ಸಿ ದಿನೇಶ್ ಬಿ ಆಕಾಶ್ 1 (10ಎ)
ಇಶಾನ್ ಸಿ ಪಟೇಲ್ ಬಿ ಸಿರಾಜ್ 10 (13ಎ, 4X2)
ಕೆಮರಾನ್ ಬಿ ಟಾಪ್ಲಿ 5 (4 ಎ., 4X1)
ಸೂರ್ಯಕುಮಾರ್ ಸಿ ಶಾಬಾಜ್ ಬಿ ಬ್ರೇಸ್‌ವೆಲ್ 15 (16ಎ, 4X1)
ವರ್ಮಾ ಔಟಾಗದೆ 84 (46ಎ, 4X9, 6X4)
ನೇಹಲ್ ಸಿ ಕೊಹ್ಲಿ ಬಿ ಶರ್ಮಾ 21 (13ಎ, 4X1, 6X2)
ಟಿಮ್ ಬಿ ಶರ್ಮಾ 4 (7ಎ)
ಹೃತಿಕ್ ಸಿ ಡುಪ್ಲೆಸಿ ಬಿ ಪಟೇಲ್ 5 (3ಎ, 4X1)
ಅರ್ಷದ್ ಔಟಾಗದೆ 15 (9ಎ, 6X1))
ಇತರೆ 11 (ನೋಬಾಲ್ 1, ವೈಡ್ 10)
ವಿಕೆಟ್ ಪತನ: 1–11 (ಇಶಾನ್ ಕಿಶನ್; 2.3), 2–16 (ಕ್ಯಾಮರಾನ್ ಗ್ರೀನ್; 3.3), 3–20 (ರೋಹಿತ್ ಶರ್ಮಾ; 5.2), 4–48 (ಸೂರ್ಯಕುಮಾರ್ ಯಾದವ್; 8.5), 5–98 (ನೇಹಲ್ ವಡೇರಾ; 13.5), 6–105 (ಟಿಮ್ ಡೇವಿಡ್; 15.3), 7–123 (ಹೃತಿಕ್ ಶೊಕೀನ್; 17.1)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–21–1, ರೀಸ್ ಟಾಪ್ಲಿ 2–0–14–1, ಆಕಾಶ್ ದೀಪ್ 3–0–29–1, ಹರ್ಷಲ್ ಪಟೇಲ್ 4–0–43–1, ಕರ್ಣ ಶರ್ಮಾ 4–0–32–2, ಮಿಚೆಲ್ ಬ್ರೇಸ್‌ವೆಲ್ 2–0–16–1, ಗ್ಲೆನ್ ಮ್ಯಾಕ್ಸ್‌ವೆಲ್ 1–0–16–0

ರಾಯಲ್ ಚಾಲೆಂಜರ್ಸ್ ಬೆಂಗಳೂರು 2ಕ್ಕೆ 172 (16.2 ಓವರ್)

ವಿರಾಟ್ ಔಟಾಗದೆ 82 (49ಎ, 4X6, 6X5)
ಫಫ್ ಸಿ ಡೇವಿಡ್ ಬಿ ಅರ್ಷದ್ 73 (43ಎ, 4X5, 6X6)
ದಿನೇಶ್ ಸಿ ವರ್ಮಾ ಬಿ ಗ್ರೀನ್ 0 (3ಎ)
ಮ್ಯಾಕ್ಸ್‌ವೆಲ್ ಔಟಾಗದೆ 12 (3ಎ, 6X2)
ಇತರೆ 5 (ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 1–148 (ಫಫ್ ಡುಪ್ಲೆಸಿ, 14.5), 2–149 (ದಿನೇಶ್ ಕಾರ್ತಿಕ್, 15.3)
ಬೌಲಿಂಗ್: ಜೇಸನ್ ಬೆಹ್ರೆನ್‌ಡಾರ್ಫ್ 3–0–37–0, ಅರ್ಷದ್ ಖಾನ್ 2.2–0–28–1, ಜೋಫ್ರಾ ಆರ್ಚರ್ 4–0–33–0, ಪಿಯೂಷ್ ಚಾವ್ಲಾ 4–0–26–0, ಕ್ಯಾಮರಾನ್ ಗ್ರೀನ್ 2–0–30–1, ಹೃತಿಕ್ ಶೊಕೀನ್ 1–0–17–0

ಫಲಿತಾಂಶ: ಆರ್‌ಸಿಬಿಗೆ 8 ವಿಕೆಟ್ ಗೆಲುವು

ಸಿರಾಜ್–ದಿನೇಶ್ ಡಿಕ್ಕಿ!

ಮುಂಬೈ ತಂಡದ ನಾಯಕ ರೋಹಿತ್ ಶರ್ಮಾ ಹತ್ತು ಎಸೆತಗಳನ್ನು ಆಡಿ ಕೇವಲ ಒಂದು ರನ್ ಗಳಿಸಿದರು. ರೋಹಿತ್ ತಮಗೆ ಲಭಿಸಿದ್ದ ಜೀವದಾನವನ್ನೂ ಸಮರ್ಥವಾಗಿ ಬಳಸಿಕೊಳ್ಳಲಿಲ್ಲ.

ಸಿರಾಜ್ ಬೌಲಿಂಗ್‌ನಲ್ಲಿ ರೋಹಿತ್ ಬ್ಯಾಟ್‌ಗೆ ಬಡಿದು ಎತ್ತರಕ್ಕೆ ಚಿಮ್ಮಿದ ಚೆಂಡನ್ನು ಹಿಡಿತಕ್ಕೆ ಪಡೆಯಲು ವಿಕೆಟ್ ಕೀಪರ್ ದಿನೇಶ್ ಕಾರ್ತಿಕ್ ಮತ್ತು ಸಿರಾಜ್ ಇಬ್ಬರೂ ಪ್ರಯತ್ನಿಸಿದರು. ಆದರೆ ಅವರಿಬ್ಬರೂ ಪರಸ್ಪರ ಡಿಕ್ಕಿ ಹೊಡೆದು ಬಿದ್ದರು. ಚೆಂಡೂ ನೆಲಕಚ್ಚಿತು.

ಬಟ್ಲರ್, ಸಂಜು ಅಬ್ಬರ; ಚಾಹಲ್ ಉತ್ತಮ ಬೌಲಿಂಗ್

ರಾಜಸ್ಥಾನಕ್ಕೆ ಮಣಿದ ಹೈದರಾಬಾದ್

ಹೈದರಾಬಾದ್ (ಪಿಟಿಐ): ಸಂಘಟಿತ ಆಟವಾಡಿದ ರಾಜಸ್ಥಾನ ರಾಯಲ್ಸ್ ತಂಡದವರು ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಗೆಲುವಿನ ಆರಂಭ ಮಾಡಿದರು.

ಇಲ್ಲಿಯ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ರಾಜಸ್ಥಾನ 72 ರನ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಪರಾಭವಗೊಳಿಸಿತು.

ಟಾಸ್ ಗೆದ್ದ ಹೈದರಾಬಾದ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಜಸ್ಥಾನ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 203 ರನ್ ಗಳಿಸಿತು. ಹೈದರಾಬಾದ್ ನಿಗದಿತ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 131 ರನ್ ಮಾತ್ರ ಗಳಿಸಿತು.

ಭರ್ಜರಿ ಜೊತೆಯಾಟ: ರಾಜಸ್ಥಾನ ತಂಡದ ಪರ ಬ್ಯಾಟಿಂಗ್ ಆರಂಭಿಸಿದ ಜೋಸ್ ಬಟ್ಲರ್ (54, 22ಎ, 4X7, 6X3) ಹಾಗೂ ಯಶಸ್ವಿ ಜೈಸ್ವಾಲ್ (54, 37ಎ, 4X9) ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ 5.5 ಓವರ್‌ನಲ್ಲಿ 85 ರನ್ ಗಳಿಸಿದರು. ಬಟ್ಲರ್ ಅವರು ಫಜಲ್‌ಹಕ್ ಫಾರೂಕಿ (41ಕ್ಕೆ 2) ಅವರಿಗೆ ವಿಕೆಟ್ ಒಪ್ಪಿಸಿದ ಬಳಿಕ ನಾಯಕ ಸಂಜು ಸ್ಯಾಮ್ಸನ್ (55, 32ಎ, 4X3, 6X4) ಜೊತೆಗೂಡಿದ ಜೈಸ್ವಾಲ್ 54 ರನ್ ಕಲೆಹಾಕಿದರು.

ಕೊನೆಯಲ್ಲಿ ಶಿಮ್ರಾನ್ ಹೆಟ್ಮೆಯರ್ (ಔಟಾಗದೆ 22) ಕಾಣಿಕೆ ನೀಡಿದ್ದರಿಂದ ತಂಡವು 200ರ ಗಡಿ ದಾಟಿತು. ಹೈದರಾಬಾದ್ ತಂಡಕ್ಕಾಗಿ ಟಿ.ನಟರಾಜನ್ ಕೂಡ ಎರಡು ವಿಕೆಟ್ ಗಳಿಸಿದರು.

ಸಂಜು ಸ್ಯಾಮ್ಸನ್ ಬ್ಯಾಟಿಂಗ್– ಎಎಫ್‌ಪಿ ಚಿತ್ರ

ದೊಡ್ಡ ಗುರಿ ಬೆನ್ನತ್ತಿದ ಹೈದರಾಬಾದ್ ತಂಡಕ್ಕೆ ವೇಗಿ ಟ್ರೆಂಟ್ ಬೌಲ್ಟ್ (21ಕ್ಕೆ 2) ಆರಂಭದಲ್ಲೇ ಆಘಾತ ನೀಡಿದರು. ಇನಿಂಗ್ಸ್ ಮೊದಲ ಓವರ್ ಮೇಡನ್ ಮಾಡಿದ ಅವರು ಅಭಿಷೇಕ್ ಶರ್ಮಾ ಹಾಗೂ ರಾಹುಲ್ ತ್ರಿಪಾಠಿ ಅವರ ವಿಕೆಟ್ ಕಬಳಿಸಿದರು. ಮಯಂಕ್ ಅಗರವಾಲ್ (27) ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಬಳಿಕ ತಂಡವು ಸ್ಪಿನ್ನರ್ ಯಜುವೇಂದ್ರ (17ಕ್ಕೆ 4) ಮೋಡಿಗೆ ಸಿಲುಕಿ 95 ರನ್‌ಗೆ 8 ವಿಕೆಟ್ ಕಳೆದುಕೊಂಡಿತು.

ಜಮ್ಮು ಕಾಶ್ಮೀರ ಜೋಡಿ ಅಬ್ದುಲ್ ಸಮದ್ (32) ಹಾಗೂ ಉಮ್ರಾನ್ ಮಲಿಕ್ (ಔಟಾಗದೆ 19) ಅವರಿಗೆ ಹೈದರಾಬಾದ್ ತಂಡದ ಸೋಲನ್ನು ಕೆಲಕಾಲ ಮುಂದೂಡಲು ಮಾತ್ರ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 203 (ಯಶಸ್ವಿ ಜೈಸ್ವಾಲ್ 54, ಜೋಸ್ ಬಟ್ಲರ್ 54, ಸಂಜು ಸ್ಯಾಮ್ಸನ್ 55, ಶಿಮ್ರಾನ್ ಹೆಟ್ಮೆಯರ್ ಔಟಾಗದೆ 22; ಫಜಲ್‌ಹಕ್ ಫಾರೂಕಿ 41ಕ್ಕೆ 2, ಟಿ.ನಟರಾಜನ್ 23ಕ್ಕೆ 2, ಉಮ್ರಾನ್ ಮಲಿಕ್ 32ಕ್ಕೆ 1). ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 131 (ಮಯಂಕ್ ಅಗರವಾಲ್ 27, ಹ್ಯಾರಿ ಬ್ರೂಕ್ 13, ಅಬ್ದುಲ್ ಸಮದ್ ಔಟಾಗದೆ 32, ಆದಿಲ್ ರಶೀದ್ 18, ಉಮ್ರಾನ್ ಮಲಿಕ್ ಔಟಾಗದೆ 19; ಟ್ರೆಂಟ್ ಬೌಲ್ಟ್ 21ಕ್ಕೆ 2, ಯಜುವೇಂದ್ರ ಚಾಹಲ್ 17ಕ್ಕೆ 4). ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 72 ರನ್‌ಗಳ ಜಯ

ತವರಿನಲ್ಲಿ ಚೆನ್ನೈಗೆ ಜಯದ ತವಕ

ಚೆನ್ನೈ (ಪಿಟಿಐ): ಮೊದಲ ಪಂದ್ಯದಲ್ಲಿ ಸೋಲಿನ ಕಹಿಯುಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಪುಟಿದೇಳುವ ತವಕದಲ್ಲಿದ್ದು, ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಲಖನೌ ಸೂಪರ್ ಜೈಂಟ್ಸ್ ಸವಾಲು ಎದುರಿಸಲಿದೆ.

ತವರು ಅಂಗಣವಾದ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಮಹೇಂದ್ರ ಸಿಂಗ್ ನಾಯಕತ್ವದ ಬಳಗ ಗೆಲುವಿನ ವಿಶ್ವಾಸದಲ್ಲಿದೆ. ಮೊದಲ ಪಂದ್ಯದಲ್ಲಿ ಗೆದ್ದು ಆತ್ಮವಿಶ್ವಾಸದಲ್ಲಿರುವ ಕೆ.ಎಲ್. ರಾಹುಲ್ ನೇತೃತ್ವದ ಲಖನೌ ಕೂಡ ಜಯದ ಲಯ ಮುಂದುವರಿಸುವ ಛಲದಲ್ಲಿದೆ.

ನಾಲ್ಕು ಬಾರಿಯ ಚಾಂಪಿಯನ್ ಚೆನ್ನೈ, ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಶುಕ್ರವಾರ ಗುಜರಾತ್ ಟೈಟನ್ಸ್ ಎದುರು ಮಣಿದಿತ್ತು. ಋತುರಾಜ್ ಗಾಯಕವಾಡ್ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರು. ಆದರೆ ಉಳಿದವರಿಂದ ಅವರಿಗೆ ನಿರೀಕ್ಷಿತ ಬೆಂಬಲ ಲಭಿಸಿರಲಿಲ್ಲ.

ಮಹೇಂದ್ರ ಸಿಂಗ್ ಧೋನಿ

ಮೊದಲ ಪಂದ್ಯದಲ್ಲಿ ವಿಫಲರಾಗಿರುವ ಬೆನ್ ಸ್ಟೋಕ್ಸ್ ಸೇರಿದಂತೆ ಉಳಿದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯ ಸಾಬೀತುಪಡಿಸಬೇಕಿದೆ.

ಚಿರಪರಿಚಿತ ಎನಿಸಿರುವ ಪಿಚ್‌ನಲ್ಲಿ ಚೆನ್ನೈ ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ ಮತ್ತು ಮಿಚೆಲ್ ಸ್ಯಾಂಟ್ನರ್ ಮೋಡಿ ಮಾಡುವ ನಿರೀಕ್ಷೆಯಿದೆ.

ಶನಿವಾರ ನಡೆದ ತನ್ನ ಮೊದಲ ಪಂದ್ಯದಲ್ಲಿ ರಾಹುಲ್ ಬಳಗ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಪರಾಭವಗೊಳಿಸಿತ್ತು. ಕೈಲ್ ಮೇಯರ್ಸ್ ಬ್ಯಾಟಿಂಗ್ ಮತ್ತು ವೇಗಿ ಮಾರ್ಕ್ ವುಡ್ ಅವರ ಬೌಲಿಂಗ್ ಬಲದಿಂದ ತಂಡವು 50 ರನ್‌ಗಳಿಂದ ಗೆದ್ದಿತ್ತು.

ಇತ್ತೀಚಿಗೆ ರನ್ ಬರ ಎದುರಿಸುತ್ತಿರುವ ರಾಹುಲ್, ವೆಸ್ಟ್ ಇಂಡೀಸ್ ಬ್ಯಾಟರ್ ನಿಕೊಲಸ್ ಪೂರನ್ ಮತ್ತು ಮಾರ್ಕಸ್ ಸ್ಟೊಯಿನಿಸ್ ಅವರ ಮೇಲೆ ಲಖನೌ ತಂಡ ನಿರೀಕ್ಷೆಯಿಟ್ಟುಕೊಂಡಿದೆ. ಮಾರ್ಕ್, ಸ್ಪಿನ್ನರ್‌ಗಳಾದ ರವಿ ಬಿಷ್ಣೋಯಿ, ಕೆ. ಗೌತಮ್ ಮಿಂಚಿದರೆ ಗೆಲುವಿನ ಸಿಹಿ ಸವಿಯಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸ್ಪೋರ್ಟ್ಸ್ ಆ್ಯಪ್

ಮ್ಯಾಡ್ರಿಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಸಿಂಧುಗೆ ಒಲಿಯದ ಪ್ರಶಸ್ತಿ

ಮ್ಯಾಡ್ರಿಡ್ (ಪಿಟಿಐ): ದೀರ್ಘಕಾಲದ ಬಳಿಕ ಪ್ರಶಸ್ತಿ ಜಯಿಸುವ ಭಾರತದ ಪಿ.ವಿ. ಸಿಂಧು ಅವರು ಕನಸು ಕೈಗೂಡಲಿಲ್ಲ.

ಭಾನುವಾರ ಇಲ್ಲಿ ನಡೆದ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಸಿಂಧು 8–21, 8–21ರಿಂದ ಇಂಡೊನೇಷ್ಯಾದ ಗ್ರೆಗೊರಿಯಾ ತನ್‌ಜುಂಗ್ ಎದುರು ಮಣಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿರುವ ಇಂಡೊನೇಷ್ಯಾ ಆಟಗಾರ್ತಿ ಎದುರು ಸಿಂಧು ಈ ಹಿಂದೆ ಆಡಿದ ಎಲ್ಲಾ ಪಂದ್ಯಗಳಲ್ಲಿ ಜಯ ಸಾಧಿಸಿದ್ದರು. ಆದರೆ ಇಲ್ಲಿ ಸಂಪೂರ್ಣವಾಗಿ ವೈಫಲ್ಯ ಅನುಭವಿಸಿದರು.

ಮುಂದಿನ ತಿಂಗಳು ಪ್ಯಾರಿಸ್ ಒಲಿಂಪಿಕ್ಸ್ ಅರ್ಹತಾ ಪ್ರಕ್ರಿಯೆ ಆರಂಭವಾಗುವುದರಿಂದ ಈ ಟೂರ್ನಿಯ ಫೈನಲ್ ಪ್ರವೇಶವು ಸಿಂಧು ಅವರಿಗೆ ಒಂದಷ್ಟು ಆತ್ಮವಿಶ್ವಾಸ ತುಂಬಿತು.

ಕಳೆದ ವರ್ಷದ ಆಗಸ್ಟ್‌ನಲ್ಲಿ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಬಳಿಕ ಸಿಂಧು ಅವರಿಗೆ ಯಾವುದೇ ಪ್ರಶಸ್ತಿ ಒಲಿದಿಲ್ಲ. ಒಂದಷ್ಟು ದಿನ ಗಾಯವೂ ಅವರನ್ನು ಕಾಡಿತ್ತು.

ಈ ಪಂದ್ಯದ ಮೊದಲ ಗೇಮ್‌ನ ಆರಂಭದಲ್ಲಿ ಸಿಂಧು 1–5ರಿಂದ ಹಿನ್ನಡೆಯಲ್ಲಿದ್ದರು. ಆದರೆ ಬಳಿಕ 5–7ಕ್ಕೆ ಹಿನ್ನಡೆ ತಗ್ಗಿಸಿಕೊಂಡು ಪುಟಿದೇಳುವ ಸೂಚನೆ ನೀಡಿದರೂ ಯಶಸ್ವಿಯಾಗಲಿಲ್ಲ. ಚಾಣಾಕ್ಷ ಸ್ಟ್ರೋಕ್‌ಗಳ ಬಲದಿಂದ ತನ್‌ಜುಂಗ್ ಕೇವಲ 11 ನಿಮಿಷಗಳಲ್ಲಿ ಗೇಮ್ ಗೆದ್ದರು.

ಪಿ.ವಿ.ಸಿಂಧು

ಎರಡನೇ ಗೇಮ್‌ನ ಆರಂಭದಲ್ಲೂ ಸಿಂಧು 1–6ರ ಹಿನ್ನಡೆ ಅನುಭವಿಸಿದರು. ವಿರಾಮದ ವೇಳೆಗೆ ಇದು 3–11ಕ್ಕೆ ಸಾಗಿತು. ಬಳಿಕದ ಆಟದಲ್ಲೂ ಇಂಡೊನೇಷ್ಯಾ ಆಟಗಾರ್ತಿ ಪಾರಮ್ಯ ಮೆರೆದರು. ಪಂದ್ಯ ಗೆದ್ದು ಬೀಗಿದರು.

ಯುದ್ಧ: ಉಕ್ರೇನ್‌ನ 262 ಕ್ರೀಡಾಪಟುಗಳ ಸಾವು

ಕೀವ್ (ರಾಯಿಟರ್ಸ್): 'ರಷ್ಯಾದ ದಾಳಿ ಆರಂಭವಾದ ಬಳಿಕ ಇದುವರೆಗೆ ಉಕ್ರೇನ್‌ನ 262 ಕ್ರೀಡಾಪಟುಗಳು ಸಾವನ್ನಪ್ಪಿದ್ದಾರೆ' ಎಂದು ಉಕ್ರೇನ್‌ನ ಕ್ರೀಡಾ ಸಚಿವ ವ್ಯಾಡೆಮ್ ಹಟ್ಸೆಟ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ಫೆಡರೇಷನ್ ಅಧ್ಯಕ್ಷ ಮೊರಿನಾರಿ ವತನಬೆ ಅವರ ಭೇಟಿಯ ವೇಳೆ ಈ ವಿಷಯ ತಿಳಿಸಿದರು. 'ರಷ್ಯಾದ ದಾಳಿಯಿಂದ ಉಕ್ರೇನ್‌ನಾದ್ಯಂತ ಕ್ರೀಡಾಂಗಣಗಳು ಸೇರಿ 363 ಕ್ರೀಡಾ ಸೌಲಭ್ಯಗಳಿಗೆ ಹಾನಿ ಉಂಟಾಗಿದೆ' ಎಂದರು.

2022ರ ಫೆಬ್ರುವರಿಯಲ್ಲಿ ಯುದ್ಧ ಆರಂಭವಾದ ಬಳಿಕ ಉಕ್ರೇನ್‌ನ ಹಲವು ರಾಷ್ಟ್ರಮಟ್ಟದ ಕ್ರೀಡಾಪಟುಗಳು ದೇಶ ರಕ್ಷಣೆಗಾಗಿ ಶಸ್ತ್ರಾಸ್ತ್ರ ಕೈಗೆತ್ತಿಕೊಂಡಿದ್ದರು.

ಫಿಗರ್ ಸ್ಕೇಟಿಂಗ್ ಸ್ಪರ್ಧಿ ದಿಮಿತ್ರೊ ಶಾರ್ಪರ್ ಮತ್ತು ಡೆಕಥ್ಲಾನ್ ಅಥ್ಲೀಟ್ 22 ವರ್ಷದ ವೊಲೊಡಿಮಿರ್ ಆಂಡ್ರೊಶ್‌ಚುಕ್ ಅವರು ರಷ್ಯಾದ ದಾಳಿಗೆ ಈ ವರ್ಷ ಬಲಿಯಾದ ಪ್ರಮುಖ ಕ್ರೀಡಾಪಟುಗಳಾಗಿದ್ದಾರೆ.

ನೆನಪಿನಂಗಳಕ್ಕೆ ಜಾರಿದ 'ಪ್ರಿನ್ಸ್ ಸಲೀಂ'

ನವದೆಹಲಿ (ಪಿಟಿಐ): 'ಕ್ರಿಕೆಟಿಗ ಸಲೀಂ ದುರಾನಿ ಒಂದೊಮ್ಮೆ ತಮ್ಮ ಆತ್ಮಚರಿತ್ರೆಯನ್ನು ಬರೆದಿದ್ದರೆ 'ಆಸ್ಕ್ ಫಾರ್ ಎ ಸಿಕ್ಸ್' ಎಂಬ ಶೀರ್ಷಿಕೆ ನೀಡುತ್ತಿದ್ದರು' ಎಂದು ದಿಗ್ಗಜ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಹಿಂದೊಮ್ಮೆ ಹೇಳಿದ್ದರು.

1960 ಹಾಗೂ 70ರ ದಶಕಗಳಲ್ಲಿ ನಡೆಯುತ್ತಿದ್ದ ಟೆಸ್ಟ್ ಪಂದ್ಯಗಳಲ್ಲಿ ಭಾರತ ತಂಡದಲ್ಲಿ ಆಡುತ್ತಿದ್ದ ದುರಾನಿ ಅವರು ಸಿಕ್ಸರ್ ಸಿಡಿಸಲು ಆಗ್ರಹಿಸುವ ಅಭಿಮಾನಿಗಳ ಗ್ಯಾಲರಿಗೆ ಚೆಂಡನ್ನು ಎತ್ತುತ್ತಿದ್ದರು.

ಈಡನ್ ಗಾರ್ಡನ್‌ನಲ್ಲಿ ಸೇರುತ್ತಿದ್ದ 90 ಸಾವಿರ ಪ್ರೇಕ್ಷಕರಿರುವ ಗ್ಯಾಲರಿಯಿಂದ ಹೊರಹೊಮ್ಮುತ್ತಿದ್ದ 'ಸಿಕ್ಸರ್..ಸಿಕ್ಸರ್..' ಘೋಷಣೆಗೆ ದುರಾನಿ ಸ್ಪಂದಿಸುತ್ತಿದ್ದರು. ಅವರ ಬ್ಯಾಟ್‌ನಿಂದ ತಟ್ಟಿಸಿಕೊಂಡ ಚೆಂಡು ಲಾಂಗ್ ಆನ್ ಅಥವಾ ಡೀಪ್ ಮಿಡ್‌ವಿಕೆಟ್ ಗ್ಯಾಲರಿಗಳಲ್ಲಿ ಹೋಗಿ ಬೀಳುತ್ತಿತ್ತು.

ಟೆಸ್ಟ್ ಕ್ರಿಕೆಟ್ ಕಾಲದಲ್ಲಿಯೇ 'ಬಿರುಸಿನ ಹೊಡೆತಗಾರ'ನೆಂಬ ಹೆಗ್ಗಳಿಕೆ ಗಳಿಸಿದ್ದರು. 13 ವರ್ಷಗಳ ಕಾಲ ಭಾರತ ತಂಡದಲ್ಲಿ ಆಡಿದ ಅವರು 29 ಟೆಸ್ಟ್‌ಗಳಲ್ಲಿ 1200ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಎಡಗೈ ಸ್ಪಿನ್ನರ್ ಕೂಡ ಆಗಿದ್ದ ಅವರ ಖಾತೆಯಲ್ಲಿ 75 ವಿಕೆಟ್‌ಗಳಿವೆ.



ಸಲೀಂ ದುರಾನಿ

ದುರಾನಿ ಇನ್ನಿಲ್ಲ

ಭಾರತ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಸಲೀಂ ದುರಾನಿ (88) ಭಾನುವಾರ ಜಾಮನಗರದಲ್ಲಿ ನಿಧನರಾದರು.

ದುರಾನಿ ಅವರು ಈಚೆಗೆ ಬಿದ್ದು ತೊಡೆಯ ಮೂಳೆ ಮುರಿದಿತ್ತು. ಪ್ರಾಕ್ಸಿಮಲ್ ಫೆಮೊರಲ್ ನೇಲ್ ಶಸ್ತ್ರಚಿಕಿತ್ಸೆಯನ್ನೂ ಮಾಡಲಾಗಿತ್ತು.

ಅವರ ತಮ್ಮ ಜಹಾಂಗೀರ್ ದುರಾನಿ ಜಾಮನಗರದಲ್ಲಿದ್ದಾರೆ.

ಟೆಸ್ಟ್ ಪಂದ್ಯವೊಂದಕ್ಕೆ ₹300 ಸಂಭಾವನೆ ಪಡೆಯುತ್ತಿದ್ದ ಕಾಲಘಟ್ಟದಲ್ಲಿ ಆಟವನ್ನು ಮನಸಾರೆ ಆನಂದಿಸುವುದೊಂದೇ ದುರಾನಿಯವರ ಗುರಿಯಾಗಿತ್ತು. ತಮ್ಮ ನಡವಳಿಕೆಯಿಂದ ಅವರು 'ಪ್ರಿನ್ಸ್ ಸಲೀಂ' ಎಂದೇ ಜನಪ್ರಿಯ. ಆತ್ಮೀಯರಿಗೆ ಸಲೀಂ ಭಾಯ್.

ಅಫ್ಗಾನಿಸ್ತಾನದ ಕಾಬೂಲ್‌ನಲ್ಲಿ ಜನಿಸಿದ್ದ ಸಲೀಂ ಬೆಳೆದಿದ್ದು ಭಾರತದಲ್ಲಿ. ಅವರ ಕುಟುಂಬ ಭಾರತಕ್ಕೆ ವಲಸೆ ಬಂದಿತ್ತು. ಭಾರತ ತಂಡದಲ್ಲಿ ಆಡಿದ ಅಫ್ಗಾನಿಸ್ತಾನ ಮೂಲದ ಮೊದಲ ಕ್ರಿಕೆಟಿಗ ಅವರು.

1971ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಪದಾರ್ಪಣೆ ಮಾಡಿದ್ದ ಗಾವಸ್ಕರ್ 774 ರನ್ ಪೇರಿಸಿದ್ದರು. ಅದೇ ಸರಣಿಯಲ್ಲಿ ವಿಂಡೀಸ್ ದಿಗ್ಗಜರಾದ ಕ್ಲೈವ್ ಲಾಯ್ಡ್ ಹಾಗೂ ಸರ್ ಗ್ಯಾರ್ಫೀಲ್ಡ್ ಸೋಬರ್ಸ್ ಅವರ ವಿಕೆಟ್‌ಗಳನ್ನು ಒಂದೇ ಸ್ಪೆಲ್‌ನಲ್ಲಿ ಗಳಿಸಿದ್ದ ದುರಾನಿ ಮಿಂಚಿದ್ದರು. ಅದರಿಂದಾಗಿ ವಿಂಡೀಸ್ ಪತನಗೊಂಡಿತ್ತು. ಕೆರಿಬಿಯನ್ ನಾಡಿನಲ್ಲಿ ಭಾರತ ಮೊದಲ ಬಾರಿ ಪಂದ್ಯ ಜಯಿಸಿತ್ತು.

ಅದರ ನಂತರ ಇಂಗ್ಲೆಂಡ್ ಸರಣಿಯಲ್ಲಿ ಅವರನ್ನು ಆಡಿಸಲಿಲ್ಲ. ಇಂಗ್ಲೆಂಡ್ ಪಿಚ್‌ಗಳಿಗೆ ಅವರ ಕೌಶಲ ಸರಿಹೊಂದುವುದಿಲ್ಲವೆಂದು ಸಮಜಾಯಿಷಿ ಕೊಡಲಾಗಿತ್ತು.

ಈ ರೀತಿ ಅವರೊಂದಿಗೆ ಹಲವು ಬಾರಿ ಆಯಿತು. ಆದರೆ ಅವರ ಮುಖದ ಮೇಲಿನ ನಗು ಮಾಸಲಿಲ್ಲ. ತಮ್ಮ ಅಚ್ಚುಮೆಚ್ಚಿನ ಈಡನ್ ಗಾರ್ಡನ್‌ನಲ್ಲಿ ಅವರು ಶತಕ ಬಾರಿಸಿದರು. ಅದರ ನಂತರದ ಕಾನ್ಪುರ ಟೆಸ್ಟ್ ಪಂದ್ಯಕ್ಕೆ ಅವರನ್ನು ಕೈಬಿಡಲಾಯಿತು. ಆ ಪಂದ್ಯದಲ್ಲಿ ಸೇರಿದ್ದ ಜನರು 'ನೋ ಸಲೀಂ ನೋ ಟೆಸ್ಟ್' ಎಂಬ ಪ್ಲೆಕಾರ್ಡ್ ಪ್ರದರ್ಶಿಸಿದರು. ಸಲೀಂ ಅವರನ್ನು ಕೈಬಿಟ್ಟಿದ್ದನ್ನು ಖಂಡಿಸಿದರು. ಅಷ್ಟರ ಮಟ್ಟಕ್ಕೆ ಅವರು ಜನಪ್ರಿಯರಾಗಿದ್ದರು.

ತಂಡದಲ್ಲಿ ಬಿಷನ್ ಸಿಂಗ್ ಬೇಡಿ, ಬಿ.ಎಸ್. ಚಂದ್ರಶೇಖರ್, ಯರಪಳ್ಳಿ ಪ್ರಸನ್ನ ಮತ್ತು ಎಸ್. ವೆಂಕಟರಾಘವನ್ ಅವರು ಇದ್ದ ಕಾರಣ ದುರಾನಿ ಹೆಚ್ಚು ಬೌಲಿಂಗ್ ಮಾಡುತ್ತಿರಲಿಲ್ಲ.

ಆದರೆ ಜನರ ಆಗ್ರಹ ಕಂಡು ಅವರನ್ನು ನಂತರ ಮುಂಬೈ ಟೆಸ್ಟ್ ಪಂದ್ಯದಲ್ಲಿ ಆಡಿಸಲಾಯಿತು. ಅದರಲ್ಲಿ ಹತ್ತು ಬೌಂಡರಿ ಮತ್ತು ಎರಡು ಸಿಕ್ಸರ್ ಇದ್ದ 73 ರನ್‌ಗಳನ್ನು ಗಳಿಸಿದರು.

ರಣಜಿ ಟ್ರೋಫಿಯಲ್ಲಿ ಅವರು ರಾಜಸ್ಥಾನ, ಸೌರಾಷ್ಟ್ರ ಮತ್ತು ಗುಜರಾತ್ ತಂಡಗಳಲ್ಲಿ ಆಡಿದ್ದರು.

ಐಪಿಎಲ್‌ನಿಂದ ಕೇನ್ 'ಔಟ್'

ಅಹಮದಾಬಾದ್ (ಪಿಟಿಐ): ಗುಜರಾತ್ ಟೈಟನ್ಸ್ ತಂಡದ ಬ್ಯಾಟರ್, ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಅವರು ಮೊಣಕಾಲು ಗಾಯದ ಕಾರಣ ಐಪಿಎಲ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಶುಕ್ರವಾರ ನಡೆದ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಬೌಂಡರಿ ಲೈನ್ ಬಳಿ ಕ್ಯಾಚ್ ಮಾಡುವ ಸಂದರ್ಭದಲ್ಲಿ ಬಿದ್ದು ಕೇನ್ ಅವರ ಬಲ ಮೊಣಕಾಲಿಗೆ ನೋವಾಗಿತ್ತು. ಹೀಗಾಗಿ 13ನೇ ಓವರ್‌ನಲ್ಲಿ ಅವರು ಅಂಗಣ ತೊರೆದಿದ್ದರು.

'ಟೂರ್ನಿಯ ಆರಂಭದಲ್ಲೇ ಕೇನ್ ಅವರು ಗಾಯದ ಕಾರಣ ಹೊರಗುಳಿದಿದ್ದು, ನೋವಿನ ಸಂಗತಿ. ಅವರು ಶೀಘ್ರ ಗುಣಮುಖರಾಗಿ ಕ್ರಿಕೆಟ್‌ಗೆ ಮರಳಲಿ' ಎಂದು ಗುಜರಾತ್ ತಂಡದ ಕ್ರಿಕೆಟ್ ಚಟುವಟಿಕೆಗಳ ನಿರ್ದೇಶಕ ವಿಕ್ರಂ ಸೋಲಂಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೇನ್ ನ್ಯೂಜಿಲೆಂಡ್‌ಗೆ ತೆರಳಲಿದ್ದು, ಅಲ್ಲಿಯೇ ಹೆಚ್ಚಿನ ತಪಾಸಣೆಗೆ ಒಳಗಾಗಲಿದ್ದಾರೆ.

ಹಾಕಿ: ಮೇಕೇರಿರ ತಂಡಕ್ಕೆ ಗೆಲುವು

ನಾಪೋಕ್ಲು (ಕೊಡಗು): ಅಂತರರಾಷ್ಟ್ರೀಯ ಹಾಕಿ ಆಟಗಾರರು ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ತಮ್ಮ ತಂಡಗಳ ಪರವಾಗಿ ಆಡಿ ಮೆರುಗು ನೀಡಿದರು.

ಮೇಕೆರಿರ ತಂಡದ ಪರವಾಗಿ ಮೇಕೇರಿರ ನಿತಿನ್ ತಿಮ್ಮಯ್ಯ ಆಡಿದರು. ಅವರ ತಂಡವು 6-1ರಲ್ಲಿ ಚೇಯಕಪೂವಂಡ ತಂಡದ ವಿರುದ್ಧ ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ಪುದಿಯೊಕ್ಕಡ ಪ್ರಧಾನ್ ಸೋಮಣ್ಣ ತಂಡದ ಪರವಾಗಿ ಆಡಿ 1-0 ಅಂತರದಲ್ಲಿ ಬಾರಿಯಂಡ ವಿರುದ್ಧ ಪುದಿಯೊಕ್ಕಡಕ್ಕೆ ಗೆಲುವು ತಂದುಕೊಟ್ಟರು.

ಅಚ್ಚಪಂಡ ತಂಡದವರು 2-1ರಲ್ಲಿ ಬಿದ್ದಂಡ ತಂಡದವರ ವಿರುದ್ಧ ಜಯ ಸಾಧಿಸಿದರು. ಇಟ್ಟಿರ 2-0ರಲ್ಲಿ ಕೊಂಗೇಟಿರ ತಂಡದ ವಿರುದ್ಧ, ಕರವಟ್ಟಿರ 3-0ರಲ್ಲಿ ಕಲಿಯಾಟಂಡ ವಿರುದ್ಧ, ಕಳ್ಳಿಚಂಡ 1-0ರಲ್ಲಿ ಪುಲ್ಲಂಗಡ ವಿರುದ್ಧ ಜಯ ಗಳಿಸಿದವು.

ಚೆಕ್ಕೇರ 2-1ರಲ್ಲಿ ಬೊಳ್ಳೆಪಂಡ ವಿರುದ್ಧ, ಕಲಿಯಂಡ 1-0ರಲ್ಲಿ ಅಲ್ಲಂಡ ತಂಡದ ವಿರುದ್ಧ, ಮುರುವಂಡ 2-0ರಲ್ಲಿ ಅಲ್ಲಂಡ ವಿರುದ್ಧ, ಮುಕ್ಕಾಟಿರ (ಪುಲಿಕೋಟು) 2-0ರಲ್ಲಿ ಮಾರ್ಚಂಡ ವಿರುದ್ಧ, ಮಂಡೆಪಂಡ ಕೋದಂಡ ತಂಡದ ವಿರುದ್ಧ 4-1ರಲ್ಲಿ, ನೆಲ್ಲಮಕ್ಕಡ ಪಟ್ಟಡ ವಿರುದ್ಧ 4-1 ಅಂತರದಿಂದ ಗೆಲುವು ಸಾಧಿಸಿದವು.

ಅಂತರರಾಷ್ಟ್ರೀಯ ಹಾಕಿ ಪಟು ಪುದಿಯೊಕ್ಕಡ ಪ್ರಧಾನ್ ಸೋಮಣ್ಣ (ಬಿಳಿ–ಕಪ್ಪು ಜರ್ಸಿ ಧರಿಸಿದವರು) ಬಾರಿಯಂಡ ವಿರುದ್ಧ ಆಡಿದರು

ಮ್ಯಾರಥಾನ್: ಅಯಾನ, ಕಿಪ್ರಪ್ ಚಾಂಪಿಯನ್

ಪ್ಯಾರಿಸ್ (ಎಎಫ್‌ಪಿ): ಇಥಿಯೋಪಿಯದ ಅಬೆಜೆ ಅಯಾನ ಹಾಗೂ ಕೆನ್ಯಾದ ಹೆಲಾ ಕಿಪ್ರಪ್ ಅವರು ಭಾನುವಾರ ನಡೆದ ಪ್ಯಾರಿಸ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

20 ವರ್ಷದ ಅಯಾನ 42.195 ಕಿ.ಮೀ ದೂರವನ್ನು 2 ಗಂಟೆ 7.15 ನಿಮಿಷಗಳಲ್ಲಿ ಕ್ರಮಿಸಿದರು. ಇಲ್ಲಿ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿಕೊಂಡಿದ್ದ ಗುಯೆ ಅಡೊಲ ಎರಡನೇ ಸ್ಥಾನ ಪಡೆದರು. ಅವರು ಅಯಾನ ಅವರಿಗಿಂತ 20 ಸೆಕೆಂಡುಗಳ ಬಳಿಕ ಗುರಿ ಮುಟ್ಟಿದರು. ಕೆನ್ಯಾದ ಜೋಸೆಫಟ್ ಮೂರನೇ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಕಿಪ್ರಪ್ 2 ಗಂಟೆ 23.19 ನಿ.ಗಳಲ್ಲಿ ಗುರಿ ಮುಟ್ಟಿದರು.

ಜಾರ್ಜ್‌ಗೆ ಮೈಸೂರು ಓಪನ್ ಪ್ರಶಸ್ತಿ

• ಮೋಹನ ಕುಮಾರ್ ಸಿ.

ಮೈಸೂರು: ಬ್ರಿಟನ್‌ನ ಜಾರ್ಜ್ ಲಾಫ್‌ಹೇಗನ್ ಭಾನುವಾರ ಇಲ್ಲಿ ಮುಕ್ತಾಯವಾದ 'ಐಟಿಎಫ್-ಮೈಸೂರು ಓಪನ್' ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್(ಎಂಟಿಸಿ)ನಲ್ಲಿ ನಡೆದ ಫೈನಲ್‌ನಲ್ಲಿ ಲಾಫ್‌ಹೇಗನ್ ಅವರು 4-6, 6-2, 7-6ರಲ್ಲಿ ಆಸ್ಟ್ರೇಲಿಯಾದ ಬ್ಲೇಕ್ ಎಲಿಸ್ ವಿರುದ್ಧ ಗೆದ್ದು ಟ್ರೋಫಿಗೆ ಮುತ್ತಿಕ್ಕಿದರು.

ಬಲವಾದ ಸರ್ವ್, ಗ್ರೌಂಡ್ ಸ್ಟ್ರೋಕ್ ಹೊಡೆತಗಳಿಂದ ಕಾಡಿದ ಆಸ್ಟ್ರೇಲಿಯಾದ ಬ್ಲೇಕ್ ಮೊದಲ ಸೆಟ್ ಅನ್ನು ಸುಲಭವಾಗಿ ಗೆದ್ದರು. 2ನೇ ಸೆಟ್‌ನಲ್ಲಿ ತಿರುಗೇಟು ನೀಡಿದ ಜಾರ್ಜ್ 6-2ರಿಂದ ಜಯಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

ನಿರ್ಣಾಯಕ 3ನೇ ಸೆಟ್‌ನಲ್ಲಿ ಇಬ್ಬರೂ ಪ್ರಬಲ ಪೈಪೋಟಿಯ ಆಟವಾಡಿದರು. ಬ್ಲೇಕ್ 5-4ರಲ್ಲಿ ಮುನ್ನಡೆ ಕಾಯ್ದುಕೊಂಡಿದ್ದಾಗ ಪುಟಿದೆದ್ದ ಜಾರ್ಜ್ ಲಾಫ್‌ಹೇಗನ್ 5-5ರ ಸಮಬಲ ಸಾಧಿಸಿದರು. ಆಕರ್ಷಕ ಸರ್ವ್‌ಗಳ ಮೂಲಕ ಮೇಲುಗೈ ಸಾಧಿಸಿದರು. ಟೈ ಬ್ರೇಕ್ ಮೂಲಕ ಸೆಟ್ ವಶಪಡಿಸಿಕೊಂಡು ಟ್ರೋಫಿ ಜಯಿಸಿದರು.

'ಬ್ಲೇಕ್ ಉತ್ತಮವಾಗಿ ಆಡಿದರು. ಮೊದಲ ಸೆಟ್ ಸೋತಾಗ ಗೇಮ್ ಪ್ಲಾನ್ ಬದಲಿಸಿದೆ. ಸರ್ವ್‌ಗಳನ್ನು ಬ್ರೇಕ್ ಮಾಡಿ ಪಾಯಿಂಟ್ ಹೆಚ್ಚಿಸಿಕೊಂಡಿದ್ದು, ಆತ್ಮವಿಶ್ವಾಸ ಹೆಚ್ಚಿಸಿತು' ಎಂದು ಲಾಫ್‌ಹೇಗನ್ ಅವರು 'ಪ್ರಜಾವಾಣಿ' ಜೊತೆ ಸಂತಸ ಹಂಚಿಕೊಂಡರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ವಿಜೇತರಿಗೆ ₹2.95 ಲಕ್ಷ ಮೊತ್ತದ ಚೆಕ್ ನೀಡಿದರೆ, ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆಯ ಕಾರ್ಯದರ್ಶಿ ಮಹೇಶ್ವರ ರಾವ್ ಟ್ರೋಫಿ ವಿತರಿಸಿದರು.

ಮೈಸೂರು ಓಪನ್ ಟೂರ್ನಿಯಲ್ಲಿ ಗೆದ್ದ ಜಾರ್ಜ್ ಲಾಫ್‌ಹೇಗನ್ ಹಾಗೂ ರನ್ನರ್‌ಅಪ್ ಆಸ್ಟ್ರೇಲಿಯಾದ ಬ್ಲೇಕ್ ಎಲಿಸ್ ಟ್ರೋಫಿಯೊಂದಿಗೆ ನಗೆ ಬೀರಿದರು

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ
ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816

ಲೈಂಗಿಕ ಸಮಸ್ಯೆ
ಅಡ್ಡಪರಿಣಾಮಗಳಿಲ್ಲ
ಶಕ್ತಿ, ತಾಜಾತನ ಮತ್ತು ಪರಿಪೂರ್ಣ ಉತ್ಸಾಹದ ಮಧುರ ಬಾಂಧವ್ಯಕ್ಕಾಗಿ ಧನ್ವಂತರಿ ಆಯುರ್ವೇದ.
ಇಂದ್ರಿಯವನ್ನು 7-8 ಇಂಚು ಉದ್ದ 3-4 ಇಂಚು ದಪ್ಪ, ಸೆಕ್ಸ್ ಸಮಯ 30-40 ನಿಮಿಷ ಹೆಚ್ಚಿಸುತ್ತದೆ. 21 ರಿಂದ 75 ವರ್ಷದವರ ತನು-ಮನವನ್ನು ನವ ಯೌವನದಿಂದಿರುವಂತೆ ಮಾಡುತ್ತದೆ.
100% ಗ್ಯಾರಂಟಿ. ಅಂಗವರ್ಧಕ ಮಿಷಿನ್ ಲಭ್ಯವಿದೆ.
ಮಹಿಳೆಯರ ಆಕರ್ಷಕ ಸ್ತನವರ್ಧನೆಗೆ ಔಷಧಿ ದೊರೆಯುತ್ತದೆ.
ಈಗ ಕರ್ನಾಟಕದಲ್ಲಿ ಲಭ್ಯವಿದೆ.
ಬೆಲೆ 1575, 2100, 3150, 5250
7411506650